Presence of the Chief Minister in the Assembly.

Mr. SPEAKER.—It pleases me very much to say that I am happy to see the Hon'ble the Chief Minister Sri K. Hanumanthaiya, Leader of this House, amidst us after recovery from his recent illness.

PAPERS LAID ON THE TABLE

Notification dated 9th March 1953, under Section 24 of Mysore State Aid to Industries Act 1951.

Sri H. SIDDAVEERAPPA (Minister for Home and Industries).—Sir, as required by the second proviso to Sub-section 24 of the Mysore State Aid to Industries Act, 1951, I lay on the Table of the House a copy of Notification No. I. 4050—Ind. 153-52-2 dated 10th March 1953 which has been published in the *Mysore Gazette* dated 19th March 1953.

Sri J. MOHAMED IMAM (Jagalur).—Sir, I just want to seek some information from you, Sir. You may remember Sir, that I had tabled a special resolution...........

Mr. SPEAKER.—We will take it up.

Sri J. MOHAMED IMAM.—And also another motion regarding the statements...........

Mr. SPEAKER.—It will be taken up for consideration.

BUDGET FOR 1953-54—DEMANDS FOR GRANTS.

Mr. SPEAKER.—Voting of Demands for Grants for 1953-54. The demands proposed for to-day are 14 to 16 both inclusive. The cut motions which are proposed to be moved are as follows. —

2, 5, 6, 7, 8, 10, 13, 16, 18, 20, 23, 27, 30, 32, 34, 36, 43, 45 and 49.

Sri J. MOHAMED IMAM (Jagalur).—Sir, I think if we select only 2 or 3 cut motions for discussion, that would be enough from the experience gained.

Mr. SPEAKER.—That is left to members.

Demand No. 14 Administration of Justice.

27. ADMINISTRATION OF JUSTICE.

Mr. SPEAKER.—Motion moved.—

"That a sum not exceeding Rs. 23,85,700 be granted to the Government to defray the charges which will come in course of payment during the year ending 31st day of March 1954 in respect of 'Administration of Justice'."

Sri J. MOHAMED IMAM.—I wish to say also that I withdraw all the cut motions tabled by my party members so that the Congress members may move all their cut motions. If there is time we will speak on the demands.

Mr. SPEAKER.—But this list was prepared in consultation with your party!

Sri J. MOHAMED IMAM.—Now I find that there is no use in wasting the valuable time of the House. So, all the cut motions standing in the names of members of my party will be withdrawn.

Mr. SPEAKER.—That is all right. Sri H. K. Sivarudrappa may move his cut motion No 2.

Retransferring Civil and Criminal Jurisdiction of Heggaddevankote Taluk to Mysore.

*Sri H. K. SIVARUDRAPPA (Gundlupet-Heggaddevankote).—Sir, I beg to move,—

"That the demand under the head '27. Administration of Justice' for Rs. 23,85,700 be reduced by Rs, 100, (to bring to the notice of the Government the absolute necessity of re-transferring the Heggaddevankote Taluk to Mysore Taluk (civil and criminal jurisdiction)."

*Indicates that the speech has not been revised by the Member concerned.

(SRI H. K. SIVARUDRAPPA).

ಅಧ್ಯಕ್ಷರೇ, ಈ ಖೋತಾ ನಿರ್ಣಯವನ್ನು ಸಭೆಯ ಗಮನಕ್ಕೆ ತರುತ್ತಾ ಒಂದೆರಡು ಅಂಶಗಳನ್ನು ತಿಳಿಸಲಿಚ್ಛಿಸುತ್ತೇನೆ. ಈಗಾಗಲೇ ನ್ಯಾಯ ಮಂತ್ರಿಗಳು ಈ ವಿಚಾರದಲ್ಲಿ ಒಂದು ಸಮಿತಿಯನ್ನು ರಚಿಸಿ ಇದನ್ನೆಲ್ಲಾ ಪರಿಶೀಲಿಸುವುದಾಗಿ ವಾಗ್ದಾನ ಮಾಡಿದ್ದಾರೆ. ನಾನಾದರೂ ಈ ಖೋತಾ ನಿರ್ಣಯದ ಮೂಲಕ ಒಂದೆರಡು ಅಂಶಗಳನ್ನು ಹೇಳಬಯಸುತ್ತೇನೆ. ಈಗ ಹೆಗ್ಗಡದೇವನಕೋಟೆ, ಹುಣಸೂರು ಮತ್ತು ಕೃಷ್ಣರಾಜನಗರ—ಈ ಮೂರು ಸ್ಥಳಗಳಲ್ಲಿಯೂ ಒಂದೊಂದು ಮುನ್‌ಸೀಫ್ ಕೋರ್ಟ್ ಇದೆ. ಹೆಗ್ಗಡದೇವನಕೋಟೆಗೆ ಜನರು ಹೆಚ್ಚಾಗಿ ಹೋಗಿಬರಲು ಅವಕಾಶವಿದೆ. ಈ ಅವಕಾಶ ಹುಣಸೂರು ಮತ್ತು ಕೃಷ್ಣರಾಜನಗರಗಳಲ್ಲಿಲ್ಲ. ಅಲ್ಲದೆ ಕೃಷ್ಣರಾಜನಗರದ ಮುನ್‌ಸೀಫ್ ಕೋರ್ಟಿಗೆ ಸಾಕಾದಷ್ಟು ಕೆಲಸವೂ ಸಹ ಇಲ್ಲ. ಆದಕಾರಣ ಕೃಷ್ಣರಾಜನಗರದ ಮುನ್‌ಸೀಫ್ ಕೋರ್ಟನ್ನು ವಜಾಮಾಡಿ ಹುಣಸೂರಿಗೆ ಸೇರಿಸಿದರೆ ಒಳ್ಳೆಯದು. ಈ ಸಲಹೆಗೆ ಕೃಷ್ಣರಾಜನಗರ ತಾಲ್ಲೂಕಿನವರೂ ಸಹ ವಿರೋಧ ಬರಲಾರರು. ಈ ರೀತಿ ಮಾಡುವುದರಿಂದ ಸರ್ಕಾರಕ್ಕೆ ಖರ್ಚು ಕಡಮೆಯಾಗುತ್ತದೆ. ಆದಕಾರಣ ಈಗ ನನ್ನ ಸಲಹೆಗೆ ಮಾನ್ಯತೆ ಕೊಡಬೇಕೆಂದು ವಿನಂತಿ.

Mr. SPEAKER.-Cut-motion moved :

"That the demand be reduced by Rs. 100."

ಶ್ರೀ ಡಿ. ದೇವರಾಜ ಅರಸ್ (ಹುಣಸೂರು).—ಅಧ್ಯಕ್ಷರೇ, ಈಗತಾನೇ ಮಾತನಾಡಿದ ಶ್ರೀ ಎಚ್. ಕೆ. ಶಿವರುದ್ರಪ್ಪನವರು ಹೇಳಿದ ಅಂಶದಲ್ಲಿ ಸತ್ಯಾಂಶವಿದೆ. ನಾನು ಇದೇ ವಿಚಾರವಾಗಿ ಒಂದು ಪ್ರಶ್ನೆಯನ್ನು ಕಳುಹಿಸಿದ್ದೇನೆ. ಅದಕ್ಕೆ ಇನ್ನೂ ಉತ್ತರ ಬಂದಿಲ್ಲ. ಉತ್ತರ ಬಂದರೆ ಹುಣಸೂರು ಕೋರ್ಟಿಗೂ ಮತ್ತು ಕೃಷ್ಣರಾಜನಗರದ ಕೋರ್ಟಿಗೂ ಹೆಚ್ಚಿಗೆ ಕೆಲಸವಿಲ್ಲವೆಂಬುದು ವ್ಯಕ್ತವಾಗುತ್ತದೆ. ಹೆಗ್ಗಡದೇವನಕೋಟೆಯ jurisdiction ಮೊದಲು ಮೈಸೂರಿಗೆ ಇತ್ತು. ಇತ್ತೀಚೆಗೆ ಇದು ತಪ್ಪಿದ ಮೇಲೆ ಕೃಷ್ಣರಾಜನಗರದ ಕೋರ್ಟಿಗೂ ಕೆಲಸ ಕಡಮೆಯಾಯಿತು. ಈಗಲೂ ಸಹ ಹೆಗ್ಗಡದೇವನಕೋಟೆಯ Jurisdiction ಅನ್ನು ಮೈಸೂರಿಗೆ ಸೇರಿಸುವುದಾದರೆ ಕೃಷ್ಣರಾಜನಗರದ ಕೋರ್ಟ್ ಅನಾವಶ್ಯಕವೆಂದು ಭಾವಿಸುತ್ತೇನೆ.

ಆದ್ದರಿಂದ ಹಾಗೆ ಸರ್ಕಾರದವರೇನಾದರೂ ಅವರು ಹೇಳಿದ ಪ್ರಕಾರ ಹೆಗ್ಗಡದೇವನಕೋಟೆ ಜ್ಯೂರಿಸ್‌ಡಿಕ್ಷನ್ನನ್ನು ಮೈಸೂರಿಗೆ ಸೇರಿಸುವುದಾದರೆ ಕೃಷ್ಣರಾಜನಗರದಲ್ಲಿರತಕ್ಕ ಕೋರ್ಟು ಅನಾವಶ್ಯಕವಾಗುತ್ತದೆ ಎಂದು ಭಾವಿಸುತ್ತೇನೆ. ಆದ ಪ್ರಯುಕ್ತ ಕೃಷ್ಣರಾಜನಗರದಲ್ಲಿರತಕ್ಕ ಕೋರ್ಟು ತೆಗೆದು ಮಾಮೂಲಾಗಿ ಹುಣಸೂರು ಕೋರ್ಟಿಗೆ ಸೇರಿಸಿದ ಪಕ್ಷದಲ್ಲಿ ಸರ್ಕಾರದವರು ಆ ರೀತಿ ಮಾಡಬಹುದು, ಅಭ್ಯಂತರವಿಲ್ಲ ಎಂದು ಇಷ್ಟು ಮಾತ್ರ ಹೇಳುತ್ತೇನೆ.

Mr. SPEAKER.—Questions relating to the same subject were put day before yesterday and answered. In view of that and in view of the fact that the Hon'ble Minister is going to make a reply now, we can give him a chance.

ಶ್ರೀ ಎಸ್. ಎಚ್. ತಮ್ಮಯ್ಯ (ಕೃಷ್ಣರಾಜನಗರ)–ಸ್ವಾಮಿ, ನಾನು ಕೃಷ್ಣರಾಜನಗರದ ತಾಲ್ಲೂಕಿನ ಪ್ರತಿನಿಧಿ, ನನ್ನ ಅಭಿಪ್ರಾಯವನ್ನು ಸೂಚಿಸುತ್ತೇನೆ. ಕೃಷ್ಣರಾಜ ನಗರದಲ್ಲಿ ಕೋರ್ಟ್ ತೆರೆಯಬೇಕಾಗಿದ್ದರೆ, ನಮ್ಮ ತಾಲ್ಲೂಕಿನವರು ಕೋರ್ಟ್ ಬೇಡವೆಂದು ಸರ್ಕಾರದವರಿಗೆ ಮನವಿಮಾಡಿಕೊಂಡಿದ್ದರೂ ಏನು ಉದ್ದೇಶದಿಂದ ಸರ್ಕಾರದವರು ಕೋರ್ಟ್ ಅಲ್ಲಿಗೆ ಕೊಟ್ಟರೋ ಗೊತ್ತಿಲ್ಲ. ಶ್ರೀ ದೇವರಾಜ ಅರಸ್‌ರವರು ಅಪ್ಪಣೆ ಕೊಡಿಸಿರುವುದು ಸಾಧುವಾಗಿದೆ. ದಯವಿಟ್ಟು ಕೃಷ್ಣರಾಜನಗರದ ಕೋರ್ಟನ್ನು ತೆಗೆದು ಹುಣಸೂರಿಗೆ ಕೊಡಬೇಕೆಂದು ಸಲಹೆಮಾಡುತ್ತೇನೆ.

ಶ್ರೀ ಎ. ಜಿ. ರಾಮಚಂದ್ರರಾವ್ (ನ್ಯಾಯಾಂಗ ಮತ್ತು ವಿದ್ಯಾಶಾಖೆಗಳ ಮಂತ್ರಿಗಳು).—ಮಾನ್ಯ ಸದಸ್ಯರು ಮೂರು ಜನ ಹೇಳಿರುವುದೂ ಕೂಡ ಹೋದ ಸಲವೂ ಬಂದಿತ್ತು. ಈ ವಿಷಯದಲ್ಲಿ ಹೈಕೋರ್ಟ್‌ನವರೊಡನೆ ವ್ಯವಹಾರ ನಡೆಸುತ್ತಾ ಇದ್ದೇವೆ ಎಂದು ಹೇಳಿದ್ದೆ. ಹೈಕೋರ್ಟಿನಿಂದ 11-3-53ರಲ್ಲಿ, 8-10 ದಿವಸದ ಕೆಳಗೆ ಬಂದಿರುವ ಪತ್ರವನ್ನು ಓದಿದರೆ ಯಾರಿಗೂ ಶಂಕೆಗೆ ಅವಕಾಶವಿರುವುದಿಲ್ಲ.

" With reference to... .....I am directed to state that although the entire question No. 22, has been disallowed, there seems to be some force in it that some readjustment of jurisdiction is necessary so far as Heggadadevanakote is concerned."

ಮತ್ತು 'ಜ್ಯೂರಿಸ್‌ಡಿಕ್ಷನ್ ಬದಲಾವಣೆ ಆಗಬೇಕೆಂಬ ವಿಚಾರದಲ್ಲಿ ಮೈಸೂರು ದೇಶದ ಇತರ ಕಡೆಗಳಲ್ಲೂ ಇದೇ ರೀತಿ ಆಗಬೇಕಾಗಿರುವುದರಿಂದ ಅವನ್ನು ಕೂಲಂಕಷವಾಗಿ ಯೋಚನೆಮಾಡಿ ನಿರ್ಧಾರಕ್ಕೆ ಬರುವುದು ಸೂಕ್ತ, ಅದಕ್ಕೆ ಒಂದು ಸಮಿತಿಯನ್ನು ನೇಮಕಮಾಡಿ' ಎಂದು ಹೈಕೋರ್ಟಿನವರು ಸಲಹೆಕೊಟ್ಟಿದ್ದಾರೆ.

"In this connection, I am to invite kind reference to letter dated 9-3-53 regarding the constitution of a committee to go into the question of the re-distribution of territorial and pecuniary jurisdiction of the various courts in the State."

ಆದ್ದರಿಂದ ಇದು ಸರ್ಕಾರದವರ ಗಮನಕ್ಕೆ ಪೂರ್ಣವಾಗಿ ಬಂದಿದೆ. ಸಾಧ್ಯವಾದಷ್ಟು ಜಾಗ್ರತೆ ಇದನ್ನು ಪುನರ್ವ್ಯವಸ್ಥೆಗೊಳಿಸಲಾಗುತ್ತದೆ.

Sri H. K. SIVARUDRAPPA.—I seek leave to withdraw my cut motion.

The cut motion was, by leave, withdrawn.

Opening a Munsiff-Magistrate's Court at Kadur.

Sri Y. M. CHANDRASEKHARAIYA (Kadur).—Sir, I beg to move:

"That the demand under the head '27. Administration of Justice' for Rs. 23,85,700 be reduced by Rs. 100 (to bring to the notice of the Government the necessity to open a Munsiff-Magistrate's Court at Kadur, Chikmagalur District).

ಸ್ವಾಮಿ, ಈಗ ನಾಲ್ಕಾರು ವರ್ಷಗಳಿಂದ ಕಡೂರು ತಾಲ್ಲೂಕಿನವರು ಮ್ಯಾಜಿಸ್ಟ್ರೇಟ್ ಕೋರ್ಟ್ ಬೇಕೆಂದು ಅನೇಕಸಾರಿ ಮನವಿಮಾಡಿಕೊಂಡಿದ್ದೇವೆ. ಚಿಕ್ಕಮಗಳೂರು ಜಿಲ್ಲೆಯ ಜನಸಂಖ್ಯೆ ಸುಮಾರು 3 ಲಕ್ಷ 70 ಸಾವಿರ ಆದರೆ ಕಡೂರು ತಾಲ್ಲೂಕ್ ಜನಸಂಖ್ಯೆ $1\frac{1}{4}$ ಲಕ್ಷ ಆಗಿದೆ. ಕಡೂರು ತಾಲ್ಲೂಕಿನವರು ಚಿಕ್ಕಮಗಳೂರು ಡಿಸ್ಟ್ರಿಕ್ಟಿನ ತರೀಕೆರೆ, ನರಸಿಂಹರಾಜಪುರ ಮತ್ತು ಚಿಕ್ಕಮಗಳೂರಿನ ಮುನ್ಸಿಫ್-ಮ್ಯಾಜಿಸ್ಟ್ರೇಟ್ ಕೋರ್ಟುಗಳಿಗೆ ಹೋಗಬೇಕು. ಕಡೂರು ತಾಲ್ಲೂಕು ಸಾಮಾನ್ಯವಾಗಿ ನಾಲ್ಕು ಜಿಲ್ಲಾ ಪ್ರದೇಶಗಳಿಗೆ ಒಳಪಟ್ಟಿದೆ. ಕಡೂರು ತಾಲ್ಲೂಕಿನ ವಂಚನಹಳ್ಳಿ, ವಗೈರೆ ಗ್ರಾಮಗಳವರು, ಚಿಕ್ಕಮಗಳೂರು, ತರೀಕೆರೆ ನರಸಿಂಹರಾಜಪುರಕ್ಕೆ ಹೋಗಬೇಕಾದರೆ 80—100 ಮೈಲಿಗಳಾಗುತ್ತವೆ. ಕಡೂರು ತಾಲ್ಲೂಕಿನಲ್ಲಿರತಕ್ಕ ಜನರ ವ್ಯವಹಾರ ಪ್ರತಿಯೊಂದಕ್ಕೂ ಕೂಡ ಹೆಡ್‌ಕ್ವಾರ್ಟರು ಕಡೂರಿಗೆ ಬರಬೇಕು. ಚಿಕ್ಕಮಗಳೂರು ಕೋರ್ಟುಗಳೂ ಸಹ ಚಿಕ್ಕಮಗಳೂರಿನಲ್ಲೇ ಇವೆ. ಅನೇಕ ಸಾರಿ ಕೆಲವು ದಿನಗಳ ಹಿಂದೆ ಚೀಫ್ ಜಸ್ಟಿಸ್‌ರವರು ಬಂದ ಕಾಲದಲ್ಲೂ ಸಹ ಅರ್ಜಿ ಸಲ್ಲಿಸಿದ್ದೇವೆ. ಆದರೂ ಕಡೂರು ತಾಲ್ಲೂಕು ಇವೊತ್ತಿನವರಿಗೂ ಸರ್ಕಾರದವರ ಗಮನಕ್ಕೆ ಬಂದಿಲ್ಲ. ಅನೇಕ ಸಾರಿ ಚೀಫ್ ಮಿನಿಸ್ಟರು ಬಂದ ಕಾಲದಲ್ಲೂ ಸಹ ಅಂಕಿ ಅಂಶ ಕೊಟ್ಟು ಈ ವಿಷಯವನ್ನು ಮನದಟ್ಟು ಮಾಡಿದ್ದೇವೆ. ಒಂದುಸಾರಿ ತರೀಕೆರೆಗೆ ಹೋಗಿದ್ದಾಗ ಮುನ್ಸಿಫ್ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ರಾತ್ರಿ ಹತ್ತುಘಂಟೆ ಆಗಿದ್ದರೂ ಕಡೂರು ತಾಲ್ಲೂಕಿನ ಕೇಸುಗಳು ನಡೆಯುತ್ತಾ ಇದ್ದುವು. ಏಕೆಂದರೆ ಹೆಂಡ ವಗೈರೆ ಮಾರಕೂಡದು, ಕುಡಿಯಕೂಡದು ಎಂದು ಪಾನನಿರೋಧ ಮಾಡಿದ್ದೀರಿ. ಅದರ ಫಲವಾಗಿ ಮಿತಿ ಇಲ್ಲದಷ್ಟು ಕೇಸುಗಳು ಬರುತ್ತಿವೆ. ಹೀಗಾಗಿ ಚಿಕ್ಕಮಗಳೂರು, ತರೀಕೆರೆ, ನರಸಿಂಹರಾಜಪುರಗಳಿಗೆ ಕಡೂರು ತಾಲ್ಲೂಕಿನವರ ತಿರುಗಾಟ ವಿಪರೀತ ಜಾಸ್ತಿಯಾಗಿದೆ. ಚೀಫ್ ಜಸ್ಟಿಸ್‌ರವರು ಬಂದಾಗ ಕಡೂರಿನಲ್ಲಿರತಕ್ಕ ಶಾಸನ ಸಭೆ ಮೆಂಬರೂ ಅನೇಕ ಜನ ಮುಖಂಡರೂ ಹೋಗಿ ಅವರನ್ನು ಕಂಡು ಮನವಿ ಮಾಡಿಕೊಂಡರು. ಅವರು ಸಾಮಾನ್ಯವಾಗಿ ಅಂಕಿ ಅಂಶ ನೋಡಿ, ಆದರ ಮೇಲೆ, ಸರ್ಕಾರದವರಿಗೆ ಶಿಫಾರಸು ಮಾಡಿ ಎಂದು ಹೇಳಿದ್ದರು. ಇದೇ ಅಂಕಿ ಅಂಶವನ್ನು ಅರ್ಜಿಯನ್ನೂ ಕೂಡ ಮಂತ್ರಿಗಳಿಗೂ ಕೊಟ್ಟಿದ್ದೇವೆ. ಹಿಂದಿನ ಸರ್ಕಾರದಲ್ಲೂ ಸಹ ಮನವಿಮಾಡಿಕೊಂಡಿದ್ದರು. ಇಲ್ಲಿಯವರೆಗೂ ಆ ವಿಚಾರ ಗಮನಕ್ಕೆ ತೆಗೆದುಕೊಂಡಿಲ್ಲ. ಸಾಮಾನ್ಯವಾಗಿ ಕಡೂರು ತಾಲ್ಲೂಕಿನಲ್ಲಿ ಮೊದಲಿನಿಂದಲೂ ಕೂಡ, ನಮ್ಮ ಯಜಮಾನರ ಕಾಲದಿಂದಲೂ, ಕೇಸುಗಳು ಜಾಸ್ತಿ; ಕೋರ್ಟು ಕಚೇರಿ ಹತ್ತತಕ್ಕ ಜನ ಅಲ್ಲಿ ಜಾಸ್ತಿ ಇದ್ದಾರೆ. ಲಾಯರುಗಳಿಗೆ ಕಡೂರು ತಾಲ್ಲೂಕು ಕೇಸುಗಳೇ ಆಧಾರ. ಆ ಜನಗಳ ಜಾಯಮಾನ ಅಷ್ಟೆ. ನಮ್ಮ ಜಿಲ್ಲೆಯು ಬಹಳ ಇತಿಹಾಸ ಪ್ರಸಿದ್ಧವಾದ ಕಡೂರು ತಾಲ್ಲೂಕಿನ $1\frac{1}{4}$ ಲಕ್ಷ ಜನಸಂಖ್ಯೆ ಇರತಕ್ಕ ಪ್ರದೇಶಕ್ಕೆ ಮುನ್ಸಿಫ್-ಮ್ಯಾಜಿಸ್ಟ್ರೇಟ್ ಕೋರ್ಟ್ ಕೊಡಿ ಎಂದರೆ, 'ಇಲ್ಲ' ಎನ್ನುವುದಾದರೆ, ಅದರ ಅರ್ಥ ನನಗೆ ಗೊತ್ತಾಗುವುದಿಲ್ಲ. ಮೊನ್ನೆ 15 ದಿವಸಗಳ ಹಿಂದೆ ಅರಸೀಕೆರೆ ತಾಲ್ಲೂಕಿಗೆ ಕೋರ್ಟ್ ಬೇಕೆಂದು ಹೇಳಿ ವಂಚನಹಳ್ಳಿ ವಗೈರೆ ಗ್ರಾಮಗಳಿಗೆ ಅರಸೀಕೆರೆಯ ಕೆಲವು ಪ್ರಮುಖರು—ಅವರ ಹೆಸರು ಹೇಳುವುದಿಲ್ಲ—ಅರಸೀಕೆರೆಗೇ ಕೋರ್ಟು ಕೊಡಬೇಕೆಂದು ಪ್ರಚಾರಮಾಡಿದರು. ಆದರೆ ಅನೇಕ ಜನ ಹಳ್ಳಿಯವರು ಅರಸೀಕೆರೆಗೆ ಸೇರುವುದಿಲ್ಲ ಕಡೂರಿಗೇ ಸೇರುತ್ತೇವೆ ಎಂದು ಹೇಳಿದರು. ಸಾಮಾನ್ಯವಾಗಿ ಸರ್ಕಾರದವರು ಒಂದು ತಾಲ್ಲೂಕಿನ ವ್ಯಾಪ್ತಿಯನ್ನು ಇನ್ನೊಂದು ತಾಲ್ಲೂಕಿಗೆ ಬದಲಾಯಿಸಬೇಕಾದರೆ, ಅವರೂ ಕೂಡ ಮೈಸೂರು ದೇಶದಲ್ಲಿರತಕ್ಕ ಗ್ರಾಮ, ತಾಲ್ಲೂಕು, ಜನಸಂಖ್ಯೆ ಎಲ್ಲವನ್ನೂ ಗಮನಿಸಿಯೇ ಮಾಡಬೇಕಾಗುತ್ತದೆ. ನಾವೂ ಕೂಡ ನಮ್ಮ ತಾಲ್ಲೂಕಿಗೆ ಕೋರ್ಟು ಕೊಡುವಹಾಗೆ ಅದಕ್ಕೆ ಸಂಬಂಧಪಟ್ಟ ಇಲಾಖೆಯ ಮಂತ್ರಿಗಳಲ್ಲಿ ಮನವಿ ಮಾಡಿಕೊಳ್ಳುತ್ತೇವೆ ಎಂದು ಹೇಳಿದೆವು. ಈ ರೀತಿ ವ್ಯವಹಾರ ನಡೆಯುತ್ತಿದೆ, ಅದಕ್ಕೆ ಅವಕಾಶ ಕೊಡಕೂಡದು. ಕಡೂರು ತಾಲ್ಲೂಕಿಗೆ ಜರೂರಾಗಿ ಮುನ್ಸಿಫ್-ಮ್ಯಾಜಿಸ್ಟ್ರೇಟ್ ಕೋರ್ಟು ಕೊಡಬೇಕೆಂದು ಹೇಳಿ ಈ ದಿವಸ ನಮ್ಮ ತಾಲ್ಲೂಕಿನವರ ಪರವಾಗಿ ಅರಿಕೆ ಮಾಡಿಕೊಂಡಿದ್ದೇನೆ. ದಯವಿಟ್ಟು ಕೋರ್ಟು ಕೊಡಬೇಕೆಂದು ಹೇಳುತ್ತೇನೆ.

Mr. SPEAKER.—Cut motion moved:

"That the demand be reduced by Rs. 100."

ಶ್ರೀ ಎ. ಜಿ. ರಾಮಚಂದ್ರರಾಯರು (ನ್ಯಾಯಾಂಗ ಮತ್ತು ವಿದ್ಯಾಶಾಖೆಗಳ ಮಂತ್ರಿಗಳು).—ಸ್ವಾಮಿ, ಚಿಕ್ಕಮಗಳೂರು ಡಿಸ್ಟ್ರಿಕ್ಟಿನಲ್ಲಿ ಎರಡು ಮುನ್ಸಿಫ್ ಕೋರ್ಟುಗಳಿವೆ. ತರೀಕೆರೆಯಲ್ಲಿ ಒಂದು, ಚಿಕ್ಕಮಗಳೂರಿನಲ್ಲಿ ಒಂದು. ಚಿಕ್ಕಮಗಳೂರು ಮುನ್ಸಿಫ್ ಕೋರ್ಟಿಗೆ ಕೆಲಸ ಕಡಮೆ ಎಂದು ಹೇಳಿ ಹಾಸನ ಡಿಸ್ಟ್ರಿಕ್ಟಿನ ಬೇಲೂರಿನ ಕೆಲವು ಭಾಗ ಕೂಡ ಸೇರಿಸಿದೆ.

Sri L. SIDDAPPA (Chennagiri).—Even Narasimharajapura jurisdiction has been added on.

ಶ್ರೀ ಎ. ಜಿ. ರಾಮಚಂದ್ರರಾವ್.—ಈಗ ಕಡೂರಿನಲ್ಲಿ ಒಂದು ಕೋರ್ಟು ಸ್ಥಾಪನೆ ಮಾಡಿದರೆ ಸಾಕಾದಷ್ಟು ಕೆಲಸವಿದೆಯೋ ಮತ್ತು ಖರ್ಚು ಎಷ್ಟಾಗುತ್ತದೆ ಎಂಬುದನ್ನು ಯೋಚನೆ ಮಾಡಬೇಕು. ಜೊತೆಗೆ ಅವರು ಹೇಳಿದ ಹಾಗೆ, ಅರಸೀಕೆರೆಯವರೂ ಕೋರ್ಟು ಬೇಕೆಂದು ಕೇಳುತ್ತಾ ಇದ್ದಾರೆ. ಈ ವಿಷಯನ್ನು ಹೈಕೋರ್ಟಿನವರೊಂದಿಗೆ ಪುನಃ ಆಲೋಚನೆಮಾಡತಕ್ಕ ಕಾಲ ಬಂದರೆ ಇದನ್ನು ಆಲೋಚನೆ ಮಾಡುತ್ತೇವೆ. ಖರ್ಚು ಎಷ್ಟಾಗುತ್ತದೆ. ಜ್ಯೂರಿಸ್‌ಡಿಕ್ಷನ್ ಯಾವ ಯಾವ ರೀತಿ ಮಾರ್ಪಾಡು ಮಾಡಬೇಕು ಎಂಬುದನ್ನೆಲ್ಲಾ ಸಮಗ್ರವಾಗಿ ಪರ್ಯಾಲೋಚಿಸಬೇಕೆಂದು ತೀರ್ಮಾನ ಮಾಡಿದ್ದಾರೆ. ಆ ಸಮಿತಿ ಮುಂದೆ ಹೇಗೆ ತೀರ್ಮಾನ ಮಾಡುತ್ತದೋ ಅವರೆಗೂ ಅರಸೀಕೆರೆಯವರೂ ಕಡೂರಿ

(ಶ್ರೀ ಎ. ಜಿ. ರಾಮಚಂದ್ರರಾವ್.)

ನವರೂ ಎಲ್ಲರೂ ಕಾಯಬೇಕಾದದ್ದು ಸೂಕ್ತ ಎಂದು ಹೇಳಿ, ಈ ಖೋತಾ ನಿರ್ಣಯವನ್ನು ವಾಪಸು ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

Sri Y. M. CHANDRASEKHARAIYA.—I seek leave to withdraw my cut motion.

The cut motion was, by leave, withdrawn.

Inconveniences caused by having Munsiff-Magistrate courts instead of separate Civil and Criminal courts.

ಶ್ರೀ ಕೆ. ಪುಟ್ಟಸ್ವಾಮಿ (ಶ್ರೀರಂಗಪಟ್ಟಣ).—ಸ್ವಾಮಿ, ಈ ಖೋತಾ ಸೂಚನೆಯು ಈ ರೀತಿಯಾಗಿದೆ:—ಅದನ್ನು ಮಂಡಿಸುತ್ತೇನೆ.

"The demand under the head '27· Administration of Justice' for Rs. 23,85,000 be reduced by Rs. 100 (to raise a debate on the inconvenience caused by having Munsiff-Magistrate Courts instead of having separate Civil and Criminal Courts)."

ಸ್ವಾಮಿ, ಈ ವಿಚಾರದಲ್ಲಿ ನಾನು ಹೆಚ್ಚಿಗೆ ಮಾತನಾಡುವುದು ಅನವಶ್ಯಕ. ಮುನ್ಸೀಫ್-ಮ್ಯಾಜಿಸ್ಟ್ರೇಟರವರ ಕೋರ್ಟುಗಳು ಎಲ್ಲೆಲ್ಲಿರುತ್ತವೆಯೋ ಆ ಕೋರ್ಟುಗಳಲ್ಲೆಲ್ಲಾ ಸಿವಿಲ್ ಮತ್ತು ಕ್ರಿಮಿನಲ್ ಕೇಸುಗಳೆರಡನ್ನೂ ನಡೆಸುತ್ತಾರೆ. ಹೀಗಿರುವಾಗ ಕ್ರಿಮಿನಲ್ ಮೊಕದ್ದಮೆಗಳನ್ನು ವಾರಕ್ಕೆ ಎರಡು ದಿನಗಳು ಮಾತ್ರ ಇಟ್ಟುಕೊಳ್ಳುತ್ತಿದ್ದಾರೆ ಈ ಏಳು ದಿವಸಗಳಲ್ಲಿ ಎಲ್ಲಾ ಕೇಸುಗಳೂ ಮುಗಿಯುವುದಿಲ್ಲ. ಇದಕ್ಕಾಗಿ ಕೇಸುಗಳ ಹಿಯರಿಂಗ್ ತಾರೀಖನ್ನು ತಿಳಿಸುವಾಗ 15-20 ದಿವಸಗಳ ಮುಂದಕ್ಕೆ ಹಾಕಿ ತಾರೀಖನ್ನು ತಿಳಿಸಬೇಕಾಗಿದೆ. ಹೀಗಾಗಿ ಕ್ರಿಮಿನಲ್ ಮೊಕದ್ದಮೆಗಳು ವರ್ಷಾಂತರ ನಡೆಯಬೇಕಾಗಿರುತ್ತದೆ. ಹೀಗಾಗಿ ಕೋರ್ಟಿಗೆ ಮೊಕದ್ದಮೆಗಳನ್ನು ತರತಕ್ಕ ಪಾರ್ಟಿಗಳಿಗೆ ವಿಶೇಷವಾಗಿ ಹಣ ಖರ್ಚಾಗುವುದೊಂದೇ ಅಲ್ಲದೆ, ಅವರಿಗೆ ಹೆಚ್ಚಿನ ಕಾಲಹರಣವಾಗಿ, ಅವರಿಗೆ ಇದೊಂದು ಶಿಕ್ಷೆಯಾದಂತಿರುತ್ತದೆ. ಈ ದೃಷ್ಟಿಯಿಂದ ಕ್ರಿಮಿನಲ್ ಕೇಸುಗಳು ಜಾಗ್ರತೆ ಇತ್ಯರ್ಥವಾಗಬೇಕಾಗಿದ್ದರೆ ಸಿವಿಲ್ ಕೇಸುಗಳಿಗೆ ಎಷ್ಟು ಪ್ರಾಮುಖ್ಯತೆಯನ್ನು ಕೊಡಲಾಗುತ್ತಿದೆಯೋ ಅಷ್ಟನ್ನೂ ಇವುಗಳಿಗೂ ಕೊಡಬೇಕಾಗುತ್ತದೆ. ಅದರೆ, ಈಗ ಸಿವಿಲ್ ಕೇಸುಗಳಿಗೆ ಪ್ರಾಮುಖ್ಯತೆ ಕೊಡುತ್ತಿರುವಷ್ಟು ಕ್ರಿಮಿನಲ್ ಕೇಸುಗಳಿಗೆ ಕೊಡುವುದಿಲ್ಲ. ಕಮಿಟ್‌ಲ್ ಕೇಸುಗಳು, ಕಸ್ಟಡಿ ಕೇಸುಗಳು ಬೇಗ ಬೇಗ ತೀರ್ಮಾನವಾಗುತ್ತವೆ. ಇಂಥವು ಸಿವಿಲ್ ಕೇಸುಗಳಲ್ಲಿ ಎಷ್ಟು ಸರಿಯಾಗಿ ಮತ್ತು ಕ್ರಮವಾಗಿ ನಡೆಯುತ್ತಿವೆಯೋ ಅಷ್ಟು ಸರಿಯಾಗಿ ಉಳಿದ ಕ್ರಿಮಿನಲ್ ಕೇಸುಗಳು ನಡೆಯುತ್ತಿಲ್ಲ. ಎಷ್ಟೋ ಕಡೆ ಇಂಥ ತೊಂದರೆಗಳುಂಟಾಗಿರತಕ್ಕ ನಿದರ್ಶನಗಳು ಅನೇಕವಾಗಿವೆ.

ಈ ರೀತಿ ತೊಂದರೆಗಳಿರುವುದರಿಂದ ಈ ಮುನ್ಸಿಫ್-ಮ್ಯಾಜಿಸ್ಟ್ರೇಟ್ ಕೋರ್ಟುಗಳನ್ನು ಪ್ರತ್ಯೇಕ ಮಾಡುವುದು ಅತ್ಯಗತ್ಯವೆಂಬುದರಲ್ಲಿ ಯಾವ ಅನುಮಾನವೂ ಇಲ್ಲ. ಆದರೆ ಈ ಖೋತಾ ಸೂಚನೆಗಳ ವಿಷಯವಾಗಿ ಜನಾಬ್ ಮಹಮದ್ ಇಮಾಂರವರು ಒಂದು ಮಾತನ್ನು ಹೇಳಿದರು, "I do not want to waste the time of the House" ಎಂದು. ಅವರು ಈ ಖೋತಾ ಸೂಚನೆಗಳನ್ನು ತಂದು ಈ ಅಧಿವೇಶನದ ಕಾರ್ಯಕಲಾಪಗಳಿಗೆ ಅಡ್ಡಿಪಡಿಸಿದಂತಾಗಿ ವ್ಯಥಾ ಕಾಲಹರಣೆಗೆ ಅವಕಾಶಮಾಡಿದಂತಾಗುತ್ತದೆಂದು ಭಾವನೆಯನ್ನೂ ಸೂಚಿಸಿದರು. ಆದರೆ ಅದು ಸರಿಯಲ್ಲ ನಾವು ದೇಶದ ಪ್ರಜೆಗಳಿಗಿರತಕ್ಕ ತೊಂದರೆಗಳನ್ನು ಸರ್ಕಾರದವರ ಗಮನಕ್ಕೆ ತರುವ ಉದ್ದೇಶದಿಂದ ಈ ಖೋತಾ ನಿರ್ಣಯಗಳನ್ನು ಸಭೆಯ ಮುಂದೆ ತರುತ್ತೇವೆ. ಈ ಉದ್ದೇಶಕ್ಕಾಗಿ, ನಾನು ಜನರ ಕಷ್ಟಗಳ ಕಡೆಗೆ ಸರ್ಕಾರದವರ ಗಮನವನ್ನು ಸೆಳೆಯಲು ಈ ಸಭೆಯ ಮುಂದೆ ಈ ಖೋತಾ ನಿರ್ಣಯಗಳನ್ನು ಮಂಡಿಸುತ್ತಿದ್ದೇನೆ. ಸರ್ಕಾರದವರು ಅನುಕೂಲಪಡಿಸುತ್ತಾರೆಂದು ನಂಬಿದ್ದೇನೆ.

Mr. SPEAKER.—Cut motion moved:

"That the demand be reduced by Rs. 100."

ಶ್ರೀ ಎ. ಜಿ. ರಾಮಚಂದ್ರರಾಯರು (ನ್ಯಾಯಾಂಗ ಮತ್ತು ವಿದ್ಯಾಶಾಖೆಗಳ ಮಂತ್ರಿಗಳು).—ಸ್ವಾಮಿ, ಈ ಒಂದು ಅವಕಾಶ, ಸಂಸ್ಥಾನದ ನಾನಾ ಪ್ರದೇಶದ ಜನರು ತಮಗೆ ಮುನ್ಸಿಫ್-ಮ್ಯಾಜಿಸ್ಟ್ರೇಟರವರ ಕೋರ್ಟನ್ನು ಕೊಡಬೇಕೆಂದು ಬಹಳವಾಗಿ ಒತ್ತಾಯಪಡಿಸುತ್ತಿದ್ದ ಕಾರಣದಿಂದ ಇದು ಉದ್ಭವವಾಗಿರುತ್ತದೆ. ಈಗ ತಾನೆ ಮಾತನಾಡಿದ ಶ್ರೀಮಾನ್ ಪುಟ್ಟಸ್ವಾಮಿಯವರು ತಿಳಿಸಿದ ತೊಂದರೆಗಳು ಎಂದರೆ, ಸಿವಿಲ್ ಮತ್ತು ಕ್ರಿಮಿನಲ್ ಕೇಸುಗಳಲ್ಲಿ ತೀರ್ಮಾನ ಬಹಳ ನಿಧಾನವಾಗುತ್ತಿದೆ ಎಂಬ ದೂರುಗಳು, ಸರ್ಕಾರದವರ ಗಮನಕ್ಕೆ ಬಂದಿರುತ್ತವೆ. ಆದುದರಿಂದ ಈ ಎರಡನ್ನೂ ಬೇಗ ಪರಿಶೀಲನೆ ಮಾಡಲು ಕಾರ್ಯಕ್ರಮವನ್ನು ಕೈಕೊಳ್ಳುತ್ತೇವೆ. ನಾನು ಹಾಗೆ ಪರಿಶೀಲನೆ ಮಾಡುತ್ತೇವೆಂದು ಹೇಳುವಾಗ, 10 ವರ್ಷಗಳ ತನಕ ಬೇಕಾದರೂ ಪರಿಶೀಲನೆ ಮಾಡುತ್ತಿದ್ದೇವೆಂದು ಹೇಳುವುದಕ್ಕೆ ಅವಕಾಶವಿರುತ್ತದೆಯಾದರೂ. ಅಂಥ ಸಾವಕಾಶಕ್ಕೆ ಅವಕಾಶಕೊಡದೆ ಈ ಎರಡು ಕೇಸುಗಳನ್ನೂ ನಡೆಸುತ್ತಿರುವಂಥ ಕೋರ್ಟುಗಳು ಎಲ್ಲೆಲ್ಲಿರುತ್ತವೋ ಅವುಗಳ ಬಗ್ಗೆ ಕಾರ್ಯಕ್ರಮವನ್ನು ಕೈಕೊಂಡು ಆ ಕೇಸುಗಳ ವಿಚಾರಣೆಯನ್ನು ಬೇರೆ ಬೇರೆಯಾಗಿ ನಡೆಸುವಂತೆ ಒಂದು ಪಾಲಿಸಿಯನ್ನು ಜಾರಿಗೆ ತರಲು ಒಂದು ಸಮಿತಿಯನ್ನು ಏರ್ಪಾಡುಮಾಡಿ, ಆ ಸಮಿತಿಯವರು ಒಪ್ಪಿಸತಕ್ಕ ವರದಿಯ ಶಿಫಾರ್ಸುಗಳನ್ನು ನೋಡಿಕೊಂಡು ಒಂದು ಸೂಕ್ತವಾದ ಕಾನೂನನ್ನು ಜಾರಿಗೆ ತರಲಾಗುತ್ತದೆ. ಇಷ್ಟನ್ನೂ ನಾನು ಅವರಿಗೆ ತಿಳಿಸಿದ ನಂತರ ಅವರು ಈ ನಿರ್ಣಯವನ್ನು ಹಿಂದಕ್ಕೆ ತೆಗೆದುಕೊಳ್ಳುತ್ತಾರೆಂದು ಭಾವಿಸುತ್ತೇನೆ.

Sri K. PUTTASWAMI.—I seek leave to withdraw my cut motion.

The cut motion was, by leave, withdrawn.

A District and Sessions Court to Chitaldrug District.

ಶ್ರೀ ವಿ. ಮಸಿಯಪ್ಪ (ಹಿರಿಯೂರು).—ಸ್ವಾಮಿ, ನಾನು ನನ್ನ ಕತ್ತರಿ ನಿರ್ಣಯವನ್ನು ಸಭೆಯ ಮುಂದೆ ಮಂಡಿಸುತ್ತೇನೆ. ಅದು ಈ ರೀತಿಯಾಗಿದೆ.—

"The demand under the head '27· Administration of Justice' for Rs· 23,85,700 be reduced by Rs· 100 (in order to raise a debate on the necessity of giving a District and Sessions Court to Chitaldrug District"

ಸ್ವಾಮಿ, ಈ ನಿರ್ಣಯವನ್ನು ನಾನು ಸಭೆಯ ಮುಂದೆ ಮಂಡಿಸುತ್ತಾ ಒಂದೆರಡು ವಿಚಾರಗಳ ಬಗ್ಗೆ ಪ್ರಸ್ತಾಪಿಸಲಿಚ್ಛಿಸುತ್ತೇನೆ. ಸಾಧಾರಣವಾಗಿ ಇಂಥ ಬೇಡಿಕೆಗಳನ್ನು ಸಭೆಯಮುಂದೆ ಇಡತಕ್ಕ ಸಂದರ್ಭದಲ್ಲಿ ನಾವು ಸರ್ಕಾರದವರ ಅವಗಾಹನೆಗೆ ತರತಕ್ಕದ್ದು ಮುಖ್ಯವಾಗಿ ಮೂರು ಅಂಶಗಳು. ಆ ಮೂರು ಮುಖ್ಯ ಅಂಶಗಳಾವುವೆಂಬುದನ್ನು ನಾನೀಗ ತಿಳಿಸಲಿಚ್ಛಿಸುತ್ತೇನೆ.

ಮೊದಲನೆಯದಾಗಿ, ಈ ಸೆಷನ್ಸ್ ಮತ್ತು ಡಿಸ್ಟ್ರಿಕ್ಟ್ ಕೋರ್ಟುಗಳು ಈಗ ಹಾಲಿ ಎಲ್ಲೆಲ್ಲಿರುತ್ತವೆಯೋ ಅಂಥ ಸೆಷನ್ಸ್ ಮತ್ತು ಡಿಸ್ಟ್ರಿಕ್ಟ್ ಕೋರ್ಟುಗಳ ಜೂರಿಸ್ಡಿಕ್ಷನ್ ಒಳಗಿರತಕ್ಕ ಪ್ರದೇಶಗಳು ಈ ಕೋರ್ಟುಗಳಿಗೆ ಎಷ್ಟೆಷ್ಟು ದೂರದಲ್ಲಿರುತ್ತವೆಂಬುದು ಒಂದನೆಯ ಅಂಶ. ಈಗ ಹೊಸದಾಗಿ ಒಂದು ಇಂಥ ಕೋರ್ಟನ್ನು ಮಾಡಿದರೆ, ಇಂಥ ಹೊಸ ಕೋರ್ಟಿನ ಅಧಿಕಾರ ವ್ಯಾಪ್ತಿಗೊಳಪಡತಕ್ಕ ಪ್ರದೇಶಗಳಲ್ಲಿ ಸಾಕಾದಷ್ಟು ಕೇಸುಗಳಿರುತ್ತವೆಯೋ, ಇಲ್ಲವೇ ಎಂಬುದು ಎರಡನೆಯ ಮುಖ್ಯಾಂಶ. ಹೀಗೆ ಹೊಸದಾಗಿ ಕೋರ್ಟುಗಳನ್ನು ಮಾಡುವುದರಿಂದ ಸರ್ಕಾರದ ಮೇಲೆ ಬರಬಹುದಾದ ಹಣಕಾಸಿನ ಜವಾಬ್ದಾರಿ, ಇದು ಮೂರನೆಯ ಮುಖ್ಯಾಂಶ.

ನಾನು ಸರ್ಕಾರದವರನ್ನು ಸಮಜಾಯಿಷಿಪಡಿಸುವುದಾದರೆ, ನಾನು ಕೇಳತಕ್ಕ ಕೋರಿಕೆಯು ತೀರ ಅತ್ಯಗತ್ಯವಾದುದೆಂಬುದನ್ನು ಯಾರೂ ಡಿಸ್‌ಪ್ಯೂಟ್‌ಮಾಡಲಾರರೆಂದು ನನಗೆ ಅನ್ನಿಸುತ್ತದೆ.

ಈಗ, ಉದಾಹರಣೆಗೆ, ನಮ್ಮ ಚಿತ್ರದುರ್ಗ ಜಿಲ್ಲೆಯು ಶಿವಮೊಗ್ಗ ಸೆಷನ್ಸ್ ಕೋರ್ಟಿನ ಜೂರಿಸ್ಡಿಕ್ಷನ್‌ನಲ್ಲಿದೆ. ಈ ಸಿವಿಲ್ ಮತ್ತು ಕ್ರಿಮಿನಲ್ ಕೇಸುಗಳ ಬಗ್ಗೆ ಚಿಕ್ಕಮಗಳೂರು, ಶಿವಮೊಗ್ಗ ಮತ್ತು ಚಿತ್ರದುರ್ಗ—ಈ ಮೂರು ಜಿಲ್ಲೆಗಳನ್ನು ಒಂದಾಗಿ ಲಗತ್ತುಮಾಡಿದ್ದಾರೆ. ನಮ್ಮ ಚಿತ್ರದುರ್ಗ ಜಿಲ್ಲೆಯಲ್ಲಿ 93 ಲಕ್ಷ ಪ್ರಜಾಸಂಖ್ಯೆಯಿರುತ್ತದೆಯೆಂಬುದನ್ನು ಯಾರೂ ವಿರೋಧಿಸಲಾರರು. ಮೊಳಕಾಲ್ಮುರು ತಾಲ್ಲೂಕು ಚಿತ್ರದುರ್ಗ ಜಿಲ್ಲೆಯ ಗಡಿ ಪ್ರದೇಶದಲ್ಲಿರುತ್ತದೆ. ಅಲ್ಲೇ ಪಕ್ಕದಲ್ಲಿ ರಾಂಪುರವಿದೆ. ಅಲ್ಲಿಂದ ಜನರು ಈ ಕೇಸುಗಳ ಇತ್ಯರ್ಥಕ್ಕಾಗಿ ಶಿವಮೊಗ್ಗಾಕ್ಕೆ ಬರಬೇಕಾದರೆ ಅವರಿಗೆ 110 ಮೈಲಿಗಳಿಗಿಂತ ಕಡಮೆ ದೂರವಾಗುವುದಿಲ್ಲ. ಇದೇ ರೀತಿ ಇನ್ನೂ ಚಿತ್ರದುರ್ಗಕ್ಕೆ ಸೇರಿರತಕ್ಕ ಕೆಲವು ಭಾಗಗಳು, ಎಂದರೆ ಸಿರಾಗಡಿ, ಹಿರಿಯೂರು ತಾಲ್ಲೂಕಿಗೆ ಸೇರಿರತಕ್ಕ ಭಾಗಗಳು, ಶಿವಮೊಗ್ಗಿಗೆ ಸುಮಾರು 90 ಮೈಲಿಗಳಿಗಿಂತಲೂ ಕಡಮೆಯಾಗುವುದಿಲ್ಲ. ಚಳ್ಳಕೆರೆ, ಹೊಸದುರ್ಗ, ಹೀಗೆ ತಾವು ಚಿತ್ರದುರ್ಗ ಜಿಲ್ಲೆಯಲ್ಲಿ ಯಾವ ಗಡಿಯ ಸರಹದ್ದಿನ ಗ್ರಾಮಗಳನ್ನು ತೆಗೆದುಕೊಂಡರೂ ಅವುಗಳ ದೂರ ಕನಿಷ್ಠಪಕ್ಷ 100 ಮೈಲಿಗಳಿಗಿಂತ ಕಡಮೆಯಿಲ್ಲವೆಂದು ಹೇಳಬೇಕಾಗುತ್ತದೆ. ಹೀಗೆ ಇಷ್ಟು ದೂರ ಪ್ರದೇಶದಲ್ಲಿರತಕ್ಕ ಜನರು, ಎಂದರೆ ಕಕ್ಷಿಗಾರರು ಶಿವಮೊಗ್ಗಾಕ್ಕೆ ಅವರ ಅತ್ಯಗತ್ಯವಾದ ಪ್ರತಿಯೊಂದು ಕೋರ್ಟು ವ್ಯವಹಾರಕ್ಕೂ, ಯಾವ ಒಂದು ಕೋರ್ಟು ಸ್ಟೇ ಆರ್ಡರನ್ನು ಪಡೆಯುವುದಕ್ಕೇ ಆಗಲಿ ಅಥವಾ ಒಂದು ರಿವಿಜನ್ ದಾಖಲ್ಮಾಡುವುದಕ್ಕೇ ಆಗಲಿ ಅಥವಾ ಒಂದು ದಾವಾ ದಾಖಲ್ಮಾಡುವುದಕ್ಕೇ ಆಗಲಿ, ಹೋಗಬೇಕೆಂದರೆ ದೊಡ್ಡ ದೊಡ್ಡ ಕೇಸುಗಳ ಕಕ್ಷಿಗಾರರಿಗೆ ಎಷ್ಟು ತೊಂದರೆಯಾಗುತ್ತಿದೆಯೆಂಬುದನ್ನು ತಾವು ಪರ್ಯಾಲೋಚಿಸಬೇಕಾಗಿದೆ. ಈಗ ಶಿವಮೊಗ್ಗಿಯ ಸೆಷನ್ಸ್ ಕೋರ್ಟಿನಲ್ಲಿ ನಡೆಯುತಕ್ಕ ಕೇಸುಗಳಲ್ಲೆಲ್ಲಾ ನಮ್ಮ ಚಿತ್ರದುರ್ಗ ಜಿಲ್ಲೆಯ ಕೇಸುಗಳೇ ಜಾಸ್ತಿ ಇರುತ್ತವೆ. ಈ ವಿಚಾರವನ್ನೂ ಮತ್ತು ಚಿತ್ರದುರ್ಗ ಜಿಲ್ಲೆಯ ಜನರಿಗೆ ಇದರಿಂದ ಉಂಟಾಗುತ್ತಿರುವ ತೊಂದರೆಗಳೆಷ್ಟೆಂಬುದನ್ನೂ ನಾವು ಆ ಜಿಲ್ಲೆಗೆ ಮೊನ್ನೆ ತಾನೆ ದಯಮಾಡಿಸಿದ್ದ ಇಂದಿನ ನ್ಯಾಯಾಂಗ ಸಚಿವರಾಗಿರತಕ್ಕ ಶ್ರೀಮಾನ್ ಎ. ಜಿ. ರಾಮಚಂದ್ರರಾಯರವರ ಗಮನಕ್ಕೂ ಮತ್ತು ಹಿಂದಿನ ಮಂತ್ರಿಮಂಡಲದಲ್ಲಿದ್ದ ಶ್ರೀಮಾನ್ ಕೆ. ಟಿ. ಭಾಷ್ಯಂರವರ ಗಮನಕ್ಕೂ ಮತ್ತು ಅಲ್ಲಿಗೆ ಇನ್ಸ್‌ಪೆಕ್ಷನ್ ಬಗ್ಗೆ ಆಗಾಗ್ಗೆ ಬರತಕ್ಕ ಹೈಕೋರ್ಟು ನ್ಯಾಯಾಧೀಶರುಗಳ ಗಮನಕ್ಕೂ ಮತ್ತು ಚೀಫ್ ಜಸ್ಟೀಸ್‌ರವರ ಗಮನಕ್ಕೂ ಪದೇ ಪದೇ ಲಿಖಿತ ಮೂಲಕವಾಗಿ ಸರ್ಕಾರದವರ ಗಮನಕ್ಕೂ ತರುತ್ತಲೇ ಇದ್ದೇವೆ. ಆದ್ದರಿಂದ ಇನ್ನು ಹೆಚ್ಚಿನ ಅರಿಕೆ ಅಂಶಗಳನ್ನೂ ನಾನು ಮತ್ತೆ ಇಲ್ಲಿ ಪಠಿಸಿ ಹೇಳತಕ್ಕದ್ದು ಅಗತ್ಯವಿಲ್ಲ. ಅಲ್ಲಿ ನಡೆಯುವ ಕ್ರಿಮಿನಲ್ ಅಪೀಲುಗಳಲ್ಲಿ ಬಹುಭಾಗ ಚಿತ್ರದುರ್ಗ ಜಿಲ್ಲೆಗೇ ಸಂಬಂಧಪಟ್ಟವುಗಳೆಂಬುದಾಗಿ ಖಚಿತವಾಗಿ ವ್ಯಕ್ತಪಟ್ಟಿರುತ್ತದೆ.

10 A. M.

ಈ ಸಂದರ್ಭದಲ್ಲಿ ಇನ್ನೊಂದು ವಿಚಾರ ಹೇಳುವುದಿದೆ. ಮಾನ್ಯ ಗೃಹ ಶಾಖಾ ಸಚಿವರು ಅದೇ ಜಿಲ್ಲೆಯವರೇ ಆಗಿರುವುದರಿಂದ ಅವರಿಗೆ ಆ ಜಿಲ್ಲೆಯ ವಿಷಯದಲ್ಲಿ ಹೆಚ್ಚಿನ ಮಾಹಿತಿಯಿದೆ; ಹಾಗೂ ಅಲ್ಲಿನ ಕ್ರಿಮಿನಲ್ ಕೇಸುಗಳ ಕೆಲಸ ಎಷ್ಟರಮಟ್ಟಿಗಿದೆ ಎಂಬುದು ಅವರಿಗೆ ಗೊತ್ತೇ ಇದೆ. ಅದರ ಬಗ್ಗೆ ನಾನು ಪ್ರಸ್ತಾಪ ಮಾಡಬೇಕಾದ ಆವಶ್ಯಕತೆಯಿಲ್ಲ. ಇಡೀ ದೇಶಕ್ಕೇ ಗೊತ್ತಿದೆ, ಹೇಗೆ ಚಿತ್ರದುರ್ಗ ಜಿಲ್ಲೆಯ ಗಡೀ ಪ್ರದೇಶಗಳಲ್ಲಿ ಎಷ್ಟೋ ಖೂನಿಗಳೂ, ಲೂಟಿಗಳೂ ನಡೆದಿವೆ ಎಂಬುದು. ಈ ಬಗ್ಗೆ ಸೆಷನ್ಸ್ ಕೆಲಸ ಅಪಾರವಾಗಿ ಹೆಚ್ಚಿ, ಇದನ್ನು ತಡೆಗಟ್ಟಬೇಕೆಂಬ ದೃಷ್ಟಿಯಿಂದ ಅಲ್ಲಿ ಒಂದು ಡೆಪ್ಯುಟಿ ಇನ್ಸ್‌ಪೆಕ್ಟರ್ ಜನರಲ್ ಆಫ್ ಪೋಲೀಸ್ ಆಫೀಸನ್ನು ದಾವಣಗೆರೆಯಲ್ಲಿ ತೆರೆಯಬೇಕಾಗಿ ಬಂತೆಂಬುದು ಸರ್ಕಾರದವರಿಗೂ ಮತ್ತು ದೇಶದ ಜನತೆಗೂ ಗೊತ್ತಿರತಕ್ಕ ವಿಚಾರವಾಗಿದೆ. ಇಂಥ ಒಂದು ಪರಿಸ್ಥಿತಿಯಲ್ಲಿ ಚಿತ್ರದುರ್ಗ ಜಿಲ್ಲೆಯಲ್ಲಿ ದಿನೇ ದಿನೇ ಕ್ರಿಮಿನಲ್ ಮೊಕದ್ದಮೆಗಳು, ಅದರಲ್ಲೂ ಸೆಷನ್ಸ್‌ಗೆ ಬರತಕ್ಕ ಮೊಕದ್ದಮೆಗಳು, ಜಾಸ್ತಿಯಾಗುತ್ತಿರುವುದರಿಂದ ಅಲ್ಲಿಗೆ ತಾವು ಒಂದು ಡಿಸ್ಟ್ರಿಕ್ಟ್ ಮತ್ತು ಸೆಷನ್ಸ್ ಕೋರ್ಟನ್ನು ಏರ್ಪಡಿಸಿದರೆ ಅದಕ್ಕೆ ಕೆಲಸ ಯಾವ ಸಂದರ್ಭದಲ್ಲಿಯೂ ಕಡಮೆಯಿರುವುದಿಲ್ಲವೆಂದು ನಾನು ಸರ್ಕಾರದವರಿಗೆ ತಿಳಿಸಬಯಸುತ್ತೇನೆ.

ಇನ್ನು, ಮೂರನೆಯದಾಗಿ, financial commitment on the part of Government ಏನಾದರೂ ಇದೆಯೇ ಎಂದು ನೋಡುವುದು ಅವಶ್ಯಕ. ಈಗ ಪ್ರತಿಯೊಂದು ಅಂಶದಲ್ಲೂ ರಿಟ್ರೆಂಚ್

(ಶ್ರೀ ವಿ. ಮಸಿಯಪ್ಪ.)

ಮೆಂಟ್‌ನ್ನು ಆಲೋಚನೆ ಮಾಡಬೇಕೆನ್ನುವ ಸಮಯದಲ್ಲಿ ಈ ರೀತಿ ಹೊಸ ಹೊಸ ಜವಾಬ್ದಾರಿಯನ್ನು ಸರ್ಕಾರದವರ ಮೇಲೆ, ಶಾಸನ ಸಭಾಸದಸ್ಯರಾಗಿ ಎರಡೂ ವಿಧವಾದ ಜವಾಬ್ದಾರಿಯನ್ನು ಹೊತ್ತುಕೊಂಡಿರುವ ನಾವು ಹೊರಿಸುವುದು ಸೂಕ್ತವೇ ಎಂದು ಕೇಳಬಹುದು. ಆ ಬಗ್ಗೆಯೂ ನಾನು ಹೇಳಬಲ್ಲೆ. ಚಿತ್ರದುರ್ಗ ಜಿಲ್ಲೆಗೆ ಈ ರೀತಿ ಡಿಸ್ಟ್ರಿಕ್ಟ್ ಮತ್ತು ಸೆಷನ್ಸ್ ಕೋರ್ಟನ್ನು ಕೊಡುವುದರಿಂದ ಸರ್ಕಾರದವರಿಗೆ ಹಣಕಾಸಿನ ಜವಾಬ್ದಾರಿ ಯಾವ ರೀತಿಯಲ್ಲೂ ಜಾಸ್ತಿಯಾಗುವುದಿಲ್ಲ. ಹೇಗೆಂದರೆ, ಈ ಸಾಲಿನ ಬಡ್ಜೆಟ್ಟಿನ (Vol—I) 210ನೆಯ ಪುಟದಲ್ಲಿ ತಾವು ನೋಡುವುದಾದರೆ ಮೈಸೂರು ಸಂಸ್ಥಾನದಲ್ಲಿ ಹಾಲಿ 7 ಡಿಸ್ಟ್ರಿಕ್ಟ್ ಮತ್ತು ಸೆಷನ್ಸ್ ಜಡ್ಜ್‌ಗಳಿರುವುದು ಕಾಣಬರುತ್ತದೆ. ಫಸ್ಟ್‌ಗ್ರೇಡಿನವರು ಒಬ್ಬರು, ಸೆಕೆಂಡ್‌ಗ್ರೇಡಿನವರು ಒಬ್ಬರು, ಮೂರನೆಯ ಗ್ರೇಡಿನವರು ಐವರು. ಈ 7 ಜನರಲ್ಲದೆ ಹೌಸ್‌ರೆಂಟ್ ಕಂಟ್ರೋಲ್ ಕೇಸುಗಳಿಗಾಗಿ ಬೇರೊಬ್ಬರು ಡಿಸ್ಟ್ರಿಕ್ಟ್, ಸೆಷನ್ಸ್ ಜಡ್ಜರಿದ್ದಾರೆ. ಒಂದುವೇಳೆ ಹೌಸ್ ರೆಂಟ್ ಕಂಟ್ರೋಲ್ ಕೇಸ್‌ಗಳಿಗಾಗಿರುವ ಸೆಷನ್ಸ್ ಜಡ್ಜರನ್ನು ಬಿಟ್ಟರೂ ಕೂಡ, ಬಾಕಿ ಏಳು ಜನರನ್ನೇ ಸಮರ್ಪಕವಾದ ರೀತಿಯಲ್ಲಿ ಎಲ್ಲಾ ಡಿಸ್ಟ್ರಿಕ್ಟ್‌ಗಳಿಗೂ ಹಂಚುವುದಾದರೆ, ಚಿತ್ರದುರ್ಗ ಜಿಲ್ಲೆಯಲ್ಲಿ ಒಂದು ಡಿಸ್ಟ್ರಿಕ್ಟ್ ಮತ್ತು ಸೆಷನ್ಸ್ ಕೋರ್ಟನ್ನು ಏರ್ಪಡಿಸಿದರೂ ಹಾಲಿ ಇರತಕ್ಕ ಡಿಸ್ಟ್ರಿಕ್ಟ್ ಮತ್ತು ಸೆಷನ್ಸ್ ಜಡ್ಜರಿಂದಲೇ ಇನ್ನೂ ಹೆಚ್ಚಿನ ರೀತಿಯಲ್ಲಿ ನ್ಯಾಯಪಾಲನೆ ಮಾಡುವುದಕ್ಕೆ ಸಾಧ್ಯವಾಗುತ್ತದೆಂದು ಹೇಳಬಲ್ಲೆ.

ಅಲ್ಲದೆ ಇನ್ನೊಂದು ಅಂಶವನ್ನು ನಾವು ಈ ಸಂದರ್ಭದಲ್ಲಿ ಗಮನಕ್ಕೆ ತಂದುಕೊಳ್ಳಬೇಕು. ನಾನು ತಿಳಿದಿರುವಮಟ್ಟಿಗೆ ಬೆಂಗಳೂರು ಸಿಟಿಯಲ್ಲೇ ಮೂರು ಡಿಸ್ಟ್ರಿಕ್ಟ್ ಮತ್ತು ಸೆಷನ್ಸ್ ಜಡ್ಜರ ಕೋರ್ಟುಗಳು locate ಆಗಿವೆ. ನಾನೇನೂ ತುಮಕೂರಿನವರ ಪರವಾಗಿ ಈಗ ವಾದಮಾಡುತ್ತಿಲ್ಲವಾದರೂ, ತುಮಕೂರಿನವರು ಹೀಗೆ ಈ ಡಿಸ್ಟ್ರಿಕ್ಟ್ ಕೋರ್ಟ ತನ್ನ ಹೆಡ್ ಕ್ವಾರ್ಟರನ್ನು ಬೆಂಗಳೂರನ್ನಾಗಿ ಮಾಡಿಕೊಂಡಿರುವುದರಿಂದ ಎಷ್ಟು ತೊಂದರೆಯಾಗಿದೆಯೆಂದು ಅನೇಕ ಸಂದರ್ಭಗಳಲ್ಲಿ ಹೇಳಿದ್ದಾರೆ. ಆದ್ದರಿಂದ, ಬೆಂಗಳೂರು ಮೈಸೂರಿನಲ್ಲಿಯೇ ಒಟ್ಟಿಗೆ ಇಟ್ಟುಕೊಂಡಿರತಕ್ಕ ಡಿಸ್ಟ್ರಿಕ್ಟ್ ಮತ್ತು ಸೆಷನ್ಸ್ ಕೋರ್ಟುಗಳನ್ನು ಬೇರೆ ಬೇರೆ ಜಿಲ್ಲೆಗಳಿಗೆ ವರ್ಗಾಯಿಸಿದರೆ ಎಲ್ಲರಿಗೂ ಅನುಕೂಲ ಮಾಡಿದಂತಾಗುತ್ತದಲ್ಲದೆ, ಈ ಸಮಸ್ಯೆಯೂ ಬಗೆಹರಿದಂತಾಗುತ್ತದೆಂದು ನಾನು ಸರ್ಕಾರದವರಿಗೆ ಹೇಳಬಯಸುತ್ತೇನೆ.

ಇಷ್ಟು ಹೇಳಿದ ಮೇಲೆ, ಇನ್ನು ಡಿಸ್ಟ್ರಿಕ್ಟ್‌ಗಳನ್ನು ಯಾವರೀತಿ ವಿಂಗಡನೆ ಮಾಡುವುದು ಎಂಬುದನ್ನು ತಿಳಿಸಿಬಿಟ್ಟರೆ ಅಲ್ಲಿಗೆ ನನ್ನ ಕೆಲಸ ಪೂರ್ತಿಯಾಯಿತೆಂದು ಭಾವಿಸುತ್ತೇನೆ. ಹಾಲಿ ನಮ್ಮಲ್ಲಿ 7 ಜನ ಜಡ್ಜರುಗಳಿದ್ದಾರೆ. ಆದರೆ ಡಿಸ್ಟ್ರಿಕ್ಟ್‌ಗಳಿರುವುದು ಒಂಬತ್ತು. ಸಾಮಾನ್ಯವಾಗಿ ಮೈಸೂರು ಮತ್ತು ಮಂಡ್ಯ ಪ್ರಾರಂಭದಿಂದಲೂ ಒಂದೇ ಜಿಲ್ಲೆಯಾಗಿದ್ದು, ಅವರವರಿಗೆ ಸಂಪರ್ಕ ಜಾಸ್ತಿಯಿರುವುದರಿಂದ, ಅಲ್ಲದೆ ಮಂಡ್ಯ ಜಿಲ್ಲೆ ವಿಸ್ತೀರ್ಣದಲ್ಲಿ ಕಡಮೆಯಾಗಿರುವುದರಿಂದ ಮೈಸೂರು ಮತ್ತು ಮಂಡ್ಯ ಜಿಲ್ಲೆಗಳನ್ನು ಸೇರಿಸಿ ಅವೆರಡರಿಂದ ಒಂದು ಕೋರ್ಟನ್ನು ಏರ್ಪಡಿಸಬಹುದೆಂದು ಹೇಳಬಹುದು. ಹಾಗೆಯೇ ಚಿಕ್ಕಮಗಳೂರು ಜಿಲ್ಲೆಯೂ ಕೂಡ ವಿಸ್ತೀರ್ಣದಲ್ಲೂ ಮತ್ತು ವ್ಯವಹಾರದ ದೃಷ್ಟಿಯಿಂದಲೂ ಕಡಮೆಯಾಗಿರುವುದರಿಂದ ಹಾಲಿ ಇರುವಂತೆ ಶಿವಮೊಗ್ಗ ಜಿಲ್ಲೆಯಲ್ಲಿರುವ ಕೋರ್ಟಿನ ಮೂಲಕವೇ ನಡೆಸುವಂತೆ ಏರ್ಪಾಡು ಮಾಡಬಹುದು. ಅಲ್ಲಿಗೆ ಚಿತ್ರದುರ್ಗ ಜಿಲ್ಲೆಗೆ ಒಂದು ಸ್ವತಂತ್ರವಾದ ಡಿಸ್ಟ್ರಿಕ್ಟ್ ಮತ್ತು ಸೆಷನ್ಸ್ ಕೋರ್ಟನ್ನು ಕೊಡುವುದಕ್ಕೆ ಯಾವ ತೊಂದರೆಯೂ ಇರುವುದಿಲ್ಲ; ಸರ್ಕಾರದವರೂ ಕೂಡ ಬೇರೆ ಹೆಚ್ಚಿನ ಖರ್ಚಿಲ್ಲದೆ ಇರತಕ್ಕ ಜಡ್ಜರುಗಳಿಂದಲೇ ಇನ್ನೂ ದಕ್ಷತೆಯಿಂದ ನ್ಯಾಯಪರಿಪಾಲನೆ ಮಾಡಿದಂತಾಗುತ್ತದೆ. ಆದ್ದರಿಂದ ಈ ಕೋರಿಕೆಯನ್ನು ತೀವ್ರವಾಗಿ ಆಲೋಚನೆ ಮಾಡಿ ಅನೇಕ ಸಂದರ್ಭಗಳಲ್ಲಿ ಚಿತ್ರದುರ್ಗದ ಲಾಯರುಗಳಿಗೂ ಮತ್ತು ಲಾಯರುಗಳ ಸಂಘದವರಿಗೂ ಕೊಟ್ಟಿರುವ ಭರವಸೆಯನ್ನು ಈಡೇರಿಸಿಕೊಡಬೇಕೆಂದು ಸರ್ಕಾರದವರನ್ನು ಒತ್ತಾಯವಾಗಿ ಪ್ರಾರ್ಥಿಸುತ್ತಾ ಈ ಕತ್ತರಿ ನಿರ್ಣಯವನ್ನು ಮಂಡಿಸುತ್ತೇನೆ.

Mr. SPEAKER.—Cut motion moved:

"That the demand be reduced by Rs. 100"

ಶ್ರೀ ಎ. ಜಿ. ರಾಮಚಂದ್ರರಾವ್ (ನ್ಯಾಯಾಂಗ ಮತ್ತು ವಿದ್ಯಾಶಾಖೆಗಳ ಮಂತ್ರಿಗಳು).—ಸ್ವಾಮಿ, ಈ ಪ್ರಶ್ನೆಯೂ ಸಹ ಪರಿಶೀಲನೆಗೆ ಅರ್ಹವಾಗಿದೆಯೆಂದು ನಾನು ಮೊದಲಿನಲ್ಲೇ ಒಪ್ಪಿಕೊಳ್ಳುತ್ತೇನೆ. ಆದರೆ ಅವರು ವಾದಮಾಡಿದ್ದರಲ್ಲಿ ಹೇಳಿದ ಎಲ್ಲ ಅಂಶಗಳನ್ನೂ ನಾನು ಅಷ್ಟಾಗಿ ಒಪ್ಪಿಕೊಳ್ಳುವುದಕ್ಕಾಗುವುದಿಲ್ಲವೆಂದು ಹೇಳಬೇಕು.

ಮೊದಲನೆಯದಾಗಿ ಮೂರು ಡಿಸ್ಟ್ರಿಕ್ಟ್ ಮತ್ತು ಸೆಷನ್ಸ್ ಕೋರ್ಟುಗಳು ಎಲ್ಲೆಲ್ಲಿರಬೇಕೆಂದು ಮೊದಲಿನಿಂದಲೂ—ರೆಂಡಿಷನ್ ಆಗುವುದಕ್ಕೆ ಮುಂಚಿನ ಕಾಲದಿಂದಲೂ ಎಂದು ಹೇಳಬಹುದು--ಆಗಿನಿಂದಲೂ ನಗರ, ಅಷ್ಟಗ್ರಾಮ, ನಂದಿ ಎಂದು ಗೊತ್ತುಮಾಡಿ ಅದಕ್ಕೆ ಮೂರು ಮೂರು ಜಿಲ್ಲೆಗಳನ್ನು ವಿಂಗಡಣೆಮಾಡಿ ಸೇರಿಸಿದ್ದರು. ಈ ಹೆಡ್‌ಕ್ವಾರ್ಟರುಗಳು ಎಲ್ಲೆಲ್ಲಿದ್ದುವು ಎಂದು ಪ್ರಸ್ತಾಪಮಾಡುವುದಾದರೆ, ಇವು ರೈಲು, ಮೋಟಾರು ಮುಂತಾದ ವಾಹನ ಸೌಕರ್ಯಗಳಿಲ್ಲದಿರುವ ಸಂದರ್ಭದಲ್ಲಿ ಗೊತ್ತುಮಾಡಿದ್ದಂಥ ಜಾಗಗಳಾಗಿ, ಯಾವುದು ದೂರ ಎಂಬುದಾಗಿ ವ್ಯಕ್ತಪಡಿಸಿರುತ್ತಾರೆ, ಅದು—ಈಗ ರೈಲು ಮೋಟಾರು ಮುಂತಾದ ವಾಹನ ಸೌಕರ್ಯಗಳಿರುವಾಗ ದೂರ ಎಂದರೆ ಯಾರೂ ಒಪ್ಪತಕ್ಕ ಮಾತಲ್ಲ. ಆದರೆ ಎಲ್ಲಿ ಕೇಸುಗಳು ಹೆಚ್ಚಿಗೆ ನಡೆಯುತ್ತವೆಯೋ ಅಲ್ಲೇ ಈ ಕೋರ್ಟುಗಳು ಸ್ಥಾಪನೆಯಾಗಬೇಕೆಂಬುದೇನೋ ನಿಜ. ಈಗ ಶ್ರೀಮಾನ್ ಮಸಿಯಪ್ಪನವರು, ಚಿತ್ರದುರ್ಗ ಜಿಲ್ಲೆಯಿಂದಲೇ ಹೆಚ್ಚು ಭಾಗದ ಕೇಸುಗಳು ಬಂದು ಶಿವಮೊಗ್ಗ ಕೋರ್ಟಿನಲ್ಲಿ ನಡೆಯುತ್ತವೆ, ಆದ್ದರಿಂದ ಚಿತ್ರದುರ್ಗದಲ್ಲೇ ಈ ಕೋರ್ಟನ್ನು ನಡೆಸಬೇಕೆಂದು ಹೇಳಿದ್ದು ನ್ಯಾಯವಾದ ವಾದ. ನಾನೂ ಹಿಂದೆ ಚಿತ್ರದುರ್ಗಕ್ಕೆ ಹೋಗಿದ್ದಾಗ ಇದನ್ನು ಪರಿಶೀಲನೆ ಮಾಡುವುದಾಗಿ ಹೇಳಿದ್ದೆ. ಈಗಲೂ ಪರಿಶೀಲನೆ ಮಾಡುತ್ತಿದ್ದೇವೆ.

ಅವರು ಇನ್ನೊಂದು ವಾದವನ್ನು ಹೇಳಿದ್ದನ್ನು ನಾನು ಒಪ್ಪಲಾರೆ. ಈಗಿರುವ ಏಳು ಜಡ್ಜ್‌ಗಳನ್ನೇ ಎಲ್ಲಾ ಡಿಸ್ಟ್ರಿಕ್ಟ್‌ಗಳಿಗೂ ಒಬ್ಬೊಬ್ಬರನ್ನು ನೇಮಿಸಿ ಅವರಿಗೇ ಈ ಎಲ್ಲಾ ಕೆಲಸಗಳನ್ನು ಹೆಚ್ಚಿಗೆ ಖರ್ಚಿಲ್ಲದೆ ಹಂಚಬಹುದು ಎನ್ನುವುದು ಅಷ್ಟು ಸುಲಭವಲ್ಲ. ಎಲ್ಲಿ ಕೆಲಸ ಹೆಚ್ಚಿಗೆ ಇದೆಯೋ ಅಲ್ಲಿ ಹಾಕಿಬಿಟ್ಟರೆ ಆಗಲಲ್ಲ. ಅಲ್ಲಿಗೆ ಬೇರೆ ಸಿಬ್ಬಂದಿ, ಆಫೀಸು ವಗೈರೆ ಎಲ್ಲವನ್ನೂ

ಮಾಡಿಕೊಡಬೇಕಾಗುತ್ತದೆ. ಈಗ ಬೆಂಗಳೂರು ಸಿಟಿ ಎಂಬುದು ಬೆಂಗಳೂರು ಡಿಸ್ಟ್ರಿಕ್ಟ್, ತುಮಕೂರು ಡಿಸ್ಟ್ರಿಕ್ಟ್ ಮತ್ತು ಕೋಲಾರ ಡಿಸ್ಟ್ರಿಕ್ಟ್ ಇವು ಮೂರಕ್ಕೂ ಮಧ್ಯರಾಷ್ಟ್ರವಾಗಿರುವುದರಿಂದ ಇಲ್ಲಿ ಒಂದು ಕೋರ್ಟನ್ನು ಇಟ್ಟಿದೆ. ಇದನ್ನು ತೆಗೆದು ಮೂರು ಡಿಸ್ಟ್ರಿಕ್ಟಿಗೂ ಹಂಚಿಹಾಕಿದರೆ ಅದು ಮಧ್ಯರಾಷ್ಟ್ರದಲ್ಲಿರದೆ ಹೋಗಬಹುದು; ಸಿಬ್ಬಂದಿ ಖರ್ಚು ಹೆಚ್ಚಿಗೆ ಬೀಳಬಹುದು. ಒಟ್ಟಿನಲ್ಲಿ ಖರ್ಚು ಜಾಸ್ತಿಯಾಗುತ್ತದೆಂಬುದರಲ್ಲಿ ಸಂದೇಹವಿಲ್ಲ. ಜನರಿಗೆ ಅದರಿಂದ ಸಾಕಾದಷ್ಟು ಅನುಕೂಲವೂ ಲಭಿಸುವಂತಿರಬೇಕು. ಅಂತೂ, ಹೇಗಾದರೂ ಚಿತ್ರದುರ್ಗದ ಜನರಿಗೆ ಈ ವಿಷಯದಲ್ಲಿ ಪರಿಹಾರವನ್ನು ಕೊಟ್ಟು ಈಗಿರತಕ್ಕ ಕೆಲಸವನ್ನು ಹಂಚಬೇಕೆಂಬುದು ಪರಿಶೀಲನಾರ್ಹವಾಗಿದೆಯೆಂದು ಆಗಲೇ ಹೇಳಿದ್ದೇನೆ. ಇದಕ್ಕಾಗಿ ಒಂದು ಕಮಿಟಿಯನ್ನು ಏರ್ಪಾಡು ಮಾಡಬೇಕೆಂದು ಆಗಲೇ ಹೇಳಿದ್ದೇನೆ. ಅದರ ತೀರ್ಮಾನವನ್ನು ನಿರೀಕ್ಷಣೆ ಮಾಡುವುದು ಸೂಕ್ತವೆಂದು ಹೇಳಿ, ಇನ್ನು ಸೂಚಕರು ಈ ನಿರ್ಣಯವನ್ನು ವಾಪಸು ತೆಗೆದುಕೊಳ್ಳುವುದು ಸೂಕ್ತವೆಂದು ಹೇಳುತ್ತೇನೆ.

Sri V. MASIYAPPA.—I seek permission to withdraw my cut motion.

The cut motion was, by leave, withdrawn.

Necessity to record evidences in Courts in Kannada.

ಶ್ರೀ ವಿ. ವೆಂಕಟಪ್ಪ (ಚನ್ನಪಟ್ಟಣ).—ಈ ಕೆಳಗೆ ಕಾಣಿಸುವ ಖೋತಾನಿರ್ಣಯವನ್ನು ಮಂಡಿಸುತ್ತೇನೆ.

" '27, ನ್ಯಾಯ ಸಂಸ್ಥೆಗಳ ಆಡಳಿತ' ಎಂಬ ಬಾಬಿನಲ್ಲಿ ಸೇರಿರತಕ್ಕ 23,85,700 ರೂಪಾಯಿಗಳ 'ಡಿಮಾಂಡ್' ಮನವಿಯ ಸಂಬಂಧದಲ್ಲಿ 100 ರೂಪಾಯಿಗಳನ್ನು ಕಡಮೆ ಮಾಡಬೇಕು, (ಕೋರ್ಟುಗಳಲ್ಲಿ ಸಾಕ್ಷ್ಯಗಳನ್ನು ಕನ್ನಡ ಭಾಷೆಯಲ್ಲಿಯೇ ತೆಗೆದುಕೊಳ್ಳುವುದರ ಮತ್ತು ಓದುವುದರ ಸೂಕ್ತತೆಯನ್ನೂ ಒತ್ತಿ ಹೇಳುವುದಕ್ಕಾಗಿ).

ಈಗ ಅನೇಕ ಕೋರ್ಟುಗಳಲ್ಲಿ, ಪ್ರಾಯಶಃ ಎಲ್ಲಾ ಕೋರ್ಟುಗಳಲ್ಲಿಯೂ ಸಾಕ್ಷಿಗಳ ಹೇಳಿಕೆಯನ್ನು ಇಂಗ್ಲೀಷಿನಲ್ಲೇ ತೆಗೆದುಕೊಳ್ಳುತ್ತಿದ್ದಾರೆಂದು ಗೊತ್ತಿದೆ. ಹಿಂದೆ ಬೆಂಚ್‌ಕ್ಲಾರ್ಕುಗಳು ಕನ್ನಡದಲ್ಲಿ ಹೇಳಿಕೆಗಳನ್ನು ತೆಗೆದುಕೊಳ್ಳುತ್ತಿದ್ದರು. ಈಗ ಅದು ತಪ್ಪಿಹೋಗಿದೆ. ಇನ್ನು ಕೆಲವು ವರ್ಷಗಳಲ್ಲಿ ಎಲ್ಲ ಕೆಲಸಕಾರ್ಯಗಳೂ ಕೋರ್ಟುಗಳಲ್ಲಿ ಕನ್ನಡದಲ್ಲೇ ನಡೆಯಬೇಕೆಂಬ ನಿಯಮವಿದೆ. ಈಗಿನಿಂದಲೇ ಈ ಕಾರ್ಯವನ್ನು ಪ್ರಾರಂಭ ಮಾಡಬೇಕಾದುದು ಅಗತ್ಯ. ಇದಕ್ಕೆ ಅನುಕೂಲವಾಗುವ ರೀತಿಯಲ್ಲಿ ಈಗಿನಿಂದಲೇ ಕೆಲಸಮಾಡುವುದು ಅಗತ್ಯ. ಇಂಗ್ಲೀಷಿನಲ್ಲಿ ಹೇಳಿಕೆಗಳನ್ನು ಬರೆದುಕೊಂಡು ಓದಿದರೆ, ಸಾಕ್ಷಿಗಳು ತಾವು ಏನು ಹೇಳಿದ್ದಾರೆಂಬುದನ್ನು ಬರೆದುಕೊಂಡಿರುವುದು ಸರಿಯೋ ಇಲ್ಲವೋ ಎಂಬುದನ್ನು ತಿಳಿದುಕೊಳ್ಳುವುದಕ್ಕೂ ಕಷ್ಟವಾಗುತ್ತದೆ. ಅನೇಕ ಸಂದರ್ಭಗಳಲ್ಲಿ ತಿಳಿದುಕೊಳ್ಳುವುದಕ್ಕಾಗುವುದಿಲ್ಲ. ಏಕೆಂದರೆ ಅನೇಕ ವೇಳೆ ಓದುವುದೇ ಇಲ್ಲ. ಆ ವಿಷಯದಲ್ಲಿ ಹೆಚ್ಚು ಗೊತ್ತಿರುವುದರಿಂದ ಇದನ್ನು ಲಾಯರುಗಳಾದವರೂ ದಯವಿಟ್ಟು ಹೇಳಿದರೆ ಒಳ್ಳೆಯದು. ಆದುದರಿಂದ ಸಾಕ್ಷ್ಯಗಳನ್ನು ಕೋರ್ಟುಗಳಲ್ಲಿ ಕನ್ನಡದಲ್ಲೇ ಬರೆದುಕೊಳ್ಳಬೇಕು. ಅನೇಕ ಕಡೆಗಳಲ್ಲಿ ಬರೆದುಕೊಂಡುದನ್ನು ಓದಿ ಹೇಳುವ ಪದ್ಧತಿಕೂಡ ನಿಂತುಹೋಗಿದೆಯೆಂದು ಹೇಳುತ್ತಾರೆ. ಇದು ಸರಿಯಲ್ಲ. ದಯವಿಟ್ಟು ಕನ್ನಡದಲ್ಲಿ ಓದಿ ಹೇಳಬೇಕು. ಕನ್ನಡದಲ್ಲೇ ರಿಕಾರ್ಡ್ ಮಾಡಿಕೊಳ್ಳಬೇಕೆಂಬ ಸೂಚನೆಯನ್ನು ಸರ್ಕಾರದ ಮುಂದಿಟ್ಟಿದ್ದೇನೆ:

Mr. SPEAKER.—Cut Motion moved:

"That the demand be reduced by Rs. 100."

ಶ್ರೀ ಎ. ಜಿ. ರಾಮಚಂದ್ರರಾವ್ (ನ್ಯಾಯಾಂಗ ಮತ್ತು ವಿದ್ಯಾಶಾಖೆಗಳ ಮಂತ್ರಿಗಳು).—ಸ್ವಾಮಿ; ಶ್ರೀಮಾನ್ ವೆಂಕಟಪ್ಪನವರು ಸೂಚಿಸಿರುವ ನಿರ್ಣಯದ ತತ್ವವನ್ನು ನಾನು ಒಪ್ಪಿಕೊಳ್ಳುತ್ತೇನೆ. ಕೆಲವು ದಿವಸಗಳ ಹಿಂದೆ 'ಸಮ್ಮರಿ' ಕೇಸುಗಳಲ್ಲಿ ಇಂಗ್ಲಿಷಿನಲ್ಲಿಯೂ, 'ಒರಿಜಿನಲ್' ಕೇಸುಗಳಲ್ಲಿ ನ್ಯಾಯಾಧೀಶರು ಇಂಗ್ಲಿಷಿನಲ್ಲಿಯೂ ಮುನ್ಷಿಗಳು ಕನ್ನಡದಲ್ಲಿಯೂ ಸಾಕ್ಷ್ಯಗಳನ್ನು ಬರೆದುಕೊಳ್ಳುತ್ತಿದ್ದರು. ಕನ್ನಡದಲ್ಲೇ ಓದಿ ಹೇಳುತ್ತಿದ್ದರು. ಈ ಪದ್ಧತಿ ಯಾವ ಸಂದರ್ಭದಲ್ಲಿ ವ್ಯತ್ಯಾಸವಾಯಿತೋ ಗೊತ್ತಿಲ್ಲ. ಹೊಸ ರಾಜ್ಯಾಂಗ ಬಂದಮೇಲೆ ಹಿಂದಿದ್ದ ಪದ್ಧತಿಯೇ ಜಾರಿಗೆ ಬರುವುದು ಸೂಕ್ತವೆಂದು ಒಪ್ಪಿಕೊಳ್ಳುತ್ತೇನೆ. ಹೈಕೋರ್ಟಿನವರೊಡನೆ ವಿಚಾರಮಾಡಿ ಆದಷ್ಟು ಜಾಗ್ರತೆ ಇದನ್ನು ಜಾರಿಗೆ ತರುವುದಕ್ಕೆ ಪ್ರಯತ್ನ ಮಾಡುತ್ತೇವೆ.

Sri V. VENKATAPPA.—I seek leave to withdraw my cut motion.

The cut motion was by leave withdrawn.

Readjustment of jurisdiction and location of Courts in the State.

ಶ್ರೀ ಕೆ. ಪಂಚಾಕ್ಷರಯ್ಯ (ಅರಸೀಕೆರೆ).—ಸ್ವಾಮಿ,

"27 ನ್ಯಾಯ ಸಂಸ್ಥೆಗಳ ಆಡಳಿತ" ಎಂಬ ಬಾಬಿನಲ್ಲಿ ಕೋರಿರತಕ್ಕ 23,85,700 ರೂಪಾಯಿಗಳ 'ಡಿಮ್ಯಾಂಡ್' ಮನವಿಯ ಸಂಬಂಧದಲ್ಲಿ 100 ರೂಪಾಯಿಗಳನ್ನು ಕಡಮೆ ಮಾಡಬೇಕು. (ಸಂಸ್ಥಾನದಲ್ಲಿ ಕೋರ್ಟುಗಳ ಅಧಿಕಾರ ವ್ಯಾಪ್ತಿಯನ್ನೂ ಅವು ಸ್ಥಾಪಿತವಾಗಿರುವ ಸ್ಥಳಗಳನ್ನೂ ಪುನಃ ಅಳವಡಿಸಲು ಸಾಧನೋಪಾಯಗಳನ್ನು ಕಂಡುಹಿಡಿಯತಕ್ಕ ವಿಚಾರವನ್ನು ಸರ್ಕಾರದವರಿಗೆ ಒತ್ತಿ ಹೇಳುವುದಕ್ಕಾಗಿ).

ಈ ಖೋತಾ ನಿರ್ಣಯವನ್ನು ಸಭೆಯ ಮುಂದಿಡುತ್ತಾ ಕೆಲವು ವಿಷಯಗಳನ್ನು ಹೇಳಬೇಕಾಗಿದೆ. ಈಗ ನ್ಯಾಯಾಸ್ಥಾನಗಳು ಸಾಮಾನ್ಯವಾಗಿ ಜನತೆಯಿಂದ ಬಹಳ ದೂರವಾಗಿರತಕ್ಕ ಸ್ಥಳಗಳಲ್ಲಿವೆ. ಒಂದೊಂದು ಸ್ಥಳದಲ್ಲಿ ಎರಡು ಕೋರ್ಟುಗಳೂ ಇವೆ. ಸಾಮಾನ್ಯವಾಗಿ ಸಿಟಿ ಹೆಡ್‌ಕ್ವಾರ್ಟರುಗಳು, ಡಿಸ್ಟ್ರಿಕ್ಟು ಹೆಡ್‌ಕ್ವಾರ್ಟರುಗಳಲ್ಲಿಯೇ ಇವೆ. ಈ ವ್ಯವಸ್ಥೆಯಿಂದ ಹಳ್ಳಿಗಾಡಿನ ಜನರಿಗೆ ಬಹಳ ತೊಂದರೆಯಾಗಿದೆ.

(ಶ್ರೀ ಕೆ. ಪಂಚಾಕ್ಷರಯ್ಯ.)

ಹಿಂದೆ ಯಾವುದೋ ಕಾಲದಲ್ಲಿ ಈ ಕೋರ್ಟುಗಳ ವ್ಯವಸ್ಥೆ ನಡೆದಿದೆ ಇದು ಈಗ ಪುನರ್ವ್ಯವಸ್ಥೆಯಾಗ ಬೇಕು. ಉದಾಹರಣೆಗೆ, ಅರಸೀಕೆರೆ ತಾಲ್ಲೂಕಿನಿಂದ ಹಾಸನಕ್ಕೆ ಹೋಗಬೇಕೆಂದರೆ 60 ಮೈಲಿ ದೂರ ಹೋಗಬೇಕಾಗುತ್ತದೆ. 60 ಮೈಲಿ ದೂರ ಹೋಗಿ ನ್ಯಾಯವನ್ನು ದೊರಕಿಸಿಕೊಳ್ಳಬೇಕಾದರೆ ರೈತನಿಗೆ ಬಹಳ ತೊಂದರೆಯಿದೆ. ಹಾಸನಕ್ಕೆ ಹೋಗಿ ಬರ ಬೇಕಾದರೆ ಮೂರುದಿವಸ ಕಾಲ ತೆಗೆದುಕೊಳ್ಳುತ್ತದೆ. ಈ ಮೂರು ದಿವಸದ ಖರ್ಚುವೆಚ್ಚಗಳಲ್ಲದೆ ವ್ಯವಸಾಯ ಮಾಡತಕ್ಕ ರೈತರಿಗೆ ಮೂರು ದಿನ ಮನೆಬಿಟ್ಟು ಹೋದರೆ ಅವರ ವ್ಯವಸಾಯದ ಪಾಡೇನು? ಬಹಳ ತೊಂದರೆ. ಸರ್ಕಾರದವರೇ ಕೇವಲ ಒಂದು ಸಣ್ಣ lantern ಕೇಸು ಹಾಕಬೇಕೆಂದರೆ ಕೂಡ ಐವತ್ತು ಅರವತ್ತು ಮೈಲಿ ದೂರಹೋಗಬೇಕೆಂದರೆ ಅವರ ಗತಿ ಯೇನು? ಕೇಸುಹಾಕದಿದ್ದರೆ Law and Order ಕಾಪಾಡಿಕೊಳ್ಳುವುದು ಹೇಗೆ?

ಇದೂ ಅಲ್ಲದೆ, ನ್ಯಾಯಾಸ್ಥಾನಗಳು ಜನತೆಯಿಂದ ದೂರವಾದ ಸ್ಥಳಗಳಲ್ಲಿರುವುದರಿಂದ ಶ್ರೀಮಂತರಿಗೆ ನ್ಯಾಯದೊರೆಯುತ್ತದೆ, ಅನುಕೂಲವಾಗುತ್ತದೆ, ಇದ ರಿಂದ ಅರ್ಥಾತ್ ಸರ್ಕಾರದವರು ನ್ಯಾಯವನ್ನು ಪೇಟೆಯಲ್ಲಿ ಮಾರಿದ ಹಾಗಾಗುತ್ತದೆ. ಹೀಗಾಗ ಬಾರದು. ಆದಕಾರಣ ಜನತೆಗೆ ಹತ್ತಿರವಿರುವ ಸ್ಥಳಗಳಲ್ಲಿ ನ್ಯಾಯಾಸ್ಥಾನಗಳು ಏರ್ಪಾಡಾಗಬೇಕು. ಇದಕ್ಕಾಗಿ ಈ ಖೋತಾ ನಿರ್ಣಯವನ್ನು ಸೂಚಿಸಿ ದ್ದೇನೆ. ಈ ವಿಷಯದ ಬಗ್ಗೆ ಒಂದು ಸಮಿತಿಯನ್ನು ನೇಮಕ ಮಾಡಬೇಕೆಂಬ ಅಭಿಪ್ರಾಯ ಸರ್ಕಾರಕ್ಕೆ ಇದೆ ಯೆಂದು ಈಗಾಗಲೇ ನ್ಯಾಯಾಂಗ ಸಚಿವರು ಅಪ್ಪಣೆ ಕೊಡಿಸಿದ್ದಾರೆ. ಈ ಸಮಿತಿ ಸಮಗ್ರ ಮೈಸೂರನ್ನು ದೃಷ್ಟಿಯಲ್ಲಿಟ್ಟುಕೊಂಡು, ಎಲ್ಲೆಲ್ಲಿ ಜನತೆಗೆ ಹೆಚ್ಚು ಹೆಚ್ಚು ನ್ಯಾಯ ಸುಲಭವಾಗಿ ದೊರೆಯಲು ಅನುಕೂಲ ವಿರುತ್ತದೆಯೋ ಅಂಥ ಸ್ಥಳಗಳಲ್ಲಿ ಕೋರ್ಟುಗಳನ್ನು ಸ್ಥಾಪನೆಮಾಡಬೇಕು. ಅಲ್ಲದೆ ಈಗ ಮುನ್ಸೀಫ್ ಕೋರ್ಟಿಗಿರುವ ಅಧಿಕಾರ ವ್ಯಾಪ್ತಿಯನ್ನು 2,500 ರೂಪಾಯಿಗಳಿಂದ 5,000 ರೂಪಾಯಿಗಳಿಗೆ ಏರಿಸಿ ಉಪಕಾರಮಾಡಬೇಕು. ಹತ್ತಿರದಲ್ಲೇ ಜನಕ್ಕೆ ನ್ಯಾಯ ದೊರೆಯುವಂತಾಗಬೇಕು. ಹಾಗೆ ನ್ಯಾಯಾಲಯ ಗಳು ಜನತೆಯ ಸಮಿಪಕ್ಕೆ ಬಾರದಿದ್ದರೆ ನಾನು ಆಗಲೇ ಹೇಳಿದಂತೆ ಶ್ರೀಮಂತರಿಗೇ ನ್ಯಾಯ ದೊರೆಯು ವಂತಾಗುತ್ತದೆ. ನನಗೆ ತಿಳಿದಮಟ್ಟಿಗೆ, ಕೋರ್ಟು ಗಳು ಜನತೆಯ ಸಮೀಪಕ್ಕೆ ಹೋಗುವುದಕ್ಕೆ ಲಾಯರು ಗಳು ಅಡ್ಡಿಪಡಿಸುತ್ತಿದ್ದಾರೆಂದು ಕೇಳುತ್ತೇನೆ.

ಒಬ್ಬ ಸದಸ್ಯರು.—ಆ ಮಾತನ್ನು ಒಪ್ಪುವುದಿಲ್ಲ.

ಶ್ರೀ ಕೆ. ಪಂಚಾಕ್ಷರಯ್ಯ—ನ್ಯಾಯಾಸ್ಥಾನಗಳು ಲಾಯರುಗಳಿರುವ ಸ್ಥಳಗಳಿಂದ ದೂರ ಹೋದರೆ, ಅವರಿಗೆ ಅನುಕೂಲ ಕಡಮೆಯಾಗುತ್ತದೆ. ಅವರ ಮಕ್ಕಳು ದೊಡ್ಡ ದೊಡ್ಡ ಊರುಗಳಲ್ಲಿ ದೊಡ್ಡ ದೊಡ್ಡ ಕೆಲಸಗಳಲ್ಲಿರುತ್ತಾರೆ, ಕಾಲೇಜುಗಳ ಅನುಕೂಲ ವಿರುತ್ತವೆ, ಅರ್ಥಾತ್ ಬೇರೆ ಅನುಕೂಲಗಳಿರುತ್ತವೆ. ಇದಕ್ಕೆ ತೊಂದರೆಯಾಗುತ್ತದೆಂದು ನ್ಯಾಯಾಸ್ಥಾನ ಗಳು ಜನತೆಯ ಹತ್ತಿರ ಹೋಗುವ ತತ್ವವನ್ನು ವಿರೋಧಿ ಸುತ್ತಿದ್ದಾರೆ.

ಶ್ರೀ ಜಿ. ಎ. ತಿಮ್ಮಪ್ಪಗೌಡ (ಅರಕಲಗೂಡು).— ಕೆಲವು ವರ್ತಕರು ಕೋರ್ಟುಗಳು ತಮ್ಮ ಸ್ಥಳಕ್ಕೆ ಬಂದರೆ ತಮಗೆ ದೊರೆಯುವ ಮನೆ ಬಾಡಿಗೆ ದರ ಹೆಚ್ಚುತ್ತದೆಂದು ಸಂತೋಷಪಡುತ್ತಿದ್ದಾರೆ.

ಶ್ರೀ ಕೆ. ಪಂಚಾಕ್ಷರಯ್ಯ.—ಸರ್ಕಾರದವರು ಈ ಲಾಯರುಗಳ ದೃಷ್ಟಿಯನ್ನು ಗಮನಿಸದೆ, ಜನತೆಯ ದೃಷ್ಟಿಯಿಂದ ನ್ಯಾಯಾಸ್ಥಾನಗಳ ಪುನರ್ವ್ಯವಸ್ಥೆ ಮಾಡಲಿ, ಜನತೆಗೆ ಅನುಕೂಲ ದೊರೆಯಲಿ ಎಂಬ ಉದ್ದೇಶದಿಂದ ಈ ಖೋತಾ ನಿರ್ಣಯನ್ನು ತಂದಿದ್ದೇನೆ.

Mr. SPEAKER.—Cut motion moved:

"That the demand be reduced by Rs. 100"

ಶ್ರೀ ಎ. ಜಿ. ರಾಮಚಂದ್ರರಾವ್ (ನ್ಯಾಯಾಂಗ ಮತ್ತು ವಿದ್ಯಾಶಾಖೆಗಳ ಮಂತ್ರಿಗಳು).—ಈ ವಿಷಯ ಗಳಲ್ಲಿ ಸರ್ಕಾರ ಯಾವ ನೀತಿಯನ್ನನುಸರಿಸುತ್ತಿದೆ ಯೆಂಬ ವಿಷಯವನ್ನು ಕಡೂರಿಗೆ ಕೋರ್ಟು ಕೊಡ ಬೇಕೆಂದು ಕೇಳಿದ ಸಂದರ್ಭದಲ್ಲಿ ಹೇಳಿದ್ದೇನೆ. ಅವ ರಿಗೇ ಗೊತ್ತಿರುವ ಹಾಗೆ, ಅರಸೀಕೆರೆ ಒಂದೇ ಕ್ಷೇತ್ರಕ್ಕೆ ಒಂದು ಕೋರ್ಟನ್ನು ಕೊಟ್ಟರೆ ಸಾಕಾದಷ್ಟು ಕೆಲಸ ವಿರುವುದಿಲ್ಲ. ಕಡೂರು, ಚನ್ನರಾಯಪಟ್ಟಣ ಮುಂ ತಾದ ಕಡೆ ಒಂದೊಂದು ಸ್ಥಳಕ್ಕೇ ಒಂದೊಂದು ಕೊಡಲು ಸಾಧ್ಯವಿಲ್ಲವೆಂದು ಹೇಳಿದ್ದೇನೆ. ಸಮಗ್ರ ವಾಗಿ ವಿಚಾರಗಳನ್ನು ಪರಿಶೀಲನೆ ಮಾಡದೆ ತೀರ್ಮಾನ ಮಾಡುವುದರಿಂದ ಕಷ್ಟವಾಗುತ್ತದೆ. ಇದಕ್ಕೆ ಹೈ ಕೋರ್ಟಿನವರೊಡನೆ ವ್ಯವಹಾರ ನಡೆಸಿ, ಒಂದು ಸಮಿತಿ ಯನ್ನು ಮಾಡಿ ಎಲ್ಲೆಲ್ಲಿ ಕೋರ್ಟುಗಳನ್ನು ಏರ್ಪಾಡು ಮಾಡುವುದು ಸಾಧ್ಯ, ಹೆಚ್ಚು ಜನರಿಗೆ ಅನುಕೂಲವಾಗ ಬೇಕಾದರೆ ಹೇಗೆ ಮಾಡಬೇಕು ಎಂಬುದನ್ನೆಲ್ಲಾ ಪರಿ ಶೀಲನೆಮಾಡಲು ಈ ಸಮಿತಿಗೆ ಬಿಡುವುದೇ ಸೂಕ್ತ; ಅದರಿಂದ ನ್ಯಾಯದೊರಕುತ್ತದೆ. ಆದಕಾರಣ ಈ ಖೋತಾ ಸೂಚನೆಯನ್ನು ವಾಪಸು ತೆಗೆದುಕೊಳ್ಳ ಬೇಕೆಂದು ವಿನಂತಿ ಮಾಡುತ್ತೇನೆ.

Sri K. PANCHAKSHARIAH.—I seek leave to withdraw my cut motion.

The cut motion was, by leave, withdrawn.

Mr. SPEAKER.—The question is.—

"That a sum not exceeding Rs. 23,85,700 be granted to the Government to defray the charges which will come in course of payment during the year ending 31st day of March 1954 in respect of "Administration of Justice."

The motion was adopted.

Demand No. 15 – Jails and Convict Settlements.

28. JAILS AND CONVICT SETTLEMENTS.

Mr. SPEAKER.—Motion moved.

"That a sum not exceeding Rs. 6,87,000 be granted to the Government to defray the charges which will come in course of

payment during the year ending 31st day of March 1954, in respect of 'Jails and Convict Settlements'."

There is only one cut motion under this head, cut motion No. 20, which stands in the name of Sri G. A. Thimmappa Gowda.

ಶ್ರೀ ಜಿ. ಎ. ತಿಮ್ಮಪ್ಪಗೌಡ (ಅರಕಲಗೂಡು).—ಸ್ವಾಮಿ, ನನ್ನ ಖೋತಾ ಸೂಚನೆ ಈ ರೀತಿಯಿದೆ.—

"28 ಜೈಲುಗಳು ಮತ್ತು ಶಿಕ್ಷೆಗೊಳಗಾದವರ ವಸಾಹತಗಳು" ಎಂಬ ಬಾಬಿನಲ್ಲಿ ಕೋರಿರತಕ್ಕ 6,87,000 ರೂಪಾಯಿಗಳ 'ಡಿಮ್ಯಾಂಡ್' ಮನವಿಯ ಸಂಬಂಧದಲ್ಲಿ 100 ರೂಪಾಯಿಗಳನ್ನು ಕಡಮೆ ಮಾಡಬೇಕು. (ಹೊಳೇನರಸೀಪುರ, ಬೇಲೂರು ಮತ್ತು ಸಕಲೇಶಪುರದ 'ಲಾಕಪ್ಪು'ಗಳಲ್ಲಿರತಕ್ಕ ವಿಚಾರಣೆಯಾಗಲಿರುವವರುಗಳಿಗೂ ಮತ್ತು ಬಂದಿಗಳಿಗೂ ಉತ್ತಮರೀತಿಯ ವಸತಿಸೌಕರ್ಯಗಳನ್ನೊದಗಿಸುವುದಕ್ಕಾಗಿಯೂ ಮತ್ತು ಅವರುಗಳ ವಿಚಾರದಲ್ಲಿ ದಯೆಯಿಂದ ವರ್ತಿಸುವುದಕ್ಕಾಗಿಯೂ ಇರತಕ್ಕ ಜರೂರಾತಿ ಅವಶ್ಯಕತೆಯ ವಿಚಾರದ ಮೇಲೆ ಚರ್ಚೆ ನಡೆಯುವಂತೆ ಮಾಡುವುದಕ್ಕಾಗಿ)."

Sri K. PUTTASWAMY (Srirangapatna).—Why not extend the same consideration to others also?

ಶ್ರೀ ಜಿ. ಎ. ತಿಮ್ಮಪ್ಪಗೌಡ.—ನನ್ನ ಸ್ನೇಹಿತರಾದ ಪುಟ್ಟಸ್ವಾಮಿಯವರು ತಾಲ್ಲೂಕು ಹೆಡ್‌ಕ್ವಾರ್ಟರುಗಳಲ್ಲಿರುವ ಲಾಕಪ್ಪುಗಳ ಸ್ಥಿತಿಗಳು, ಅಲ್ಲಿರುವ ಖೈದಿಗಳ ವ್ಯವಸ್ಥೆ ಚೆನ್ನಾಗಿಲ್ಲ, ಅಲ್ಲಿ ಅನುಕೂಲತೆಗಳು ಕಡಮೆ, ಆದ್ದರಿಂದ ನಮ್ಮ ಮೂರು ತಾಲ್ಲೂಕುಗಳಲ್ಲಿ ಮಾತ್ರವಲ್ಲದೆ ಇನ್ನೂ ಅನೇಕ ಕಡೆ ಈ ರೀತಿಯಿರುವುದರಿಂದ ಅವಕ್ಕೂ ಅನ್ವಯಿಸುವಂತಿದ್ದರೆ ಚೆನ್ನಾಗಿತ್ತೆಂದು ಸೂಚಿಸುತ್ತಾರೆ. ಆದರೆ ಈ ಮೂರು ಸ್ಥಳಗಳಲ್ಲಿರುವ ಸ್ಥಿತಿಗತಿಗಳನ್ನು ನಾನು ಖುದ್ದಾಗಿ ನೋಡಿರುವುದರಿಂದ, ಅಲ್ಲಿರುವ ತೊಂದರೆ ಗೊತ್ತಿರುವುದರಿಂದ, ಆ ವಿಚಾರ ಮಾತ್ರ ಹೇಳುತ್ತೇನೆ. ಈ ಸಮಸ್ಯೆಯನ್ನು ಸರ್ಕಾರದವರು ಸ್ವಲ್ಪ ಮಾನವೀಯ ದೃಷ್ಟಿಯಿಂದ ನೋಡಬೇಕಾಗಿದೆ. ಈ ಸಬ್ ಜೈಲುಗಳು ಅದರಲ್ಲೂ ಲಾಕಪ್ಪುಗಳಿರುವುದು ಓಬಿರಾಯನ ಕಾಲದಲ್ಲಿ ಕಟ್ಟಿಸಿರುವ ಕಟ್ಟಡಗಳಲ್ಲಿ. ಆ ಕಟ್ಟಡಗಳನ್ನು ಲಾಕಪ್ಪಿಗಾಗಿಯೇ ಕಟ್ಟಿಸಿದ್ದೆಂದು ಹೇಳುವುದಕ್ಕಾಗುವುದಿಲ್ಲ. ತಾಲ್ಲೂಕು ಆಫೀಸುಗಳನ್ನು ಕಟ್ಟಿಸಿದಾಗ ಯಾವುದೋ ರೂಮನ್ನು 'ಲಾಕಪ್' ಮಾಡಿದ್ದಾರೆ. ಅವು 8'×10' ವಿಸ್ತೀರ್ಣವುಳ್ಳದ್ದಾಗಿವೆ. ಹೊಳೇನರಸೀಪುರದ ಲಾಕಪ್ಪು ಬಹಳ ದುರವಸ್ಥೆಯಲ್ಲಿದೆ. ಗಾಳಿ ಬೆಳಕು ಬರಲು ಅವಕಾಶವೇ ಇಲ್ಲ; ನೀರು ಇಲ್ಲವೇ ಇಲ್ಲ. ಅದರ ಪಕ್ಕಕ್ಕೆ ಹೋದರೆ ವಾಸನೆ ತಡೆಯುವುದಕ್ಕಾಗುವುದಿಲ್ಲ. ಬಹಳ ದೂರದವರೆಗೂ ವಾಸನೆ ಹೊಡೆಯುತ್ತದೆ. ಎರಡನೆಯದು ಮಲಗುವುದು, ಊಟಮಾಡುವುದು ಎಲ್ಲ ಅಲ್ಲೇ; ಇದಕ್ಕಿಂತ ಹೆಚ್ಚಾಗಿ ಹೇಳುವುದಾದರೆ ಮಲಮೂತ್ರ ವಿಸರ್ಜನೆ ಅದೇ ಜಾಗದಲ್ಲೇ ಆಗಬೇಕು. ಒಂದು ಮಡಕೆಯಲ್ಲಿ ಮೂತ್ರ ವಿಸರ್ಜಿಸಿ ಆ ಖೈದಿಗಳೇ ಹೊರಕ್ಕೆ ಸಾಗಿಸಬೇಕಾಗಿದೆ. ಇದಕ್ಕಿಂತ ಹೆಚ್ಚಾಗಿ ಖೈದಿಗಳನ್ನು ವಿಚಾರಣೆಗೆ ಒಳಪಡಿಸಿ ಕೋರ್ಟಿನಲ್ಲಿ ಒಂದು ತೀರ್ಪುಕೊಡುವವರೆಗೂ ಕೂಡ ಆ ಅಪರಾಧಿಗಳು ನಿರಪರಾಧಿಗಳೆಂದು ಗಮನದಲ್ಲಿಟ್ಟುಕೊಳ್ಳಬೇಕು. ಅನೇಕರು ಬಹಳ ಯೋಗ್ಯರೂ, ದೊಡ್ಡಮನುಷ್ಯರೂ, ಸಣ್ಣ ಅಪರಾಧವನ್ನು ಮಾಡಿರುವವರೂ, ಏನೋ ಒಂದು ಸನ್ನಿವೇಶದ ಕಾರಣದಿಂದ ಲಾಕಪ್ಪಿಗೆ ಬಂದಿಗಳಾಗಿ ಬಂದಿರುವವರೂ ಅಲ್ಲಿರುವುದರಿಂದ ಕೋರ್ಟಿನಲ್ಲಿ ಶಿಕ್ಷೆಗೆ ಗುರಿಯಾಗುವವರೆಗೆ ಅವರಿಗೆ ತಕ್ಕ ವ್ಯವಸ್ಥೆಯಿರಬೇಕಾದದ್ದು ಸೂಕ್ತ. ಈಗ ಜೈಲುಗಳ ಸುಧಾರಣೆಯಾಗಬೇಕು, ಅಪರಾಧಿಗಳನ್ನು ಸಭ್ಯರನ್ನಾಗಿ ಮಾಡಿ ಒಳ್ಳೆಯ ಮಾರ್ಗಕ್ಕೆ ತರಲು ಏರ್ಪಾಡು ಮಾಡಬೇಕು ಎಂಬುದು ಎಲ್ಲಾ ಕಡೆಯೂ ಕೇಳಿಬರುತ್ತಿದೆ. ಸದ್ಯಕ್ಕೆ ಎಲ್ಲಾ ಲಾಕಪ್ಪುಗಳನ್ನೂ ಹೊಸದಾಗಿ ಈಗ ಕಟ್ಟುವುದಕ್ಕೆ ಸಾಧ್ಯವಿಲ್ಲದಿದ್ದರೂ ಒಂದೆರಡು ವರ್ಷಗಳಲ್ಲಿ ಮಾಡಬಹುದು. ಆದರೂ ಕೂಡ ಸದ್ಯಕ್ಕೆ ಲಾಕಪ್ ಆಫೀಸರುಗಳಿಗೆ ಮತ್ತು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರಿಗೆ ತಿಳಿಸಿ ರೋಗರುಜಿನಗಳಿಗೆ ಅವಕಾಶವಿಲ್ಲದಂತೆ ಇರುವ ರೂಮನ್ನೇ ಸ್ವಲ್ಪ ಚೊಕ್ಕಟವಾಗಿಡಿಸಿ, ಫೆನಾಯಿಲ್ ಹಾಕಿ ವಾರಕ್ಕೆರಡು ಸಲವಾದರೂ ತೊಳೆಸಿ ಡಿ. ಡಿ. ಟಿ. ಸ್ಪ್ರೇ ಮಾಡಿಸಿ ಸರಿಯಾದ ರೀತಿಯಲ್ಲಿಡುವಂತೆ ಏರ್ಪಡಿಸಬೇಕು. 8'×10' ಇರುವ ರೂಮಿನಲ್ಲಿ 8—10 ಜನರಿರುತ್ತಾರೆ. ಗೋಡೆಯಮೇಲೆ ತಿಗಣೆರಕ್ತ ಕಾಣುತ್ತದೆ. ಅದನ್ನು ನೋಡಿದರೆ ತಿಗಣೆಗಳೂ ಬಲವಾಗಿರಬಹುದು. ಅಲ್ಲಿ ಹೋದಾಗ ವಾಸನೆ ತಡೆಯುವುದಕ್ಕೆ ಸಾಧ್ಯವಾಗಲಿಲ್ಲ; ಕೂಡಲೆ ಹೊರಕ್ಕೆ ಬಂದೆ. ಆದ್ದರಿಂದ ಇದನ್ನು ತಕ್ಷಣ ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸಿ ಈಗಿರುವ ಲಾಕಪ್ಪು ಕೊಠಡಿಗಳನ್ನು ಸರಿಯಾಗಿಡುವುದಕ್ಕೆ, ಅಲ್ಲಿಗೆ ಹೋಗಿರುವವರು ವಾಸಮಾಡುವುದಕ್ಕೆ ಸ್ವಲ್ಪ ಅವಕಾಶವಾಗುವ ಹಾಗೆ, ಹೊರಗೆ ಲ್ಯಾವೆಟರಿಯಿರಲು ಅವಕಾಶವಾಗುವಂತೆ ಮಾಡಿ, ಜೈಲಿನಲ್ಲಿರುವವರು ಹೊರಗೆ ಹೋಗಿ ಜಲಮಲಗಳನ್ನು ವಿಸರ್ಜಿಸಲು ಅವಕಾಶಮಾಡಿ. ಇಷ್ಟನ್ನಾದರೂ ತಕ್ಷಣ ಕೆಲವು ಬದಲಾವಣೆಮಾಡಬೇಕೆಂದು ಹೇಳಿ ಈ ಖೋತಾ ನಿರ್ಣಯವನ್ನು ಸಭೆಯ ಮುಂದಿಡುತ್ತೇನೆ, ಈ ಪರಿಸ್ಥಿತಿಯನ್ನು ಮಾನ್ಯಮಂತ್ರಿಗಳು ಸಹ ನೋಡಿದ್ದಾರೆ.

Mr. SPEAKER.—Cut Motion moved:

"That the demand be reduced by Rs. 100".

ಶ್ರೀ ಎ. ಜಿ. ರಾಮಚಂದ್ರರಾವ್ (ನ್ಯಾಯಾಂಗ ಮತ್ತು ವಿದ್ಯಾಶಾಖೆಗಳ ಮಂತ್ರಿಗಳು).—ಸ್ವಾಮಿ, ಶ್ರೀಮಾನ್ ತಿಮ್ಮಪ್ಪಗೌಡರು ಹೇಳಿದ್ದನ್ನು ಕೇಳಿದ್ದೇನೆ. ಆದರೆ ಇದರಲ್ಲಿ ಸ್ವಲ್ಪ ಉತ್ಪ್ರೇಕ್ಷೆಯಿದೆಯೆಂದು ಮಾತ್ರ ಹೇಳಬೇಕಾಗಿದೆ. ಆದರೂ ಇದಕ್ಕೆ ತಕ್ಕಂತೆ ಚೊಕ್ಕಟವಾದ ಕೊಠಡಿಯಿರಬೇಕು, ಸಾಕಾದಷ್ಟು ಜಾಗವಿರಬೇಕು, ಗಾಳಿ ಬೆಳಕುಗಳಿಗೆ ಅವಕಾಶವಿರಬೇಕು ಎಂಬುದು ನಿರ್ವಿವಾದವಾದುದು. ಇದನ್ನು ಪರಿಶೀಲಿಸೋಣ.

Sri. G. A. THIMMAPPA GOWDA.—I seek leave to withdraw my cut motion.

The cut motion was, by leave, withdrawn.

Mr. SPEAKER.—The question is.

"That a sum not exceeding Rs. 6,87,000 be granted to the Government to defray the charges

(MR. SPEAKER.)

which will come in course of payment during the year ending 31st day of March 1954, in respect of "Jails and Convict Settlements'."

The motion was adopted.

Demand 16 Police.

29 Police.

MR. SPEAKER.—Motion moved.—

"That a sum not exceeding Rs. 1,12,86,000 be granted to the Government to defray the charges which will come in course of payment during the year ending 31st day of March 1954, in respect of 'Police'."

ಶ್ರೀ ಎಚ್. ಸಿದ್ದವೀರಪ್ಪ (ಒಳಾಡಳಿತ ಮತ್ತು ಕೈಗಾರಿಕೆ ಶಾಖೆಗಳ ಮಂತ್ರಿಗಳು).—ಸ್ವಾಮಿ ಈ ಡಿಮ್ಯಾಂಡಿಗೆ ಸಂಬಂಧಪಟ್ಟ ಖೋತಾ ನಿರ್ಣಯಗಳನ್ನು ಸೂಚಿಸುವುದಕ್ಕೆ ಮುಂಚಿತವಾಗಿ ಪೋಲೀಸು ಇಲಾಖೆಯ ಚಾಲ್ತಿಸಾಲಿನ ಆಡಳಿತದ ವಿಚಾರದಲ್ಲಿ ಒಂದೆರಡು ಅಂಶಗಳನ್ನು ಈ ಸಭೆಯ ಗಮನಕ್ಕೆ ತರಲು ತಮ್ಮ ಅನುಮತಿ ಬೇಡುತ್ತೇನೆ. ಮಾನ್ಯ ಸಭೆಗೆ ಗೊತ್ತಿರುವ ಹಾಗೆ ಪೋಲೀಸು ಇಲಾಖೆಯ ಕಾರ್ಯಕ್ರಮ ಶಾಂತಿ ಮತ್ತು ಲಾ ಅಂಡ್ ಆರ್ಡರ್ ಮೈಂಟೈನ್ ಮಾಡುವುದು. ಹಾಗೆ ಮಾಡಬೇಕಾದರೆ, ಶಾಂತಿಯನ್ನು ಕಾಪಾಡಬೇಕಾದರೆ, ಪೋಲೀಸಿನ ಆಡಳಿತದಲ್ಲಿ ದಕ್ಷತೆ ಮತ್ತು ಕಾರ್ಯ ನಿರ್ವಹಣೆಯ ವಿಚಕ್ಷಣೆ ಚೆನ್ನಾಗಿರಬೇಕೆಂಬುದು ನಿರ್ವಿವಾದ ಅಂಶ. ಯಾವ ಸರ್ಕಾರವೇ ಆಗಲಿ ಆ ಸರ್ಕಾರದ ಪ್ರಥಮ ಕರ್ತವ್ಯ ದೇಶದಲ್ಲಿ ಶಾಂತಿಗೆ ಭಂಗಬಾರದ ಹಾಗೆ, ನೆಮ್ಮದಿಯನ್ನು ದೇಶದಲ್ಲಿ ಕಾಪಾಡಿಕೊಂಡು ಬರುವ ಹಾಗೆ, ಪೋಲೀಸು ಆಡಳಿತವನ್ನಿಟ್ಟುಕೊಳ್ಳಬೇಕಾದ್ದು ಅತಿ ಮುಖ್ಯವಾದುದು. ಆ ದೃಷ್ಟಿಯಿಂದ ನಾವು ನೋಡಿದರೆ ಮೈಸೂರು ಸಂಸ್ಥಾನದಲ್ಲಿ 1952–53ನೆಯ ಸಾಲಿನಲ್ಲಿ ಪೋಲೀಸು ಆಡಳಿತ ಸಾಕಾದಷ್ಟು ಸಮರ್ಪಕವಾಗಿ ನಡೆದಿದೆಯೆಂದು ಹೇಳಿದರೆ ಯಾರೂ ಅದನ್ನು ಉತ್ಪ್ರೇಕ್ಷೆಯೆಂದು ಕರೆಯಲಾರರು ಎಂದು ಭಾವಿಸಿದ್ದೇನೆ. ಪೋಲೀಸಿನ ಆಡಳಿತದಲ್ಲಿ ಅಲ್ಲಲ್ಲಿ ಕೆಲವು ಅಧಿಕಾರಿಗಳ ಕಾರ್ಯಕ್ರಮ ಜನತೆಯ ವಿಶ್ವಾಸಕ್ಕೆ ಪಾತ್ರರಾಗಿಲ್ಲದ ಹಾಗೆ ಕಾಣಬಹುದು. ಪೋಲೀಸು ಇಲಾಖೆಯಲ್ಲಿರತಕ್ಕಂಥ ಎಲ್ಲರೂ ಬಹಳ ಒಳ್ಳೆಯವರು, ಬಹಳ ಚೆನ್ನಾಗಿ ಕೆಲಸಮಾಡುತ್ತಾರೆ, ಅವರೆಲ್ಲಾ ದೇವತೆಗಳು ಎಂದು ನಾನು ಹೇಳುವುದಿಲ್ಲ. ಅಲ್ಲಲ್ಲಿ ಕೆಲವರು ಸ್ವಲ್ಪ ತಪ್ಪುಮಾಡುವವರೂ ಇರಬಹುದು. ಒಟ್ಟಿನಲ್ಲಿ ತೆಗೆದುಕೊಳ್ಳಬೇಕು.

10-30 A. M.

ಒಟ್ಟಿನಲ್ಲಿ ಈ ಇಲಾಖೆಯ ಆಡಳಿತದಲ್ಲಿ ದಕ್ಷತೆಯುಳ್ಳ ಮತ್ತು ನಿಷ್ಪಕ್ಷಪಾತವಾಗಿ ನಡೆದುಕೊಳ್ಳತಕ್ಕ ಅಧಿಕಾರಿಗಳಿದ್ದಾರೆಂದು ಹೇಳಿದರೆ ತಪ್ಪಾಗಲಾರದು. ಕೆಲವು ಸಂದರ್ಭಗಳಲ್ಲಿ ಪೋಲೀಸ್ ಅಧಿಕಾರಿಯ ಕಾರ್ಯಚಟುವಟಿಕೆಯು ಕೆಲವರಿಗೆ ಅಪ್ರಿಯವಾಗಿರುವುದರಿಂದ ಆತನ ಮೇಲೆ ಸರ್ವೇ ಸಾಧಾರಣವಾಗಿ ಆಕ್ಷೇಪಣೆಗಳು ಬರತಕ್ಕ ಸಂದರ್ಭವಿದೆ. ಅದರಲ್ಲಿಯೂ ಈ ಅಧಿಕಾರಿ ಯಾರಾದರೂ ಪ್ರತಿಭಾ ಶಾಲಿಯಾದ ಸಾರ್ವಜನಿಕ ಮುಖಂಡರ ಅಭಿಪ್ರಾಯಕ್ಕೆ ವಿರುದ್ಧವಾಗಿ ಏನಾದರೂ ನಡೆದುಕೊಂಡರೆಂದರೆ ಇಂಥ ಪ್ರಸಂಗಗಳಲ್ಲಿ ಆತನ ಮೇಲೆ ಆಕ್ಷೇಪಣೆ ಬರತಕ್ಕ ಸಂದರ್ಭವಿದೆ. ಆದರೂ ಸಹ ನಮ್ಮ ಪೋಲೀಸ್ ಅಧಿಕಾರಿಗಳು ನಿಷ್ಪಕ್ಷಪಾತವಾಗಿ, ನಿರ್ಭಯವಾಗಿ ನಡೆಯಬೇಕು, ಒಂದು ವೇಳೆ ಅವರು ಕೈಕೊಳ್ಳತಕ್ಕ ಕಾರ್ಯ ಭಾಗದಲ್ಲಿ ಎಲ್ಲಾದರೂ error of judgment ಆದರೆ, ಅದು *bona fide* ಎಂದೂ ಅವರ ಆತ್ಮಸಾಕ್ಷಿಗೆ ಅನುಗುಣವಾಗಿ ವರ್ತಿಸಿದರೆಂದೂ ಕಂಡು ಬಂದರೆ ಅಂಥವರು ಯಾರೂ ತಮ್ಮ ಕಾರ್ಯನಿರ್ವಹಣೆಯ ವಿಚಾರದಲ್ಲಿ ಹೆದರಬೇಕಾಗಿಲ್ಲ. ಅವರು ಯಾವ ರೀತಿಯಲ್ಲಿಯೂ ಯಾರೊಬ್ಬರ ದಯಾದಾಕ್ಷಿಣ್ಯಕ್ಕೂ ಒಳಪಡಬೇಕಾಗಿಲ್ಲ. ಒಂದು ವೇಳೆ excess ಆಗಿದ್ದರೂ ಅಂಥವರ ವಿಚಾರಧಲ್ಲಿ ಸರ್ಕಾರದವರು ಸರಿಯಾಗಿ ನಡೆದುಕೊಳ್ಳುತ್ತಾರೆ.

ಒಬ್ಬ ಸದಸ್ಯರು.—Excess ಆದರೂ ಪರವಾಗಿಲ್ಲವೇ ?

ಶ್ರೀ ಎಚ್. ಸಿದ್ದವೀರಪ್ಪ.—*Bona fide* intention ನಿಂದ ಕೆಲಸ ನಿರ್ವಹಿಸಿದ್ದರೆ ಅಂಥಾ ವಿಚಾರಗಳಲ್ಲಿ, ಆ ಅಧಿಕಾರಿಯ ವಿಚಾರದಲ್ಲಿ ಉದಾರತೆಯಿಂದ ವರ್ತಿಸಬೇಕಾದುದು ಸರ್ಕಾರದ ಕರ್ತವ್ಯ. If there is anything done slightly in excess, Government are prepared to condone it provided it is *bona fide* and done in the true discharge of his duties. ಆತನು ತಾನು ಮಾಡುವ ಕೆಲಸವನ್ನು ನಿಷ್ಪಕ್ಷಪಾತವಾಗಿ, ನಿರ್ಭಯವಾಗಿ, ನಿರ್ದಾಕ್ಷಿಣ್ಯವಾಗಿ, *bona fide* ಉದ್ದೇಶದಿಂದಲೇ ಮಾಡಬೇಕೆಂಬ ದೃಷ್ಟಿಯಿಂದ ನಾನು ಈ ರೀತಿ ಹೇಳುತ್ತಿದ್ದೇನೆ.

ಇನ್ನು ಈ ಇಲಾಖೆಗೆ ಸಂಬಂಧಿಸಿದ ಬಾಕಿ ವಿಚಾರಗಳನ್ನು ಹೇಳುವುದಾದರೆ, ಮೈಸೂರು ಸಂಸ್ಥಾನದಲ್ಲಿ crime detection ಕೆಲಸ, ಬಾಕಿ ಕಡೆಗಳಿಗೆ ಹೋಲಿಸಿ ನೋಡಿದರೆ, ಸಮರ್ಪಕವಾಗಿದೆಯೆಂದು ಹೇಳಬಹುದು. ಈ ಇಲಾಖೆಯವರು ಈ ವರ್ಷ ಕಂಡು ಹಿಡಿದಿರುವ cognizable cases 67 %, ಬಾಕಿ cases 52% ಎಂದು ಈ ಸಮಯದಲ್ಲಿ ಸಭೆಗೆ ತಿಳಿಸಲು ನನಗೆ ಸಂತೋಷವಾಗುತ್ತದೆ. ಇವರು ತಮಗೆ ನಿರ್ವಹಿಸಿದ ಕೆಲಸವನ್ನು ಸಮರ್ಪಕವಾಗಿ ಮಾಡುತ್ತಿದ್ದಾರೆಂಬುದಕ್ಕೆ ಇದೊಂದು ಕುರುಹು.

ಅನಂತರ ಚಾಲ್ತಿ ಸಾಲಿನಲ್ಲಿ ಯಾರೊಬ್ಬರಿಗೂ preventive detention ಕೊಟ್ಟಿಲ್ಲವೆಂಬ ಮತ್ತೊಂದು ಅಂಶವನ್ನು ಸಭೆಯ ಗಮನಕ್ಕೆ ತರುತ್ತೇನೆ.

ಇದಲ್ಲದೆ ಇಂಡಿಯನ್ ಪೋಲೀಸ್ ಸರ್ವಿಸ್ ಎಂಬ All India Service ಸ್ಕೀಂ ಒಂದನ್ನು ಭಾರತ ಸರ್ಕಾರದವರು ನಮ್ಮ ಸಂಸ್ಥಾನಕ್ಕೂ ಅನ್ವಯಿಸಿರುತ್ತಾರೆ. ಈ ಸ್ಕೀಂ ಪ್ರಕಾರ 1951ನೆಯ ಇಸವಿ ಜನವರಿ 26ನೆಯ ತಾರೀಖಿನಲ್ಲಿ ಹತ್ತುಮಂದಿ, 1952ನೆಯ ಮಾರ್ಚಿ 13ನೆಯ ತಾರೀಖಿನವರೆಗೆ 13 ಮಂದಿ, ಮತ್ತೆ ಆರು ಮಂದಿ, ಇತ್ತೀಚೆಗೆ ಒಬ್ಬಿಬ್ಬರು ಈ ಐ. ಪಿ. ಎಸ್. cadreಗೆ ಸೇರಿದ್ದಾರೆ.

ಒಬ್ಬ ಸದಸ್ಯರು.—ಅದರಿಂದಾಗಿರುವ ಪ್ರಯೋಜನವೇನು ?

ಶ್ರೀ ಎಚ್. ಸಿದ್ದವೀರಪ್ಪ.—ಅವರ Status ಜಾಸ್ತಿಯಾಗಿದೆ ಮತ್ತು ಅವರು ನಿರ್ವಹಿಸತಕ್ಕ ಕಾರ್ಯಗೌರವದ ಮಹತ್ವ ಜಾಸ್ತಿಯಾಗಿದೆ.

Mr. SPEAKER.—No interruptions please. Let not the Hon'ble Minister be disturbed.

ಶ್ರೀ ಎಚ್. ಸಿದ್ದವೀರಪ್ಪ.—ಈ ಐ. ಪಿ. ಎಸ್. cadreಗೆ ಸೇರಿದ ಮೇಲೆ ಈ ಅಧಿಕಾರಿಗಳ ಕಾರ್ಯ ನಿರ್ವಹಣೆಗೆ ಒಂದು ರೀತಿಯ ಮಾನ್ಯತೆ ಬಂದಿರುವುದಲ್ಲದೆ, ಇವರ ಸಂಬಳ ಸಾರಿಗೆಗಳು ಸಹ ಜಾಸ್ತಿಯಾಗಿವೆ. ಇದರ reflection ತಮ ಗೆಬಡ್ಜೆಟ್ಟಿನ ಅಂಕಿ ಅಂಶಗಳಿಂದ ಕಂಡು ಬರುತ್ತದೆ.

ಇನ್ನು ಈ ಇಲಾಖೆಯವರು ಏರ್ಪಡಿಸಿಕೊಂಡಿರುವ ವಾಹನ ಸೌಕರ್ಯಗಳ ವಿಚಾರ. ಇದುವರೆಗೂ ವ್ಯಾನ್ಸ್ ಇದ್ದು ಯಾವುದಕ್ಕೂ ಅನುಕೂಲವಾಗಿರದೆ ಈ ಇಲಾಖೆಯ ಕೆಲಸ ಅಷ್ಟು ಚೆನ್ನಾಗಿ ನಡೆಯುತ್ತಿರಲಿಲ್ಲ. ಈ ಇಲಾಖೆಗೆ efficient transtport system ವ್ಯವಸ್ಥೆ ಅತ್ಯವಶ್ಯಕವೆಂದು ಕಂಡು ಬಂದುದರಿಂದ ಇದನ್ನು ಈಗ ಸುವ್ಯವಸ್ಥಿತ ರೀತಿಯಲ್ಲಿ ಏರ್ಪಡಿಸಿದೆ.

ಇನ್ನೊಂದು ಮುಖ್ಯ ಅಂಶವನ್ನು ಈ ಸಭೆಯ ಗಮನಕ್ಕೆ ತರಬೇಕಾಗಿದೆ. ನಮ್ಮ ಸಂಸ್ಥಾನದ ಈ ಇಲಾಖೆಯ ಇಬ್ಬರು ಉನ್ನತಾಧಿಕಾರಿಗಳಿಗೆ ಭಾರತದ ಅಧ್ಯಕ್ಷರ ಕಾರ್ಯದಕ್ಷತೆ ಮೆಡಲ್ ಬಂದಿದೆ. ಇನ್ಸ್ಪೆಕ್ಟರ್ ಜನರಲ್ ಆಫ್ ಪೋಲೀಸ್ ಹುದ್ದೆಯಲ್ಲಿರುವ ಶ್ರೀ ಬಾಬುರೆಡ್ಡಿಯವರಿಗೂ ಮತ್ತು ಸೀನಿಯರ್ ಡೆಪ್ಯುಟಿ ಇನ್ಸ್ಪೆಕ್ಟರ್ ಜನರಲ್ ಹುದ್ದೆಯಲ್ಲಿರುವ ಶ್ರೀ ತಿಮ್ಮರಾಜ ಅರಸಿನವರಿಗೂ ಈ ಸನ್ಮಾನ ದೊರೆತಿದೆ. ಇದು ನಾವೆಲ್ಲರೂ ಹೆಮ್ಮೆ ಪಡತಕ್ಕ ವಿಚಾರ.

ಈ ವರ್ಷ All India Sports Meet ನಮ್ಮ ಸಂಸ್ಥಾನದಲ್ಲಿ ಜನವರಿಯಲ್ಲಿ ಏರ್ಪಡಿಸಿದ್ದುದು ತಮಗೆಲ್ಲ ತಿಳಿದಿರುವ ವಿಷಯವೇ ಆಗಿದೆ. ಈ ಸಮಾರಂಭದಲ್ಲಿ ಹಿಂದುಸ್ಥಾನದ ಎಲ್ಲಾ ಪೋಲೀಸ್ ಇಲಾಖೆಯ ಉನ್ನತಾಧಿಕಾರಿಗಳೂ ಒಂದು ಗೂಡಿ ಸೇರಿ ವಿಚಾರ ವಿನಿಮಯ ಮಾಡಿಕೊಳ್ಳುವುದಕ್ಕೂ ಮತ್ತು sportsನಲ್ಲಿ ಅವರ ಶಕ್ತಿ ಸಾಮಾರ್ಥ್ಯಗಳನ್ನು ಪ್ರದರ್ಶಿಸುವುದಕ್ಕೂ ಅವಕಾಶವಿತ್ತು. ಹಿಂದೂಸ್ಥಾನದ ನಾನಾ ಭಾಗಗಳಿಂದ ಬಂದಿದ್ದ ಇಲಾಖಾ ಉನ್ನತಾಧಿಕಾರಿಗಳು ಸಹ ನಮ್ಮ ಪೋಲೀಸ್ ಅಧಿಕಾರಿಗಳ ವಿಚಾರದಲ್ಲಿ ಒಳ್ಳೆಯ ಅಭಿಪ್ರಾಯವನ್ನು ವ್ಯಕ್ತಪಡಿಸಿರುತಾರೆ.

ಒಟ್ಟಿನಲ್ಲಿ ನಮ್ಮ ಸಂಸ್ಥಾನದಲ್ಲಿ ಪೋಲೀಸ್ ಅಧಿಕಾರಿಗಳ ಕಾರ್ಯ ಚಟುವಟಿಕೆ ಚೆನ್ನಾಗಿದೆ; ಇವರ ವಿಚಾರದಲ್ಲಿ ಸಾರ್ವಜನಿಕರ ಸಹಕಾರ ಮನೋಭಾವದಿಂದ ವರ್ತಿಸಬೇಕು. ಆಗ ಇವರಿಗೂ ಅವರಿಗೂ ಅನ್ಯೋನ್ಯ ಮನೋಭಾವ ಬೆಳೆಯುವುದಕ್ಕೆ ಸಹಾಯಕವಾಗುತ್ತದೆ. ಇಷ್ಟು ಹೇಳಿ ಈಗ ಸಭೆಯ ಮುಂದೆ ಇಟ್ಟಿರುವ ಡಿಮ್ಯಾಂಡಿಗೆ ತಮ್ಮೆಲ್ಲರ ಒಪ್ಪಿಗೆ ಕೊಡಬೇಕೆಂದು ಕೇಳುತ್ತೇನೆ.

Mr. SPEAKER.—The House will now rise for lunch and reassemble at 11-10 A.M.

The House adjourned for Lunch at forty minutes past ten of the clock and reassembled past Eleven of the clock.

[Mr. SPEAKER in the Chair]

Re-organising the territorial jurisdiction of the Sub-Inspectors of Police of Srirangapatna and Pandavapura.

ಶ್ರೀ ಬಿ. ವೈ. ನೀಲೇಗೌಡ (ಪಾಂಡವಪುರ).—ಸ್ವಾಮಿ 27ನೇ ಖೋತಾ ನಿರ್ಣಯವನ್ನು ತಮ್ಮ ಅನುಮತಿಬೇಡಿ ಮಂಡಿಸುತ್ತೇನೆ.

"That the demand under the head 29 Police for Rs. 1,12,86,000 be reduced by Rs. 100 (to raise a debate on the necessity of re-organising the territorial jurisdiction of Srirangapatna and Pandavapura Sub-Inspectors of police.)"

ಪಾಂಡವಪುರ ತಾಲ್ಲೂಕಿಗೆ ಸೇರಿದ ಕೆಲವು ಸ್ಥಳಗಳು ಶ್ರೀರಂಗಪಟ್ಟಣದ ಸಬ್‌ಇನ್ಸ್ಪೆಕ್ಟರ್ ಅಧಿಕಾರ ವ್ಯಾಪ್ತಿಗೂ, ಶ್ರೀರಂಗಪಟ್ಟಣ ತಾಲ್ಲೂಕಿನ ಕೆಲವು ಸ್ಥಳಗಳು ಪಾಂಡವಪುರದ ಸಬ್‌ಇನ್ಸ್ಪೆಕ್ಟರ ಅಧಿಕಾರ ವ್ಯಾಪ್ತಿಗೂ ಬಂದಿವೆ. ಇದರಲ್ಲಿ ಶ್ರೀರಂಗಪಟ್ಟಣ ಅಥವಾ ಪಾಂಡವಪುರ ಟೌನಿಗೆ ಹತ್ತಿರದಲ್ಲಿರತಕ್ಕ ಸ್ಥಳಗಳನ್ನು ಸೇರಿಸಿದ್ದಾರೆ. ಅದರಲ್ಲಿ ಏನು ಒಂದು ತಿರುಳಿದೆಯೋ ಗೊತ್ತಿಲ್ಲ. ಕೇವಲ ಶ್ರೀರಂಗಪಟ್ಟಣ ಟೌನಿಗೆ ಒಂದು ಮೈಲಿ ದೂರದಲ್ಲಿ ಕೂಡಲಕುಪ್ಪೆ ಎಂದು ಒಂದು ಗ್ರಾಮ ಇದೆ. ಅದು ಪಾಂಡವಪುರಕ್ಕೆ 5 - 6 ಮೈಲಿ ದೂರ ಆಗುತ್ತದೆ. ಅದನ್ನು ಪಾಂಡವಪುರ ಸಬ್ ಇನ್ಸ್ಪೆಕ್ಟರ ಅಧಿಕಾರ ವ್ಯಾಪ್ತಿಗೆ ಸೇರಿಸಿದ್ದಾರೆ. ಇನ್ನೊಂದು ಸೀತಾಪುರ ಎಂದು ಇದೆ, ಅದು ಪಾಂಡವಪುರಕ್ಕೆ 3 ಮೈಲಿ ಆಗುತ್ತದೆ, ಶ್ರೀರಂಗಪಟ್ಟಣಕ್ಕೆ 7 ಮೈಲಿ ಆಗುತ್ತದೆ; ಅದನ್ನು ಶ್ರೀರಂಗಪಟ್ಟಣಕ್ಕೆ ಸೇರಿಸಿದ್ದಾರೆ. ಅನೇಕ ವೇಳೆ ಪೋಲೀಸ್ ಅಧಿಕಾರಿಗಳಿಗೆ ಸ್ಥಳದ ವಿದ್ಯಮಾನ ಚೆನ್ನಾಗಿ ಗೊತ್ತಿಲ್ಲದೇ ಇದ್ದರೆ ಅವರು ದಕ್ಷತೆಯಿಂದ ಕೆಲಸಮಾಡಲು ಕಷ್ಟವಾಗುತ್ತದೆ. ನಾನು ಕಂಡ ಹಾಗೆ ಪೋಲೀಸ್‌ನವರ ವ್ಯಾಪ್ತಿ ಆಯಾ ತಾಲ್ಲೂಕಿಗೇ ಇರುತ್ತದೆ ಎಂದುಕೊಂಡಿದ್ದೇನೆ. ಅನೇಕ ವೇಳೆ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಹೋಗಿ ಕೆಲಸಮಾಡುವುದರಿಂದ ಕೇಸು ಕೆಟ್ಟುಹೋಗುತ್ತದೆ. ಆದ್ದರಿಂದ ಜನಗಳ ದೃಷ್ಟಿಯಿಂದಲೂ, ಪೋಲೀಸ್ ಅಧಿಕಾರಿಗಳ ದಕ್ಷತೆಯ ದೃಷ್ಟಿಯಿಂದಲೂ ಪಾಂಡವಪುರ ತಾಲ್ಲೂಕಿಗೆ ಸೇರಿದ ಸ್ಥಳಗಳ ವ್ಯಾಪ್ತಿಯನ್ನು ಪಾಂಡವಪುರಕ್ಕೂ, ಶ್ರೀರಂಗಪಟ್ಟಣ ತಾಲ್ಲೂಕಿಗೆ ಸೇರಿದ ಸ್ಥಳಗಳ ವ್ಯಾಪ್ತಿಯನ್ನು ಶ್ರೀರಂಗಪಟ್ಟಣಕ್ಕೂ ಸೇರಿಸಬೇಕೆಂದು ಮನವಿಮಾಡಿಕೊಳ್ಳುತ್ತೇನೆ.

Mr. SPEAKER.—Cut motion moved.—

"That the demand be reduced by Rs. 100."

ಶ್ರೀ ಎಚ್. ಸಿದ್ದವೀರಪ್ಪ.—ನನ್ನ ಮಾನ್ಯ ಸ್ನೇಹಿತರು ತಂದಿರತಕ್ಕ ಈ ಖೋತಾ ನಿರ್ಣಯದ ವಿಚಾರದಲ್ಲಿ ಇನ್ಸ್ಪೆಕ್ಟರ್ ಜನರಲ್ ಆಫ್ ಪೋಲೀಸ್‌ರವರು ಸ್ಥಳದ ತನಿಖೆಮಾಡಿ ಒಂದು ವರದಿಮಾಡಲಿಕ್ಕೆ ಕಳುಹಿಸಿಕೊಡುತ್ತೇನೆ; ಆ ವರದಿ ಬಂದ ಮೇಲೆ ಯಾವ ಸೂಕ್ತ ಕಾರ್ಯ ಕ್ರಮ ಕೈಕೊಳ್ಳಬೇಕೋ ಅದನ್ನು ಕೈಕೊಳ್ಳುತ್ತೇನೆ. ಮಾನ್ಯ ಸ್ನೇಹಿತರು ಈ ಭರವಸೆಯ ಮೇಲೆ ಖೋತಾ ನಿರ್ಣಯವನ್ನು ವಾಪಸು ತೆಗೆದು ಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

Sri B. Y. NEELE GOWDA.—I seek leave to withdraw my cut motion.

The cut motion was, by leave, withdrawn.

Mr. SPEAKER.—Sri H. K. Shivarudrappa wants to move cut motion No. 29 instead of 30. He may do so.

Paying bata to the prosecution witness of the all criminal courts

***Sri H. K. SHIVARUDRAPPA** (Gundlupet Heggaddevanakote).—I beg to move:

> That the demand under the head "29. Police" for Rs. 1,12,86,000 be reduced by Rs. 100 (to bring to the notice of the Government the desirability of paying bata to the prosecution witnesses of all criminal courts in the State).

ಸ್ವಾಮಿ, ಇವೊತ್ತಿನ ದಿವಸ ಈ ಕ್ರಿಮಿನಲ್ ಕೋರ್ಟಿಗೆ ಹೋಗತಕ್ಕ ಪ್ರಾಸಿಕ್ಯೂಷನ್ ಸಾಕ್ಷಿಗಳಿಗೆ ಸರ್ಕಾರದವರು ಯಾವ ಭತ್ಯವನ್ನು ಕೊಡುವುದಕ್ಕೂ ಅವಕಾಶ ಮಾಡಿಲ್ಲ. ಆದರಲ್ಲಿ ಆಫಿಷಿಯಲ್‌ಸ್‌ಗೆ ಮಾತ್ರ ಕೊಡುತ್ತೀರಿ ನಾನ್ ಅಫಿಷಿಯಲ್‌ಸ್‌ಗೆ ಕೊಡುತ್ತಾ ಇಲ್ಲ ಎಂಬುದನ್ನು ತಮ್ಮ ಗಮನಕ್ಕೆ ತರುತ್ತೇನೆ. ಅನೇಕ ಕೇಸುಗಳಲ್ಲಿ ಅವರು ಅಪರಾಧ ಮಾಡಿರುವವರಲ್ಲ, ತಕ್ಸೀರು ಮಾಡಿರುವವರಲ್ಲ ಅಥವಾ ಶಿಕ್ಷೆಗೆ ಒಳಗಾಗಿರತಕ್ಕವರಲ್ಲ. ಆ ಸಾಕ್ಷಿಗಳು ಸರ್ಕಾರದ ಪ್ರಾಸಿಕ್ಯೂಷನ್ ಪರ ಸಾಕ್ಷಿ ಹೇಳುವುದಕ್ಕೆ ಹೋಗಬೇಕಾದರೆ ತಮ್ಮ ಕೈಯಿಂದ ಖರ್ಚುಹಾಕಿಕೊಂಡು ತಮ್ಮ ಕೆಲಸ ಕಾರ್ಯಗಳನ್ನೆಲ್ಲಾ ಬಿಟ್ಟು ಅಲ್ಲಿಗೆ ಹೋಗಿ ರುಜುವಾತು ಕೊಡಬೇಕಾಗುತ್ತದೆ. ಇದು ಬಹಳ ಅನ್ಯಾಯ, ಸ್ವಾಮಿ. ಈಗ ಕೆಲವು ಸಂದರ್ಭಗಳಲ್ಲಿ ಏನುಮಾಡುತ್ತಾರೆ ಎಂದರೆ, ಬಹಳ ಸಣ್ಣ ಸಣ್ಣ ಕೇಸುಗಳು ಇರುತ್ತವೆ; ಜಲಭಾಧೆ ಮಾಡಿದ ಕೇಸು, ಮುಂತಾದುವನ್ನು ಪೋಲೀಸ್ ಆಕ್ಟ್ ಪ್ರಕಾರ ಹಾಕುತ್ತಾರೆ. ಅಕಸ್ಮಾತ್ತಾಗಿ ಜಲಬಾಧೆಮಾಡುವ ಕಡೆ ಯಾರಾದರೂ ಒಬ್ಬರು ನಿಂತಿದ್ದರೆ ಅವರನ್ನು ಪ್ರಾಸಿಕ್ಯೂಷನ್ ವಿಟ್‌ನೆಸ್ ಆಗಿ ಸೈಟ್ ಮಾಡುತ್ತಾರೆ. ಬರುವುದಕ್ಕಾಗುವುದಿಲ್ಲ ಎಂದು ಅವನು ಹೇಳುವಹಾಗಿಲ್ಲ, ಪೋಲೀಸ್‌ನವರು ಪ್ರಾಸಿಕ್ಯೂಷನ್ ಸಾಕ್ಷಿಯಾಗಿ ಕರೆದರೆ ಅವನು ಹೋಗಲೇಬೇಕು. ಹೋಗಬೇಕಾದರೆ ಕೈಯಿಂದ ಖರ್ಚುಹಾಕಿಕೊಂಡು ಕೋರ್ಟಿಗೆ ಹೋಗಿ ಸಾಕ್ಷಿ ಹೇಳಬೇಕು. ಕೆಲವು ಕಡೆ 20-30-40 ಮೈಲಿ ಜ್ಯೂರಿಸ್‌ಡಿಕ್ಷನ್ ಇರುತ್ತದೆ. ಅಂಥಕಡೆ ಹೋಗಬೇಕಾದರೆ ಅವನು ಬಸ್‌ಚಾರ್ಜು, ತಿಂಡಿಖರ್ಚು, ಊಟದಖರ್ಚು ಎಲ್ಲವನ್ನೂ ತನ್ನ ಕೈಯಿಂದ ಹಾಕಿಕೊಂಡು ಹೋಗಬೇಕು. ಕೆಲವು ಸಂದರ್ಭಗಳಲ್ಲಿ ಪೋಲೀಸ್‌ನವರು ಎಷ್ಟೋ ಬಸ್ಸುಗಳಲ್ಲಿ ತಾವೂ ಬಿಟ್ಟು ಹೋಗುವುದಲ್ಲದೆ ಅವರನ್ನು ಸಹ ಬಿಟ್ಟಿ ಕರೆದುಕೊಂಡು ಹೋಗಿ ಎಂದು ಬಸ್ಸಿನವರನ್ನು ಒತ್ತಾಯ ಮಾಡುತ್ತಾರೆ; ನಾನು ನೋಡಿದ್ದೇನೆ. ಬಸ್ಸಿನವರು ಕೂಡಿಸಿಕೊಳ್ಳುವುದಿಲ್ಲ ಎಂದರೆ ಕೇಸುಹಾಕುತ್ತೇವೆ ಎಂದು ಬೆದರಿಸಿರುವ ಸಂದರ್ಭ ಕೂಡ ಇದೆ. ಹೀಗಾಗಿ ಕೆಲವು ಸಂದರ್ಭಗಳಲ್ಲಿ ನಿರ್ದಾಕ್ಷಿಣ್ಯವಾಗಿ ತನ್ನ ರುಜುವಾತನ್ನು ಕೊಡಲಿಕ್ಕೆ ಸಾಕ್ಷಿಗೆ ಇದೆಲ್ಲಾ ಅಡ್ಡಿ ಬರುತ್ತದೆ, ಪ್ರತಿಬಂಧಕ ಬರುತ್ತದೆ, ನ್ಯಾಯರೀತಿಯಲ್ಲಿ ನಡೆದುಕೊಳ್ಳುವುದಕ್ಕೆ ಅವಕಾಶವಾಗುವುದಿಲ್ಲ. ಇದನ್ನು ತಾವು ಸರ್ಕಾರದವರು ಯೋಚನೆ ಮಾಡಬೇಕು ಎಂದು ಪ್ರಾರ್ಥಿಸುತ್ತೇನೆ. ಅಲ್ಲದೆ, ಸ್ವಾಮಿ, ಕೆಲವು ಸಂದರ್ಭಗಳಲ್ಲಿ ಭತ್ಯ ಕೊಟ್ಟಿರುವ ಉದಾಹರಣೆ ಕೂಡ ಇದೆ. ಡಾಕ್ಟರುಗಳಿಗೆ ಭತ್ಯ ಕೊಡುತ್ತೀರಿ. ಹೀಗಿರುವಾಗ ನಾನ್ ಅಫಿಷಿಯಲ್‌ಸ್‌ಗೆ ಏಕೆ ಕೊಡುತ್ತಾ ಇಲ್ಲ ಎಂಬುದನ್ನು ತಾವು ಯೋಚನೆಮಾಡಬೇಕು. ಕೇವಲ ಬಡವರಾಗಿದ್ದರೆ, ತಾವು ಭತ್ಯಕೊಡದೇ ಇರುವ ಪ್ರಯುಕ್ತ, ಸಾಕ್ಷಿ ಕೊಡಬೇಕೆಂದರೆ, ನಡೆದುಕೊಂಡು ಹೋಗಬೇಕು. ಇಲ್ಲದೇ ಇದ್ದರೆ–ಕ್ರಿಮಿನಲ್ ಕೋರ್ಟ್–ವಾರಂಟ್ ಬರುತ್ತದೆ. ಆದ್ದರಿಂದ ಸರ್ಕಾರದವರು ಇದನ್ನು ತೀವ್ರಾಲೋಚನೆಮಾಡಿ ಭತ್ಯ ಕೊಡಿಸುವುದಕ್ಕೆ ಅವಕಾಶ ಮಾಡಿಕೊಡಬೇಕು, ಇಲ್ಲದೆ ಇದ್ದರೆ ನ್ಯಾಯ ದೊರಕುವುದಕ್ಕೆ ಪ್ರತಿಬಂಧಕವಾಗುತ್ತದೆ ಎಂದು ಹೇಳಿ ಈ ಖೋತಾ ನಿರ್ಣಯವನ್ನು ಸಭೆಯ ಮುಂದೆ ಇಟ್ಟಿದ್ದೇನೆ.

Mr. SPEAKER.—Cut motion moved.

"That the demand be reduced by Rs. 100."

ಶ್ರೀ ಎಚ್. ಸಿದ್ಧವೀರಪ್ಪ (ಒಳಾಡಳಿತ ಮತ್ತು ಕೈಗಾರಿಕೆ ಮಂತ್ರಿಗಳು).—ಸ್ವಾಮಿ, ಈ ಕೋರ್ಟುಗಳಲ್ಲಿ ಸಾಕ್ಷಿ ಹೇಳತಕ್ಕದ್ದು ಪ್ರತಿಯೊಬ್ಬ ನಾಗರೀಕನ ಒಂದು ಪವಿತ್ರ ಕರ್ತವ್ಯಎಂಬುದನ್ನು ಮರೆಯಬಾರದು. ನ್ಯಾಯವನ್ನು ಎತ್ತಿಹಿಡಿಯ ಬೇಕಾದರೆ, ಕಂಡ ಅಂಶವನ್ನು ಕೋರ್ಟಿನಲ್ಲ ಸಾಕ್ಷಿ ಹೇಳಿಯೇ ತೀರಬೇಕು. ಇಂಗ್ಲಿಷ್ ಜ್ಯೂರಿಸ್ ಪ್ರುಡೆನ್ಸ್ ನ್ಯಾಯಶಾಸ್ತ್ರದ ಪ್ರಕಾರವೂ ಕೂಡ ತಾನು ಕಂಡದ್ದು ಏನು ಎಂಬುದನ್ನು ಸಾಕ್ಷಿ ಹೇಳಬೇಕಾದದ್ದು ಕರ್ತವ್ಯ ಎಂಬುದನ್ನು ಮರೆಯಕೂಡದು. ಅಲ್ಲದೆ ಈಗ ತಾವು ಹೇಳಿದ ಪ್ರಕಾರ, ಕೋರ್ಟಿನಲ್ಲಿ ಸಾಕ್ಷಿ ಹೇಳುವವರಿಗೆ, ತಮಗೇ ಗೊತ್ತಿರುವಹಾಗೆ, ಸೆಷನ್ಸ್ ಕೋರ್ಟಿಗೆ ಭತ್ಯವನ್ನು ನಾನ್ ಆಫಿಷಿಯಲ್ಸ್ ಮತ್ತು ಆಫಿಷಿಯಲ್ಸ್‌ಗೂ ಕೊಡುತ್ತೇವೆ. ಯಾವ ಸಂದರ್ಭಧಲ್ಲಿ ನಾನ್ ಅಫಿಷಿಯಲ್ಸ್‌ಗೆ ಕೊಡಬೇಕೆಂದಿದೆ ಎಂದರೆ, ಬಹಳ ಹೆಚ್ಚು ಖರ್ಚು ಬೀಳುವುದಾದರೆ, ಉದಾಹರಣೆಗೆ ಬಹಳ ದೂರದಿಂದ ಕರೆಸಿದರೆ ಬಹಳ ದುಡ್ಡು ಖರ್ಚಾಗುತ್ತದೆ. ಆ ಸಮಯದಲ್ಲಿ, ಅದೂ ಅವರು ಕಡು ಬಡವರಾದರೆ ಅಂಥವರ ದೃಷ್ಟಿಯಲ್ಲಿ ಸ್ವಲ್ಪಯೋಚನೆ ಮಾಡಬೇಕು. ಈರೀತಿ ಒಂದು ನಿಯಮವಿದೆ. ಅಧಿಕಾರಿಗಳಿಗೆ ಏಕೆ ಕೊಡುತ್ತೀರಿ ಎಂದರೆ ಅಧಿಕಾರಿಗಳು ಅಫಿಷಿಯಲ್ ಡ್ಯೂಟಿ ಮಾಡುತ್ತಾ ಇರುವುದರಿಂದ ಅವರಿಗೆ ರೂಲ್ಸ್ ಪ್ರಕಾರ ಕೊಡಬೇಕಾಗುತ್ತದೆ. ತಾವು ಹೇಳುವ ಒಂದು ಅಂಶವನ್ನು ಗಮನಿಸಿದರೆ, ಬಡ್ಜೆಟ್ಟಿನಲ್ಲಿ ಲಕ್ಷಾಂತರಗಟ್ಟಲೆ ರೂಪಾಯಿ ಇದಕ್ಕೆ ತೆಗೆದಿಡ ಬೇಕಾಗುತ್ತದೆ. ಆದಾಕ್ಷಣಕ್ಕೇ, ಹಣ ಖರ್ಚಾಗುವುದರಿಂದ ಮಾಡಕೂಡದು ಎಂಬ ವಾದ ಇಡುತ್ತಾ ಇಲ್ಲ. ಒಟ್ಟಿನಲ್ಲಿ ತತ್ವ ಏನೆಂದರೆ, ಧರ್ಮ ಪರಿಪಾಲನೆಗೆ ಸಾಕ್ಷಿ ಹೇಳಬೇಕಾದದ್ದು ಆ ಸಾಕ್ಷಿಯ ಪವಿತ್ರ ಕರ್ತವ್ಯವಾಗಿದೆ. ಎಲ್ಲಿ ನ್ಯಾಯಾಸ್ಥಾನವಿದೆಯೋ ಅಲ್ಲಿಗೆ ಹೋಗಿ ಸಾಕ್ಷಿ ನುಡಿಯಬೇಕಾದದ್ದು ಕರ್ತವ್ಯ ಎಂಬ ತತ್ವ

ಇಟ್ಟುಕೊಂಡರೆ ಹಣಕಾಸಿನ ವಿಚಾರ ಅಡ್ಡಿ ಬರಲಾರದು ಎಂದು ಹೇಳಿದರೆ, ಮಾನ್ಯ ಸ್ನೇಹಿತರು ಒಪ್ಪುತ್ತಾರೆ ಎಂದು ತಿಳಿದುಕೊಂಡಿದ್ದೇನೆ.

ಪೋಲೀಸ್‌ನವರು ಬಸ್ಸುಗಳಲ್ಲಿ ಬಿಟ್ಟಿ ಹೋಗುತ್ತಾರೆ ಎಂದು ಹೇಳಿದರು. ಇಷ್ಟು ಮಾತ್ರ ಹೇಳುತ್ತೇನೆ. ಪೋಲೀಸಿನವರನ್ನು ಆಕ್ಷೇಪಣೆ ಮಾಡತಕ್ಕದ್ದನ್ನು ಸರ್ವೇ ಸಾಧಾರಣವಾಗಿ ಪರಿಗಣಿಸಬಾರದೆಂದು ಹೇಳುತ್ತೇನೆ. ಎಲ್ಲೋ ಕೆಲವರು ಹಾಗೆ ಹೋಗಬಹುದು. ನಾನು ಹೇಳುವುದೇನೆಂದರೆ, ಸ್ಟ್ರಿಕ್ಟ್ ಆಗಿ ಗವರ್ನ್‌ಮೆಂಟ್ ಆರ್ಡರ್ ಸಾದರು ಮಾಡಿದ್ದೇವೆ. ಪೋಲೀಸ್ ಆಫೀಸರುಗಳಿಗೆ ಬಸ್ ಪರ್ಮಿಟ್ ಕೊಡುತ್ತಾ ಇದ್ದೇವೆ. ಬಿಟ್ಟಿ ಹೋಗಬೇಕಾದ ಅವಶ್ಯಕತೆ ಇಲ್ಲ. ಬಸ್‌ವಾರಂಟ್ ಕೊಡುತ್ತೇವೆ. ಅದರ ಪ್ರಕಾರ ಪ್ರಯಾಣಮಾಡಲಿಕ್ಕೆ ಅವಕಾಶ ಇದ್ದೇ ಇದೆ. ಯಾವ ರೀತಿಯಾಗಿಯೂ ಬಸ್ಸಿನವರ ದಯಾದಾಕ್ಷಿಣ್ಯಕ್ಕೆ ಒಳಗಾಗಬಾರದು ಎಂದು ನಾನೂ ಸಹ ತಿಳಿಸಿದ್ದೇನೆ. ಯಾರ ಹಂಗೂ ಮನುಷ್ಯನಿಗೆ ಇರಬಾರದು. ಆ ದೃಷ್ಟಿಯಿಂದ ಅವರು ಬಿಟ್ಟೀ ಪ್ರಯಾಣ ಮಾಡುವುದಿಲ್ಲ ಎಂದು ತಿಳಿದು ಕೊಂಡಿದ್ದೇನೆ. ಹಣಕಾಸಿನ ಪರಿಸ್ಥಿತಿ ಒಂದು ಅಲ್ಲ, ನಾನು ಹೇಳಿದ ತತ್ವ ಪರಿಪಾಲನೆ ದೃಷ್ಟಿಯಿಂದಲೂ ನನ್ನ ಮಾನ್ಯ ಸ್ನೇಹಿತರು ಈ ಖೋತಾ ನಿರ್ಣಯವನ್ನು ವಾಪಸುತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ನಾರಾಯಣಸ್ವಾಮಿ (ಮೈಸೂರು ಸಿಟಿ ದಕ್ಷಿಣ).—ಸೆಷನ್ ಕೋರ್ಟಿನಲ್ಲಿ ಪ್ರಾಸಿಕ್ಯೂಷನ್ ಎವಿಡೆನ್ಸ್ ಕೊಡಬೇಕಾದರೆ............

Sri H. SIDDAVEERAPPA.—In the Sessions courts, as you are all well aware, both the prosecution and defence witnesses are paid batta,

ಶ್ರೀ ಬಿ. ನಾರಾಯಣಸ್ವಾಮಿ.—ಪ್ರಾಸಿಕ್ಯೂಷನ್ ಎವಿಡೆನ್ಸ್ ಕೊಡಬೇಕಾದರೆ ಅಂಥ ಸಂದರ್ಭದಲ್ಲಿ ಭತ್ಯ ಕೊಡಬೇಕಾದ್ದು ಸರಿ. Accused ಬಡವನಾಗಿಲ್ಲದಿದ್ದ ಪಕ್ಷದಲ್ಲಿ ಡಿಫೆನ್ಸ್ ವಿಟ್‌ನೆಸ್‌ಗೂ ಕೊಡುವುದು ತತ್ವದೃಷ್ಟಿಯಿಂದ ಸರಿಯಿಲ್ಲ ಎಂದು ಹೇಳಿದೆ ಅಷ್ಟೆ.

Sri H. SIDDAVEERAPPA.—I will get the question further examined, Sir. If there are any defects that can be rectified consistently with the policy that I have already stated, I will further examine this question.

Sri H. K. SHIVARUDRAPPA.—I seek leave to withdraw my cut motion.

Cut motion was, by leave, withdrawn.

Sri R. ANANTARAMAN (Chamarajapet).—Sir, before the next cut motion is taken, I have a request to make Mr. Speaker. Cut motion No. 31 stands in my name. Please permit me to speak on No. 32 or 34. Because 31 is not going to be taken as it is not included in the list.

Sri R. ANANTARAMAN.—In the list that is furnished to me, there is no cut motion in your name.

Sri R. ANANTARAMAN.—I was not consulted and I was not given any opportunity when that list was framed, Sir.

Mr. SPEAKER.—If any Member insists on his right, I cannot say no. But we have come to a clear understanding and we are acting on that. It is left to the House to tell me how to proceed in such cases.

ಶ್ರೀ ಆರ್. ಅನಂತರಾಮನ್.—Understanding ಇರುವುದು ಒಪ್ಪಿಕೊಳ್ಳುತ್ತೇನೆ. ಆದರೆ ಇತರ ಖೋತಾ ನಿರ್ಣಯಗಳು ಬಂದಾಗಲೂ ನಮಗೆ ಅವಕಾಶ ಕೊಡಿ ಎಂಬುದಷ್ಟೆ ನನ್ನ ಕೋರಿಕೆ. 32-34 ನೇ ಖೋತಾ ನಿರ್ಣಯಗಳ ಬಗ್ಗೆ ವಿರೋಧಿಸಿ ಮಾತನಾಡಬೇಕಾಗಿದೆ. ಅದಕ್ಕೆ ಅವಕಾಶ ಕೊಡಬೇಕೆಂದು ಹೇಳುತ್ತೇನೆ.

Mr. SPEAKER.—The clear understanding was, if the mover of the cut motion belongs to one party another chance must be given to the member of another party and *vice versa*. There ends the matter, and unless in the discretion of the Speaker a certain subject matter is important as to allow further discnssion. I cannot understand your attitude Sri Anantaraman.

ಶ್ರೀ ಆರ್. ಅನಂತರಾಮನ್.—34ನೇ ಖೋತಾ ನಿರ್ಣಯವನ್ನು ಎದುರುಪಕ್ಷದವರೇ ಕಳುಹಿಸಿದ್ದಾರೆ.

Mr. SPEAKER.—If you have got a right, you can rise in your seat. I will give you a chance.

Reducing the Police Force in the State.

ಶ್ರೀ ಜಿ. ನಾರಾಯಣಗೌಡ (ಮುಳಬಾಗಲು—ಶ್ರೀನಿವಾಸಪುರ)—ಸ್ವಾಮಿ, ನನ್ನ ಖೋತಾ ಸೂಚನೆಯು ಈ ರೀತಿಯಾಗಿದೆ :—

> "The demand under the head '29. Police' for Rs. 1,12,86,000 be reduced by Rs. 100 (to raise a discussion on the need for reducing Police force in the State.)"

ಸ್ವಾಮಿ, ಈ ಕತ್ತರಿ ನಿರ್ಣಯವನ್ನು ಸಭೆಯ ಮುಂದಿಡಲು ನನ್ನ ಉದ್ದೇಶವಾದರೂ ಇಷ್ಟೆ : ಈಗ ತಾನೆ ಮಾನ್ಯ ಗೃಹ ಮಂತ್ರಿಗಳು ಈ ಹಿಂದಿನ ಡಿವ್ಯಾಂಡಿನ ಬಗ್ಗೆ ತಂದಿದ್ದ ಕತ್ತರಿನಿರ್ಣಯದ ಪರವಾಗಿ ಮಾತನಾಡುತ್ತ ನಮ್ಮ ಪೋಲೀಸ್ ದಳಗಳು ಬಹಳ ದಕ್ಷತೆಯಿಂದ ಕೆಲಸ ಮಾಡುತ್ತಿವೆಯೆಂದು ಹೇಳಿದರು. ಅವರು ಇನ್ನೂ ಚೆನ್ನಾಗಿ ಹೆಚ್ಚಿನ ದಕ್ಷತೆಯಿಂದ ಕೆಲಸ ಮಾಡಲು ಅನುಕೂಲವಾಗುವಂತೆ ಮಾಡುವುದಕ್ಕೂ

(ಶ್ರೀ ಜಿ. ನಾರಾಯಣಗೌಡ.)

ಮತ್ತು ನಮ್ಮ ದೇಶಕ್ಕೆ ಇವರಿಂದ ಕೀರ್ತಿ ಬರುವಂತೆ ಕೆಲಸ ಮಾಡುವಂತೆ ಮಾಡಬೇಕೆಂಬ ದೃಷ್ಟಿಯಿಂದಲೂ ಈ ನಿರ್ಣಯವನ್ನು ನಾನು ಈಗ ಸಭೆಯ ಮುಂದೆ ತಂದಿದ್ದೇನೆ.

ದಕ್ಷತೆಯನ್ನು ಹೆಚ್ಚು ಮಾಡಬೇಕೆಂಬ ಆಕಾಂಕ್ಷೆಯಿಂದ ಹಲವಾರು ದೊಡ್ಡ ದೊಡ್ಡ ಪೋಲೀಸ್ ಹುದ್ದೆಗಳನ್ನು ಕಲ್ಪಿಸಿಕೊಂಡಿರುವುದೇ ಅಲ್ಲದೇ ಇದರ ಜೊತೆಗೆ ಪೋಲೀಸ್ ದಳಗಳ ಸಂಖ್ಯೆಯನ್ನೂ ಸಹ ವರ್ಷೇ ವರ್ಷೇ ಹೇಗೆ ಏರಿಸಿಕೊಂಡು ಬರುತ್ತಿದ್ದಾರೆಂಬುದು ಚೆನ್ನಾಗಿ ಗೊತ್ತಾಗುತ್ತದೆ. ಈಗ ವಿವರಗಳನ್ನೆಲ್ಲಾ ಸಭೆಯಮುಂದಿಟ್ಟು ಈ ಹುದ್ದೆಗಳನ್ನು ಹೇಗೆ ಕಡಿಮೆ ಮಾಡುವುದಕ್ಕೆ ಅವಕಾಶವಿದೆಯೆಂಬುದನ್ನು ಹೇಳುತ್ತೇವೆ ಮತ್ತು ಈ ಡಿಮಾಂಡಿನಲ್ಲಿ ಎಷ್ಟು ಹಣವನ್ನು ಕೇಳಿದ್ದಾರೆ, ಈ ಪೈಕಿ ಕೆಳದರ್ಜೆ ನೌಕರರಿಗೆ ಏನು ಸಂಬಳ ಸಾರಿಗೆ ಕೊಡುತ್ತಿದ್ದಾರೆ, ಹೀಗೆ ಕೇವಲ ದೊಡ್ಡ ಹುದ್ದೆಗಳನ್ನು ಹೆಚ್ಚಿಸಿಕೊಂಡು ಹೋಗುತ್ತಿದ್ದರೆ ದಕ್ಷತೆ ಹೆಚ್ಚುವುದಕ್ಕೆ ಬದಲಾಗಿ ಹೇಗೆ ಅದು ಕುಗ್ಗುತ್ತದೆಂಬ ದನ್ನು ಮತ್ತು ಆ ದೃಷ್ಟಿಯಿಂದಲೇ ಈ ದೊಡ್ಡ ಹುದ್ದೆಗಳನ್ನು ಕಡಮೆ ಮಾಡಬೇಕೆಂಬುದನ್ನು ತಿಳಿಸತಕ್ಕದ್ದೇ ಈ ನನ್ನ ನಿರ್ಣಯದ ಉದ್ದೇಶ.

1935 ನೆಯ ಇಸವಿಯಿಂದ 1952 ನೆಯ ಇಸವಿಯವರೆಗೂ ಈ ಪೋಲೀಸ್ ಇಲಾಖೆಯಲ್ಲಿ ನೌಕರಿಗಳ ಸಂಖ್ಯೆಯನ್ನು ಹೇಗೆ ಹೆಚ್ಚಿಸಿಕೊಂಡು ಬರುತ್ತಿದ್ದಾರೆ ಎಂಬುದನ್ನು ನೋಡೋಣ. 1935 ರಲ್ಲಿ ಇದ್ದ 21 ಗೆಜೆಟೆಡ್ ನೌಕರಿಗಳನ್ನು 38 ಕ್ಕೆ ಏರಿಸಿದ್ದಾರೆ. 6,504 ನಾನ್ ಗೆಜೆಟೆಡ್ ಹುದ್ದೆಗಳಿದ್ದುದನ್ನು 10,886 ಕ್ಕೆ ಏರಿಸಿದ್ದಾರೆ. 96 ಪೋಲೀಸ್ ಇನ್ಸ್‌ಪೆಕ್ಟರುಗಳಿರುತ್ತಿದ್ದಕಡೆ 138 ಪೋಲೀಸ್ ಇನ್ಸ್‌ಪೆಕ್ಟರುಗಳಿರುತ್ತಾರೆ. 180 ಸಬ್ ಇನ್ಸ್‌ಪೆಕ್ಟರುಗಳಿದ್ದಕಡೆ 305 ಜನ ಸಬ್ ಇನ್ಸ್‌ಪೆಕ್ಟರುಗಳಾಗಿದ್ದಾರೆ. 71 ಜಮಾದಾರರಿದ್ದ ಕಡೆ 146 ಜಮಾದಾರರುಗಳಿದ್ದಾರೆ. ದಫೇದಾರರುಗಳ ಸಂಖ್ಯೆ 599 ಇದ್ದುದು ಈಗ 1212 ಕ್ಕೇರಿದೆ. ಪೋಲೀಸ್ ಕಾನ್ಸ್‌ಟೇಬಲ್ಲರ ಸಂಖ್ಯೆ 5,558 ಇದ್ದುದು ಈಗ 9,082 ಕ್ಕೆ ಏರಿರುತ್ತದೆ. 17 ಜನ ಜವಾನ್ ಸಿಬ್ಬಂದಿಯಿದ್ದದ್ದು 233 ಕ್ಕೇರಿದೆ. A. S. P. ಗಳು 17 ಜನರಿದ್ದಾರೆ. D. I. G. ಗಳು 3 ಜನ ಇದ್ದಾರೆ.

ಈಗ ನಾವು ನಮ್ಮ ದೇಶದಲ್ಲಿರತಕ್ಕ ಪೋಲೀಸ್ ಕಾನ್ಸ್‌ಟೇಬಲ್‌ಗಳಿಗೆ ಕೊಡುತ್ತಿರುವ ಸಂಬಳ ಹೊರಗಡೆ ಇರತಕ್ಕ ಇತರ ಸ್ಟೇಟ್ ಪೋಲೀಸಿನವರ ಸಂಬಳ ಸಾರಿಗೆಗಳಿಗಿಂತಲೂ ಜಾಸ್ತಿ ಇಲ್ಲ. ಇವರಿಗೆ ತೀರ ಕಡಮೆ ಸಂಬಳ. ತಿಂಗಳಿಗೆ ಇವರಿಗೆ 22 ರಿಂದ 30 ರೂಪಾಯಿಗಳವರೆಗೆ ಸಂಬಳ ಕೊಡಲಾಗುತ್ತಿದೆ. ಹೀಗೆ ಇವರಿಗೆ ಕೊಡಲಾಗುತ್ತಿರುವ ಇಷ್ಟು ಕಡಮೆ ಸಂಬಳದಲ್ಲಿ ಅವರು ಸಂಸಾರಗಳನ್ನು ನೀಸಲು ಎಷ್ಟು ಕಷ್ಟವಾಗುತ್ತಿರಬಹುದೆಂಬುದನ್ನು ಗಣನೆಗೆ ತೆಗೆದುಕೊಳ್ಳ ಬೇಕಾದದ್ದು ಬಹಳ ಮುಖ್ಯವಾದ ಅಂಶ. ಧಫೇದಾರರುಗಳಿಗೆ 35 ರಿಂದ 40 ರೂಪಾಯಿಗಳವರೆಗೂ ಸಂಬಳ ಸಾರಿಗೆಗಳನ್ನು ಕೊಡಲಾಗುತ್ತಿದೆ. ಇದು ಅವರಿಗೆ ಏತಕ್ಕೂ ಸಾಲದೆಂಬುದು ನಿರ್ವಿವಾದವಾದ ವಿಚಾರ. ಆದರೆ ಹೀಗೆ ಇವರಿಗೆ ಹೊಟ್ಟೆ ತುಂಬ ಕೊಡಲು ಸಾಧ್ಯವಿಲ್ಲವೆಂದು ಹೇಳುವಾಗ, ಮೇಲಿಂದ ಮೇಲೆ ಮೇಲುದರ್ಜೆಯ ಅಧಿಕಾರ ಸ್ಥಾನಗಳನ್ನು ಅನವಶ್ಯಕವಾಗಿದ್ದರೂ ಮತ್ತು ಈ ಹಿಂದೆ ಅವು ಅಷ್ಟು ಇಲ್ಲದೆ ಇದ್ದು ಅವುಗಳನ್ನು ಹೀಗೆ ಹೆಚ್ಚಿಸಿಕೊಂಡು ಬರುತ್ತಿರುವುದರ ಅರ್ಥ ನನಗೆ ಆಗುತ್ತಿಲ್ಲ. ನಮ್ಮ ಅಕ್ಕ ಪಕ್ಕದ ಮದ್ರಾಸ್, ಬೊಂಬಾಯಿ ಪ್ರಾಂತಗಳಲ್ಲಿ ಒಬ್ಬೊಬ್ಬ ಪೋಲೀಸ್ ಇನ್ಸ್‌ಪೆಕ್ಟರಿಗೆ ಎಷ್ಟೆಷ್ಟು ಜೂರಿಸ್ಡಿಕ್ಷನ್ ಇರುತ್ತದೆ, ಇಲ್ಲಿ ನಮ್ಮ ಸಂಸ್ಥಾನದಲ್ಲಿ ಪೋಲೀಸ್ ಇನ್ಸ್‌ಪೆಕ್ಟರಿಗೆ ಎಷ್ಟು ಜೂರಿಸ್ಡಿಕ್ಷನ್ ಇರುತ್ತದೆಂಬುದನ್ನು ಹೋಲಿಕೆ ಹಾಕಿ ನೋಡಿದರೆ, ಇದು ತುಂಬಾ ವ್ಯತ್ಯಾಸವಿರುವಂತೆ ಕಂಡುಬರುತ್ತದೆ. ಅವರಿಗೆ ಅಲ್ಲಿ ಸಂಬಳ ಸಾರಿಗೆಗಳನ್ನು ಜಾಸ್ತಿಯಾಗಿ ಕೊಡುತ್ತಿದ್ದಾರೆಂದು ತಾವೊಂದು ಮಾತು ಹೇಳಬಹುದು. ನಮ್ಮ ಪೋಲೀಸ್ ಇನ್ಸ್‌ಪೆಕ್ಟರುಗಳಿಗೂ ತಾವು ಅದೇ ರೀತಿ ಸಂಬಳ ಜಾಸ್ತಿ ಮಾಡಿ, ಜೂರಿಸ್ಡಿಕ್ಷನ್ನನ್ನೂ ಜಾಸ್ತಿ ಮಾಡಿ. ಹೀಗೆ ಮಾಡಿದರೂ ನಮಗೇನೂ ಹೆಚ್ಚಿನ ಹಣ ಖರ್ಚಾಗುವುದಿಲ್ಲ. ಇದರಿಂದ ನಮಗೆ ಇನ್ನೂ ಹಣ ಉಳಿತಾಯವಾಗುತ್ತದೆ. A. S. P. ಗಳನ್ನು ಕಡಮೆ ಮಾಡಬಹುದು. ಅಥವಾ ಒಂದು ವೇಳೆ ಅವರನ್ನು ಸಂಪೂರ್ಣವಾಗಿ ತೆಗೆದು ಹಾಕಿದರೂ ಹಾಕಬಹುದು. ನಮಗೇನೂ ಇದರಿಂದ ಕೊರತೆಯಾಗುವುದಿಲ್ಲ. ಹೀಗೆ ಹಣವನ್ನು ಉಳಿತಾಯ ಮಾಡಿ, ಕೆಳದರ್ಜೆಯವರಿಗೆ ಇನ್ನೂ ಸ್ವಲ್ಪ ಹೆಚ್ಚಿನ ಸಂಬಳ ಸಾರಿಗೆಯನ್ನು ಕೊಟ್ಟರೆ, ಅವರು ಇನ್ನೂ ಹೆಚ್ಚಿನ ಸಾಮರ್ಥ್ಯದಿಂದ ಕೆಲಸ ಮಾಡಲು ಒಂದು ಉತ್ತೇಜನ ಕೊಟ್ಟಹಾಗಾಗುತ್ತದೆ, ಇನ್ನು ಈ D. I. G. ಗಳ ಹುದ್ದೆಗಳಂತೂ ತೀರ ಅನವಶ್ಯಕ. ಈ ಹುದ್ದೆಗಳನ್ನೆಲ್ಲಾ ಸಂಪೂರ್ಣವಾಗಿ ತೆಗೆದು ಹಾಕಿಬಿಟ್ಟು, ಕೆಳದರ್ಜೆಯವರಿಗೆ ಇನ್ನೂ ಸ್ವಲ್ಪ ಹೆಚ್ಚಿನ ಸಂಬಳ ಸಾರಿಗೆಗಳನ್ನು ಕೊಟ್ಟರೆ ಆಗ ನಮ್ಮ ಮಾನ್ಯ ಮಂತ್ರಿಗಳು ಹೇಳಿದ್ದನ್ನು ನಾವು ಅಕ್ಷರಶಃ ಒಪ್ಪಿಕೊಳ್ಳಬೇಕಾಗುತ್ತದೆ. ಅವರೂ ಸಹ ಕೆಲಸ ಕಾರ್ಯಗಳನ್ನು ಹೆಚ್ಚಿನ ದಕ್ಷತೆಯಿಂದ ನಡೆಸಲು ಅನುಕೂಲವಾಗುತ್ತದೆ. ಈ ಉದ್ದೇಶದಿಂದ ಈ ಕತ್ತರಿನಿರ್ಣಯವನ್ನು ನಾನು ಈಗ ಸಭೆಯ ಮುಂದೆ ಮಂಡಿಸಿದ್ದೇನೆ. ಇದನ್ನು ಸರ್ಕಾರದವರು ಒಪ್ಪಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

Mr. SPEAKER.—Cut motion moved

"That the demand be reduced by Rs. 100."

Sri P. R. Ramiah's cut motion is of a similar nature. If he wants he may speak on this.

ಶ್ರೀ ಪಿ. ಆರ್. ರಾಮಯ್ಯ (ಬಸವನಗುಡಿ).—ಸ್ವಾಮಿ, ನನ್ನ ಹೆಸರಿನಲ್ಲಿರತಕ್ಕ ಖೋತಾ ನಿರ್ಣಯವನ್ನು ನಾನು move ಮಾಡಿ............

Mr. SPEAKER.—The Hon'ble Member need not move it. He can support the mover of the cut motion which is of the same subject matter.

ಶ್ರೀ ಪಿ. ಆರ್. ರಾಮಯ್ಯ.—ಸ್ವಾಮಿ, ಆದಕ್ಕಾಗಿ ನನ್ನ ವಂದನೆಗಳು. ಈ ಪೋಲೀಸ್ ಇಲಾಖೆಗಾಗಿ ಮಾಡುತ್ತಿರತಕ್ಕ ಖರ್ಚು ವೆಚ್ಚಗಳು ವರ್ಷೇ ವರ್ಷೇ ಜಾಸ್ತಿಯಾಗುತ್ತಿವೆ. ನಮ್ಮ ದೇಶವನ್ನು, ಒಂದು ವೆಲ್‌ಫೇರ್ ಸ್ಟೇಟ್ ಎಂದು ಹೇಳುತ್ತಾರಲ್ಲ ಹಾಗೆ, ನಮ್ಮ ಜನರೇ ಉಸ್ತುವಾರಿ ನೋಡುಕೊಳ್ಳುವಂತೆ ಮಾಡಿ, ದೇಶವನ್ನು ಪೋಲೀಸ್‌ನವರ ಆಡಳಿತದಿಂದ ತಪ್ಪಿಸಿ, ಜನರು ತಮ್ಮ ತಮ್ಮ ಯೋಗಕ್ಷೇಮಗಳನ್ನು

ತಾವೇ ನೋಡಿಕೊಳ್ಳುವಂತೆ ಮಾಡಬೇಕೆಂಬುದು ನಮ್ಮೆಲ್ಲರ ಉದ್ದೇಶವಾಗಿದೆ. ಹಿಂದೆ ನಮ್ಮ ದೇಶವನ್ನು ಏನು ಒಂದು Police State ಎಂದು ಕರೆಯಲಾಗುತ್ತಿತ್ತೋ ಅಂಥದನ್ನು ನಾವು ಈಗ ಕ್ರಮ ಕ್ರಮವಾಗಿ ಕಡಿಮೆ ಮಾಡುತ್ತ ಕಡೆಗೆ ಇದನ್ನೊಂದು ನಾಗರಿಕ ರಾಜ್ಯವನ್ನಾಗಿ ಮಾಡಬೇಕೆಂಬ ಘನೋದ್ದೇಶವಿರಬೇಕು. ರಾಜ್ಯಾಂಗದಲ್ಲಿ ಕೂಡ ಹೀಗೆ ಹೇಳಲಾಗಿದೆ. ಹೀಗೆ ಈ ಪೋಲೀಸ್ ಇಲಾಖೆಯ ಖರ್ಚನ್ನು ಕ್ರಮ ಕ್ರಮವಾಗಿ ಕಡಮೆ ಮಾಡಬೇಕೆಂಬ ಧ್ಯೇಯವಿರಬೇಕಾದದ್ದು ಮುಖ್ಯ. ಈ ಬಗ್ಗೆ ಅಂಕಿ ಅಂಶಗಳನ್ನು ಒದಗಿಸಲು, ಈಗ ತಾನೆ ಮಾತನಾಡಿದ ಮಾನ್ಯ ಸದಸ್ಯರು, ಬಹಳ ಹಿಂದಕ್ಕೆ ಹೋಗಿ 1936 ನೇ ಇಸ್ವಿಯಿಂದ ಲೆಕ್ಕಗಳನ್ನು ಶೇಖರಿಸಿ ತಿಳಿಸಿದ್ದಾರೆ. ಆದರೆ ನಾನು ಅಷ್ಟುದೂರ 17-18 ವರ್ಷಗಳ ಹಿಂದಕ್ಕೆ ಹೋಗ ಬೇಕಾಗಿಲ್ಲವೆಂದು ಭಾವಿಸುತ್ತೇನೆ. 1951-52 ನೆಯ ಇಸವಿ ಲೆಕ್ಕಪತ್ರಗಳನ್ನು ನೋಡಿದರೆ, ಈ ಇಲಾಖೆಗೆ ಒದಗಿಸಲಾಗಿದ್ದುದು ಕೇವಲ 91 ಲಕ್ಷ ರೂಪಾಯಿಗಳು ಮಾತ್ರ. ಆದರೆ ಅದೇ ಬಾಬಿಗೆ ಈ ಸಾಲಿಗೆ ಎಂದರೆ 1953-54 ನೆಯ ಸಾಲಿನಲ್ಲಿ ಒದಗಿಸಿರತಕ್ಕದ್ದು 112 ಲಕ್ಷ ರೂಪಾಯಿಗಳು. ಹೀಗೆ ಕೇವಲ 2-3 ವರ್ಷಗಳ ವ್ಯತ್ಯಾಸದಲ್ಲೇ 22 ಲಕ್ಷ ರೂಪಾಯಿಗಳ ಖರ್ಚು ವೆಚ್ಚಗಳು ಜಾಸ್ತಿಯಾಗಿರುವುದು ಕಂಡು ಬರುತ್ತಿದೆ. ಹೀಗೆ 3 ವರ್ಷಗಳಲ್ಲಿ ಇಷ್ಟೊಂದು ಏಕೆ ಹೆಚ್ಚಿಗೆ ಖರ್ಚು ಮಾಡಬೇಕಾಗಿ ಬಂತೋ ಅದು ನನಗೆ ಅರ್ಥವಾಗುತ್ತಿಲ್ಲ. ಖರ್ಚು ಬಾಬುಗಳ ವಿವರಗಳನ್ನು ನೋಡಿದರೆ ಅದರಲ್ಲಿ ಪಟ್ಟಣಗಳಿಗೆ ಹೆಚ್ಚಾಗಿ ಖರ್ಚಾಗಿರುತ್ತದೆ. ಗ್ರಾಮಾಂತರ ಪ್ರದೇಶಗಳಲ್ಲಿ ಕಳುವು, ದರೋಡೆ ಇತ್ಯಾದಿಗಳು ಜಾಸ್ತಿಯಾಗಿ ನಡೆಯುತ್ತಿವೆಯೆಂದು ನಮಗೆ ಪದೇ ಪದೇ ವರದಿಗಳು ಬರುತ್ತಿದ್ದಾಗ್ಯೂ ನಾವು ಅಲ್ಲಿಗೆ ಹೆಚ್ಚಿಗೆ ಖರ್ಚು ಮಾಡದೆ, ಬಹಳ ಹಣವನ್ನು ಕೇವಲ ಪಟ್ಟಣದಲ್ಲಿರುವ ಪೋಲೀಸ್ ಸಿಬ್ಬಂದಿಗಾಗಿಯೇ ಖರ್ಚುಮಾಡುತ್ತಿದ್ದೇವೆ.

11—30 A.M.

ನಮ್ಮ ಸ್ನೇಹಿತರು ಇತ್ತ ಹೇಳುತ್ತಿದ್ದಾರೆ 'City people have become uncontrollable" ಎಂದು. ಒಂದು ವೇಳೆ ಹಾಗಿದ್ದರೂ ಇಷ್ಟೊಂದು ಪೋಲೀಸಿನವರು ನಮ್ಮ ಸಿಟಿ ಯಲ್ಲಿರುವುದು ಅವಶ್ಯಕವಲ್ಲವೆಂದು ನಾನು ಅಭಿಪ್ರಾಯಪಡುತ್ತೇನೆ. ಆದ್ದರಿಂದ ಪೋಲೀಸ್ ಇಲಾಖೆಯಲ್ಲಿ ಆಗುತ್ತಿರತಕ್ಕ ಖರ್ಚನ್ನು ಕ್ರಮಕ್ರಮವಾಗಿ ಕಡಮೆ ಮಾಡಬೇಕೆಂದು ಹೇಳುತ್ತೇನೆ.

ಇನ್ನೊಂದು ಅಂಶವನ್ನು ಇಲ್ಲಿ ಸ್ಪಷ್ಟಪಡಿಸಬೇಕಾಗಿದೆ. ಪೋಲೀಸ್ ಇಲಾಖೆಯಲ್ಲಿ ಕಡಿಮೆ ದರ್ಜೆಯ ನೌಕರರಿಗೆ—ಪೋಲೀಸ್ ಕಾನ್ಸ್ಟೇಬಲ್‌ಗಳಿಂದ ಹಿಡಿದು ಪೋಲೀಸ್ ಇನ್ಸ್ಪೆಕ್ಟರ್‌ರವರೆಗೆ—ಕೊಡುತ್ತಿರತಕ್ಕ ಸಂಬಳ ಕೇವಲ ಕಡಿಮೆ. ಇದರ ಪರಿಣಾಮವೇನೆಂಬುದನ್ನು ಸ್ಪಷ್ಟವಾಗಿ ಹೇಳುವುದಾದರೆ ಅವರುಗಳು ನೀವು ಕೊಡುವ ಸಂಬಳದಿಂದ ತಮ್ಮ ಸಂಸಾರಗಳನ್ನು ನಿರ್ವಹಿಸುವುದಕ್ಕೆ ಕಷ್ಟವಾಗಿ ಬೇರೆ ರೀತಿಯಲ್ಲಿ ಸಂಪಾದನೆ ಮಾಡಿಕೊಂಡು ಹೊಟ್ಟೆ ಹೊರೆಯಬೇಕಾಗಿ ಬಂದಿದೆ. ಇದನ್ನೇನೂ ನಾನು ಇನ್ನೂ ಹೆಚ್ಚು ಸ್ಪಷ್ಟಪಡಿಸಬೇಕಾಗಿಲ್ಲವೆಂದು ತಿಳಿದಿದ್ದೇನೆ. ಅದರ ಅರ್ಥ ತಮಗೆಲ್ಲಾ ಗೊತ್ತಿದೆ. ಆದ್ದರಿಂದ ಇದಕ್ಕಾಗಿ ದೊಡ್ಡ ದೊಡ್ಡ ಅಧಿಕಾರಿಗಳ ಸಂಖ್ಯೆಯನ್ನು ಕಡಿಮೆಮಾಡಿ ಅದಷ್ಟುಮಟ್ಟಿಗೆ ಎಷ್ಟು ಕಡಿಮೆ ಜನರು ಬೇಕೋ ಅಷ್ಟನ್ನು ಮಾತ್ರ ಇಟ್ಟುಕೊಂಡು, ಅವರ ಸಂಬಳ ಸಾರಿಗೆಗಳನ್ನು ವ್ಯವಸ್ಥೆಮಾಡಬೇಕೆಂದು ಹೇಳುತ್ತೇನೆ. ನನಗೆ ತಿಳಿದ ಮಟ್ಟಿಗೆ, 1946 47ರಲ್ಲಿ, ಅಂದರೆ 8 ವರ್ಷಗಳಹಿಂದೆ ಡೆಪ್ಯುಟಿ ಇನ್‌ಸ್ಪೆಕ್ಟರ್ ಜನರಲ್ ಆಫ್ ಪೋಲೀಸ್ ಎಂಬ ಹುದ್ದೆಗಳನ್ನು ಹೊಸದಾಗಿ ಏರ್ಪಡಿಸಿದರು. ಅದಕ್ಕೆ ಹಿಂದೆ ಇದು ಇರಲಿಲ್ಲ. 1947ರಿಂದೀಚೆಗೆ ಮೂರು ಜನ ಡೆಪ್ಯುಟಿ ಇನ್ಸ್ಪೆಕ್ಟರ್ ಜನರಲ್ ಆಫ್ ಪೋಲೀಸ್‌ರವರನ್ನು ನೇಮಿಸಿದ್ದಾರೆ. ಈ ಹುದ್ದೆಗಳು ಅನಾವಶ್ಯಕವೆಂದು ಕಾಣುತ್ತದೆ. ಎಷ್ಟು ಅಧಿಕಾರಿಗಳನ್ನು ನೇಮಿಸಿದರೂ ಅವರಿಗೆ ಏನಾದರೂ ಒಂದು ಕೆಲಸ ತೋರಿಸಿಯೇ ತೋರಿಸುತ್ತಾರೆ. ಈ ದೃಷ್ಟಿಯಿಂದ ನಿಜವಾಗಿಯೂ ಇವು ಅವಶ್ಯಕವೇ ಎಂದು ನೋಡಬೇಕು. ಅದರಲ್ಲೂ ಡೆಪ್ಯುಟಿ ಇನ್ಸ್ಪೆಕ್ಟರ್ ಜನರಲ್‌ರವರಿಗೆ 600 ರೂಪಾಯಿಗಳಿಂದ 1,500 ರೂಪಾಯಿಗಳವರೆಗೂ ಸಂಬಳ. ಅದೂ ಮೂರು ಜನ; ಅವರಿಗೆ ಬೇರೆ ಸಿಬ್ಬಂದಿ. ಆದ್ದರಿಂದ ಹೆಚ್ಚಾಗಿ ಕಾಲವನ್ನು ನಾನು ತೆಗೆದುಕೊಳ್ಳದೆ, ಈ ಕೂಡಲೆ ಈ ಹುದ್ದೆಗಳನ್ನು ವಜಾಮಾಡಬೇಕೆಂದು ಸೂಚಿಸುತ್ತೇನೆ. ಒಂದು ಮಾತನ್ನು ಈ ಸಂದರ್ಭದಲ್ಲಿ ತಮ್ಮ ಗಮನಕ್ಕೆ ತರಬಹುದಾದರೆ, ಈಗ 7 ವರ್ಷಗಳ ಹಿಂದೆ ಈ ಹುದ್ದೆಗಳನ್ನು ಅವಶ್ಯಕತೆ ಕಾರಣದಿಂದ ನಿರ್ಮಿಸಲಿಲ್ಲ. ಆಗ್ಗೆ ಯಾರೋ ಅಧಿಕಾರಿಗಳಿದ್ದರು; ಅವರಿಗೆ ಗೌರವವಾಗಿ ಈ ಕೆಲಸಗಳನ್ನು ಕೊಡಬೇಕೆಂದು ಹೇಳಿ ಈ ಹುದ್ದೆಗಳನ್ನು ಏರ್ಪಾಡುಮಾಡಿದರು. ಅಂಥಾದ್ದನ್ನು ಈಗ ಪುನರ್ವಿಮರ್ಶೆ ಮಾಡಬೇಕಾದ ಕಾಲಬಂದಿದೆ. ಆದ್ದರಿಂದ ಸರ್ಕಾರದವರು ನನ್ನ ಈ ಸೂಚನೆಯನ್ನು ದಯವಿಟ್ಟು ಒಪ್ಪಿಕೊಳ್ಳಬೇಕೆಂದು ಹೇಳುತ್ತೇನೆ.

ಶ್ರೀ ಎಚ್. ಸಿದ್ದವೀರಪ್ಪ (ಒಳಾಡಳಿತ ಮತ್ತು ಕೈಗಾರಿಕಾ ಮಂತ್ರಿಗಳು).—ಅಧ್ಯಕ್ಷರೇ, ಈ ಹಿಂದೆ ಮಾತನಾಡಿದ ನಮ್ಮ ಮಾನ್ಯ ಸ್ನೇಹಿತರಾದ ಶ್ರೀ ಮಾನ್ ನಾರಾಯಣಗೌಡರು ಮತ್ತು ಶ್ರೀ ಮಾನ್ ಪಿ. ಆರ್. ರಾಮಯ್ಯನವರೂ, ಪೋಲೀಸ್ ಇಲಾಖೆಯಲ್ಲಿ ಬಹಳ ಖರ್ಚು ಜಾಸ್ತಿಯಾಗುತ್ತಿದೆ, ವರ್ಷೇ ವರ್ಷೇ ಖರ್ಚು ಬೆಳೆಯುತ್ತಾ ಹೋಗುತ್ತಿದೆಯೆಂಬ ಅಂಶವನ್ನು ಈ ಸಭೆಯ ಗಮನಕ್ಕೆ ತಂದಿದ್ದಾರೆ. ನಿಜ, ಅಂಕಿ ಅಂಶಗಳನ್ನು ಇಟ್ಟುಕೊಂಡು ನೋಡಿದರೆ ಖರ್ಚು ಹೆಚ್ಚಾಗಿ ಕಾಣುವುದು ಸಹಜವಾಗಿಯೇ ಇದೆ. ಆದರೆ ಒಂದಂಶವನ್ನು ನಾವು ಮರೆಯಕೂಡದು. ಪೋಲೀಸ್ ಇಲಾಖೆಯಲ್ಲಿರತಕ್ಕ ಸಿಬ್ಬಂದಿ ಹೆಚ್ಚಾಗಿದೆಯೋ ಕಡಿಮೆಯಾಗಿದೆಯೋ, ನಮ್ಮ ದೇಶದಲ್ಲಿ ನಮ್ಮ ಜನರಲ್ ರೆವೆನ್ಯೂವಿನಲ್ಲಿ ಶೇಕಡ ಎಷ್ಟು ಭಾಗದಷ್ಟು ಹಣವನ್ನು ಪೋಲೀಸ್ ಇಲಾಖೆಗೆ ಖರ್ಚುಮಾಡುತ್ತಿದ್ದೇವೆ, ಮತ್ತು ಅಲ್ಲಿನ ಅಧಿಕಾರಿಗಳ ಹಾಗೂ ಪೋಲೀಸ್ ನೌಕರರ—ಕಾನ್ಸ್ಟೇಬಲ್‌ಗಳು ಮತ್ತು ದಫೇದಾರರು—ಇಂಥವರ ಸಂಬಳಗಳನ್ನು ಜಾಸ್ತಿಮಾಡಿದ್ದೇವೆಯೋ ಅಥವಾ ಹಾಗೆಯೇ ಇಟ್ಟಿದ್ದೇವೆಯೋ, ಈ ಎಲ್ಲಾ ಅಂಶಗಳನ್ನೂ ನಾವು ಗಮನದಲ್ಲಿಟ್ಟುಕೊಳ್ಳಬೇಕು. ಇದೇ ರೀತಿಯ ಇನ್ನೂ ಅನೇಕ ಖೋತಾ ನಿರ್ಣಯಗಳು ಈಗ ಸಭೆಯಮುಂದೆ ಬರಲಿರುವುದರಿಂದ ನಾನು ಈ ಅಂಶವನ್ನು ಸ್ವಲ್ಪ ವಿಶದವಾಗಿಯೇ ತಿಳಿಸಬೇಕೆಂದಿದ್ದೇನೆ.

ಸಾಮಾನ್ಯವಾಗಿ ಒಂದು ದೇಶದ ಪೋಲೀಸ್ ಸಂಖ್ಯಾಬಲ ಎಷ್ಟಿರಬೇಕೆಂದು ನಿಗದಿ ಮಾಡಬೇಕಾದರೆ, ಆ ದೇಶದ ವಿಸ್ತೀರ್ಣ, ಆ ದೇಶದ ಅವಶ್ಯಕತೆ, ಅಲ್ಲಿ ಸಂಚಾರ ಸೌಕರ್ಯಗಳು ಎಷ್ಟರ ಮಟ್ಟಿಗಿವೆ, ಈ ಅಂಶ

(ಶ್ರೀ ಎಚ್. ಸಿದ್ಧವೀರಪ್ಪ)

ಗಳನ್ನೆಲ್ಲಾ ಜ್ಞಾಪಕದಲ್ಲಿಟ್ಟುಕೊಳ್ಳಬೇಕಾದುದರ ಜೊತೆಗೆ, ಒಂದು ತತ್ವದಪ್ರಕಾರ ಆ ಪ್ರದೇಶದ ಜನರ criminal propensities, ಅಂದರೆ, ತಕ್ಸೀರು ಮಾಡುವ ಮನೋಭಾವನೆ ಎಷ್ಟಿದೆಯೆಂಬುದನ್ನೂ ನೋಡಬೇಕಾಗಿದೆ. ಏಕೆಂದರೆ, ಇಂಥವರ ಕಾಟದಿಂದ ಸತ್ಪ್ರಜೆಗಳನ್ನು ತಪ್ಪಿಸಬೇಕಾದರೆ ಎಷ್ಟು ಪೋಲೀಸ್ ಬೇಕೆಂಬುದು ನಾವು ನೋಡಬೇಕಾದ ಮುಖ್ಯವಾದ ಒಂದು ಅಂಶ.

ಈ ಎಲ್ಲಾ ದೃಷ್ಟಿಯಿಂದ ನೋಡುವುದಾದರೆ, ನಮ್ಮಲ್ಲಿರತಕ್ಕ ಪೋಲೀಸ್ ಬಲ ಅಷ್ಟೇನೂ ಹೆಚ್ಚಿನದಲ್ಲವೆಂದು ಅಂಕಿಅಂಶಗಳನ್ನು ಕೊಟ್ಟು ನಾನು ಸಮರ್ಥನೆ ಮಾಡಬಲ್ಲೆ. ಈ ಸಂದರ್ಭದಲ್ಲಿ ನಾನು ಕೆಲವು ಅಂಶಗಳನ್ನು ಮಾತ್ರ ತಮ್ಮ ಮುಂದಿಟ್ಟರೆ ಸಾಕೆನಿಸುತ್ತದೆ. ಬೊಂಬಾಯಿ, ಮದ್ರಾಸು, ಹೈದರಾಬಾದು, ಉತ್ತರ ಪ್ರದೇಶ—ಈ ಯಾವ ಪ್ರಾಂತಗಳನ್ನು ನೋಡಿದರೂ, ಅಷ್ಟೇಕೆ ಇಡೀ ಇಂಡಿಯಾ ದೇಶದಲ್ಲಿ ತಿರುವಾಂಕೂರು, ಕೊಚ್ಚಿನ್-ಈ ಎರಡನ್ನು ಬಿಟ್ಟರೆ ಬೇರೆ ಯಾವ ಕಡೆಯಲ್ಲೂ ಕೂಡ ಪೋಲೀಸ್ ದಳಕ್ಕಾಗಿ ಜನರಲ್ ರೆವೆನ್ಯೂವಿನಿಂದ ಖರ್ಚುಮಾಡುವ ಹಣವು ನಮ್ಮ ಪ್ರಾಂತದಲ್ಲಿನಷ್ಟು ಕಡಿಮೆಯಾಗಿಲ್ಲವೆಂದರೆ ಮಾನ್ಯ ಸದಸ್ಯರು ತೃಪ್ತರಾಗುತ್ತಾರೆಂದು ನಂಬಿದ್ದೇನೆ. ಈಗ ತಾನೆ ಹಿಂದೆ 21-11-52ರಲ್ಲಿ 'Fewer crimes in Mysore' ಎಂಬ ಶಿರೋನಾಮೆಯಲ್ಲಿ ಮದ್ರಾಸ್ ಮೇಲ್ ಪತ್ರಿಕೆಯಲ್ಲಿ ಪ್ರಕಟವಾಗಿದ್ದ ಒಂದು ಲೇಖನವನ್ನು ನಾನು ಈ ಸಂದರ್ಭದಲ್ಲಿ ತಮ್ಮ ಗಮನಕ್ಕೆ ತರಬಯಸುತ್ತೇನೆ. ಅಲ್ಲಿ ಅಂಕಿ ಅಂಶಗಳನ್ನು ಚೆನ್ನಾಗಿ ಕೊಟ್ಟು ಮೈಸೂರುದೇಶದಲ್ಲಿ ಎಷ್ಟು ಖರ್ಚು ಮಾಡುತ್ತಿದ್ದಾರೆ, ಬೇರೆ ಬೊಂಬಾಯಿ ಮದ್ರಾಸುಗಳಲ್ಲಿ ಎಷ್ಟೆಷ್ಟು ಖರ್ಚುಮಾಡುತ್ತಿದ್ದಾರೆಂದು ತೋರಿಸಿದೆ. ನಮ್ಮಲ್ಲಿ ಸರಾಸರಿ 6,000 ಪ್ರಜೆಗಳ ರಕ್ಷಣೆಗಾಗಿ 15 ಜನ ಪೋಲೀಸರಿದ್ದಾರೆಂದು ಗೊತ್ತಾಗಿದೆ. ಇದೇನು ಬಹಳ ಹೆಚ್ಚೇ ಎಂಬುದನ್ನು ನೀವೇ ಹೇಳಬಹುದು. ಅದೂ ಅಲ್ಲದೆ, ನಮ್ಮಲ್ಲಿ ಪ್ರತಿಯೊಬ್ಬ ಪ್ರಜೆಗೂ ಸರಾಸರಿ 1-0-4 ನಂತೆ ಖರ್ಚುಮಾಡುತ್ತಿದ್ದೇವೆ. ಅದೇ ಮದ್ರಾಸಿನಲ್ಲಿ ಒಬ್ಬ ಪ್ರಜೆಗೆ 1ರೂ. 4 ಆಣೆ ಖರ್ಚು ಮಾಡುತ್ತಾರೆ. ಈ ದೃಷ್ಟಿಯಿಂದ ಲೆಕ್ಕಹಾಕಿದರೆ ನಮ್ಮ ಪೋಲೀಸ್ ಇಲಾಖೆಯ ಖರ್ಚು ಅಷ್ಟೇನೂ ಹೆಚ್ಚಲ್ಲವೆಂದು ಎಲ್ಲರೂ ಒಪ್ಪಬೇಕು. ಅಲ್ಲದೆ ನಮ್ಮಲ್ಲಿ ಪೋಲೀಸ್ ಇಲಾಖೆಯ ಖರ್ಚು ಇಷ್ಟು ಕೂಡ ಹೆಚ್ಚಿರುವುದಕ್ಕೆ ಒಂದು ಕಾರಣವನ್ನು ಮನಸ್ಸಿಗೆ ತಂದುಕೊಳ್ಳಬೇಕು. ತಮಗೆಲ್ಲರಿಗೂ ಗೊತ್ತಿರುವಹಾಗೆ, ಮೊದಲಿದ್ದ ಪೋಲೀಸಿನ ಕರ್ತವ್ಯಗಳು ಈಚೆಗೆಷ್ಟು ಹೆಚ್ಚಾಗಿವೆಯೆಂಬುದನ್ನು ನೋಡಿ. ಆಹಾರದ ಇಲಾಖೆಯ ಕೆಲಸ, ಲಾ ಮತ್ತು ಆರ್ಡರ್ ನೋಡಿಕೊಳ್ಳುವುದು, ಪ್ರೊಹಿಬಿಷನ್ ಮುಂತಾಗಿ ನೂರೆಂಟು ಇಲಾಖೆಗಳ ಕೆಲಸಗಳು ಅವರಿಗೇ ಸೇರಿವೆ. ಹೋಟಲಿನವರು, ಸಿನಿಮಾದವರು, ಮೊದಲುಗೊಂಡು ನಗರಗಳ ನಾನಾ ಭಾಗಗಳಲ್ಲಿ ಪೋಲೀಸಿನವರ ಸಹಾಯ ಬೇಕಾಗಿದೆ. ಅಷ್ಟೇಕೆ, ಪಾನನಿರೋಧದ ಇಲಾಖೆಯೊಂದಕ್ಕೇ, ಪಾನನಿರೋಧದ ಕೆಲಸಕ್ಕಾಗಿಯೇ ಈಗಿರತಕ್ಕ ಪೋಲೀಸ್ ಇಲಾಖೆಯ ಅರ್ಧ ಭಾಗ ಹೋಗಿದೆ. ಇನ್ನೂ ಅಲ್ಲಿ ಮಾಡಬೇಕಾದ ಕೆಲಸವಿದೆಯೆಂದು ಹೇಳಿದರೆ ತಪ್ಪಲ್ಲ.

ಈ ಪ್ರಕಾರ ಪೋಲೀಸಿನವರಿಗೆ ಅನೇಕ ರೀತಿಯಲ್ಲಿ ಕೆಲಸ ಕಾರ್ಯಗಳು ಹೆಚ್ಚಿವೆ. ಈ ದೃಷ್ಟಿಯಿಂದ ನೋಡುವುದಾದರೆ, ಇತ್ತೀಚೆಗೆ ನಮ್ಮ ಪೋಲೀಸ್ ಇಲಾಖೆಯಲ್ಲಿ ಕಾನ್‌ಸ್ಟೇಬಲ್‌ಗಳ, ದಫೇದಾರರುಗಳ—ಒಟ್ಟಿನಲ್ಲಿ ನಾನ್ ಗೆಜೆಟೆಡ್ ನೌಕರರ-ಸಂಖ್ಯೆ ಬೇರೆ ಪ್ರಾಂತಗಳಲ್ಲಿರುವುದಕ್ಕಿಂತಲೂ ಕಡಿಮೆಯಾಗಿದೆ ಯೆಂದು ಹೇಳಬಹುದು. ಈ ದೃಷ್ಟಿಯಿಂದಲೂ ನೋಡಿ, ಕೊನೆಗೂ ನಮ್ಮ ಪೋಲೀಸ್ ಸಂಖ್ಯಾಬಲ ಜಾಸ್ತಿಯೆಂದು ಹೇಳುವುದಾದರೆ, ನನಗೇನು, ಅದನ್ನು ಸಭೆಯವರ ಅಭಿಪ್ರಾಯಕ್ಕೆ ಬಿಡುತ್ತೇನೆ.

ಆಮೇಲೆ ಇವರುಗಳ ಸಂಬಳ ಕಡಮೆ ಎಂಬ ಪ್ರಶ್ನೆ ಬಂತು. ಅದನ್ನು ನಾನೂ ಒಪ್ಪುತ್ತೇನೆ. ಎಲ್ಲೆಲ್ಲಿ ಹಣಕಾಸಿನ ಪರಿಸ್ಥಿತಿ ಅವಕಾಶಕೊಡುತ್ತದೆಯೋ ಅಲ್ಲಿ ಜಾಸ್ತಿಮಾಡುತ್ತೇವೆ. ಈಗ ಅವರುಗಳ ಗ್ರೇಡುಗಳು ಸ್ವಲ್ಪಮಟ್ಟಿಗೆ ಉತ್ತಮವಾಗುವ ಹಾಗೆ ಮಾಡಿದ್ದೇವೆ. ಈ ದೃಷ್ಟಿಯಿಂದ ನಾವು ಮಾಡತಕ್ಕ ಖರ್ಚು ಜಾಸ್ತಿಯೆಂದು ಹೇಳುವ ಹಾಗಿಲ್ಲವೆಂದು ನಾನು ಭಾವಿಸುತ್ತೇನೆ. ಶ್ರೀ ಮಾನ್ ಪಿ. ಆರ್. ರಾಮಯ್ಯನವರು ನಮ್ಮದು welfare state ಆಗಿರುವುದರಿಂದ ಇಂಥ welfare stateನಲ್ಲಿ ಪೋಲೀಸ್ ದಳಕ್ಕೆ ಹೆಚ್ಚಿಗೆ ಅವಶ್ಯಕವಿಲ್ಲ ಎಂದು ಹೇಳಿದರು. ಅವರು ಹೇಳಿದ ತತ್ವವನ್ನು ನಾನೂ ಒಪ್ಪುತ್ತೇನೆ. ಆದರೆ ಅವರು ಭಾವಿಸುವಂಥ Ideal state of affairs ಇನ್ನೂ ನಮ್ಮಲ್ಲಿಲ್ಲ. ಪ್ಲೇಟೋವಿನ ರಿಪಬ್ಲಿಕ್ ಎಂದರೆ ಯಾವ Ideal stateನ್ನು ನಾವು ಭಾವಿಸುತ್ತೇವೆಯೋ ಅದು ಒಂದು ದೃಷ್ಟಿಯಿಂದ ನೋಡಿದರೆ 'ಅನಾರ್ಕಿ' ಎಂದು ಹೇಳಬೇಕು ಅಷ್ಟೆ. ಎಲ್ಲಿಯವರೆಗೂ ನಾವು organised societyಯಲ್ಲಿರುತ್ತೇವೆಯೋ ಅಲ್ಲಿಯವರೆಗೆ ಪೋಲೀಸ್ ಇರಬೇಕಾದದ್ದು ಅವಶ್ಯಕ. ಈ ದೃಷ್ಟಿಯಿಂದ ಲೆಕ್ಕಹಾಕಿದರೆ ನಾವು ಈಗಿರತಕ್ಕ ಪೋಲೀಸ್ ದಳವನ್ನು ಕಡಮೆ ಮಾಡುವ ಸ್ಥಿತಿಯಲ್ಲಿಲ್ಲವೆಂದು ನಾವು ಒಪ್ಪಿಕೊಳ್ಳಬೇಕಾಗುತ್ತದೆ.

ಈ ಇಲಾಖೆಗೆ ಏಕೆ ಇಷ್ಟು ಖರ್ಚಾಯಿತೆಂದು ಇನ್ನೊಂದು ಕಾರಣವನ್ನೂ ಕೂಡ ಹೇಳುತ್ತೇನೆ. ಹಿಂದೆ ತಮಗೆಲ್ಲರಿಗೂ ಗೊತ್ತಿರುವಹಾಗೆ, ಅರಮನೆಯಲ್ಲಿ ಒಂದು ದಳವಿತ್ತು; Palace Guards ಎಂದು ಅರಮನೆಯಲ್ಲಿಟ್ಟುಕೊಂಡಿದ್ದರು. ಇತ್ತೀಚೆಗೆ ಇವರುಗಳನ್ನು ನಮ್ಮ ಪೋಲೀಸ್ ದಳಕ್ಕೇ ಸೇರಿಸಿದ್ದೇವೆ. ಇದೊಂದರಿಂದಲೇ ನಮಗೆ 4,10,800ರೂಪಾಯಿಗಳಷ್ಟು ಖರ್ಚು ಜಾಸ್ತಿಯಾಗಿದೆ.

ಇನ್ನೊಂದು ವಿಷಯವೇನೆಂದರೆ, ಹಂಗಾಮಿಯಾಗಿ ಆಹಾರ ಇಲಾಖೆ ಮುಂತಾದ ಇಲಾಖೆಗಳಿಗೆ ಕೆಲವರನ್ನು ಇಟ್ಟುಕೊಂಡಿದೆ. ನಾನು ಮೊನ್ನೆ ತಾನೇ ಹೇಳಿದ ಹಾಗೆ, ದೇವರ ದಯೆಯಿಂದ ಆಹಾರ ಹತೋಟಿಯನ್ನು ತೆಗೆದರೆ, ಸುಮಾರು ನಾಲ್ಕು ಲಕ್ಷ ರೂಪಾಯಿಗಳವರೆಗೆ ಉಳಿಸಬಹುದು. ಆದಷ್ಟು ಈ ವರ್ಷವೇ ಕೊಂಚ ಮಟ್ಟಿಗಾದರೂ ಖರ್ಚನ್ನು ಕಡಮೆಮಾಡಬೇಕೆಂಬುದು ನಮ್ಮ ಆಶೆ. ಮೊದಲೇ ಹೇಳುವುದಕ್ಕೆ ಬದಲಾಗಿ, ಕಾರ್ಯ ರೂಪದಲ್ಲಿ ತೋರಿಸಬೇಕೆಂದು ನನ್ನ ಇಚ್ಛೆ.

ಶ್ರೀ ಕೆ. ಪುಟ್ಟಸ್ವಾಮಿ (ಶ್ರೀರಂಗಪಟ್ಟಣ).—ಜನರೆಲ್ಲ ಕಂಟ್ರೋಲ್ ತೆಗೆದುಹಾಕಿ ಎಂದು ಹೇಳುತ್ತಿದ್ದಾರೆ. ಆದರೂ ದೇವರ ದಯೆಯಿದ್ದರೆ, ಎಂದು ಹೇಳುತ್ತೀರಿ; ರಾಜ್ಯಾಂಗದ ಗತಿ ಏನಾಗಬೇಕು, ಹೀಗೆ ಹೇಳಿದರೆ?

ಶ್ರೀ ಎಚ್. ಸಿದ್ಧವೀರಪ್ಪ.—ರಾಜ್ಯಾಂಗಕೂಡ ದೇವರ ದಯೆಯಿಂದ ನಡೆಯಬೇಕು!

ಇನ್ನು ಎ. ಎಸ್. ಪಿ. ಮತ್ತು ಡಿ. ಐ. ಜಿ. ಗಳ ವಿಚಾರ ಹೇಳಿದರು. ಈ ವಿಷಯ ಮಾತನಾಡಬೇಕಾದರೆ ಇವರು, ಎಷ್ಟು ಜನರಿದ್ದಾರೆಂಬುದನ್ನು ಗಮನಿಸಬೇಕು. ಒಟ್ಟು 27 ಜನ ಎ. ಎಸ್. ಪಿ. ಗಳಿದ್ದಾರೆ. ಪೋಲೀಸ್ ಇನ್ಸ್ಪೆಕ್ಟರನ್ನು ಏಕ್‌ದಮ್ ಡಿ. ಎಸ್. ಪಿ. ಗಳಾಗಿ ಪ್ರಮೋಟ್‌ಮಾಡುವುದು ತಪ್ಪು, ಇನ್ಸ್ಪೆಕ್ಟರ ಸ್ಥಾನಕ್ಕೂ ಡಿ. ಎಸ್. ಪಿ. ಸ್ಥಾನಕ್ಕೂ ಅಜಗಜಾಂತರ. ಅಲ್ಲದೆ ಎ. ಎಸ್. ಪಿ. ಬರಿಯ ಪೋಸ್ಟ್ ಆಫೀಸ್ ಎಂದು ಹೇಳುವುದಕ್ಕಾಗುವುದಿಲ್ಲ. ಇವರಿಗೂ ಒಂದೊಂದು ಜೂರಿಸ್‌ಡಿಕ್ಷನ್ ಇರುತ್ತದೆ. ಡಿ. ಎಸ್. ಪಿ. ಯ ಪ್ರತಿನಿಧಿಯಾಗಿ ಕೆಲವು ಡೆಲಿಗೇಟೆಡ್ ಅಧಿಕಾರಗಳನ್ನಿಟ್ಟುಕೊಂಡು ಕೆಲಸಮಾಡಬೇಕಾಗುತ್ತದೆ. ಹೀಗಿರುವಾಗ ಏಕ್‌ದಮ್ ಪೋಲೀಸ್ ಇನ್ಸ್ಪೆಕ್ಟರಿಗೆ ಡಿ. ಎಸ್. ಪಿ. ಯಾಗಿ ಬಡ್ತಿ ಕೊಟ್ಟರೆ ಆಡಳಿತ ಧರ್ಮದೃಷ್ಟಿಯಿಂದ ಸರಿಯೆ ಎನ್ನುವುದನ್ನು ಗಮನದಲ್ಲಿಟ್ಟುಕೊಳ್ಳಬೇಕು. ನನ್ನ ಖಚಿತವಾದ ಅಭಿಪ್ರಾಯವನ್ನು ಹೇಳುವುದಾದರೆ, ಎ. ಎಸ್. ಪಿ. ಸ್ಥಾನಗಳಿರುವುದು ಸಂಸ್ಥಾನದ ಆಡಳಿತದ ಹಿತ ದೃಷ್ಟಿಯಿಂದ ತಪ್ಪಾಗಲಾರದೆಂದು ನನ್ನ ಅಭಿಪ್ರಾಯ.

ಇನ್ನು ಡಿ. ಐ. ಜಿ. ಗಳ ವಿಚಾರ. ಈಗಾಗಲೇ 'ಇಂಟಿಗ್ರೇಷನ್ ಅಫ್ ಸರ್ವಿಸಸ್'' ಆಗಿ ಇಂಡಿಯನ್ ಪೋಲೀಸ್ ಸರ್ವಿಸ್' ಎಂದಾಗಿದೆ. ಅದಕ್ಕೆ ಇವೆಲ್ಲಾ ಸೇರಿವೆ. ಇದರ ಸಂಬಂಧವಾಗಿ ಇಂಥಿಂಥ ಕೇಡರಿನಲ್ಲಿ ಇಷ್ಟಿಷ್ಟು ಸ್ಥಾನಗಳಿರಬೇಕೆಂದು ನಿರ್ದಿಷ್ಟವಾಗಿ ನಿಗದಿಯಾಗಿದೆ. ಇಷ್ಟೇ ಅಲ್ಲ; ಡಿ. ಐ. ಜಿ. ಹುದ್ದೆಗಳಿರುವುದು ಮೈಸೂರು ಒಂದೇ ಸಂಸ್ಥಾನದಲ್ಲಲ್ಲ. ಬಾಕಿ ಸಂಸ್ಥಾನಗಳಲ್ಲಿಯೂ ಇವೆ. ಈ ಅಧಿಕಾರಿಗಳಿಗೆ ನಿರ್ದಿಷ್ಟ ಕಾರ್ಯ ಜವಾಬ್ದಾರಿ ಇದೆಯೆಂಬುದನ್ನು ಮರೆಯಬಾರದು. ಈ ಎಲ್ಲ ದೃಷ್ಟಿಯಿಂದಲೂ, ನಾನು ಇಷ್ಟು ಮಾತ್ರ ಹೇಳುತ್ತೇನೆ, ಎಲ್ಲೆಲ್ಲಿ ಅನಾವಶ್ಯಕವಾದ ಖರ್ಚಿದೆಯೆಂದು ತೋರುತ್ತದೆಯೋ ಅಲ್ಲೆಲ್ಲಾ ಅದಕ್ಕೆ ಅವಕಾಶ ಕೊಡದೇ ಇರುವ ಹಾಗೆ, ದಕ್ಷತೆಯನ್ನು ಕಾಪಾಡಿಕೊಂಡು ನಡೆದುಕೊಳ್ಳಲು ಯಾವಾಗಲೂ ಸಿದ್ಧನಾಗಿದ್ದೇನೆ. ಇಷ್ಟು ವಿವರಣೆಯನ್ನು ನಾನು ಕೊಟ್ಟಿರುವ ದೃಷ್ಟಿಯಿಂದ ಈ ಖೋತಾ ಸೂಚನೆಯನ್ನು ಮಾನ್ಯ ಸ್ನೇಹಿತರು ವಾಪಸು ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

Sri. G. NARAYANA GOWDA.—I seek leave to withdraw my cut motion.

The Cut motion was by leave withdrawn.

Stagnation in the ranks of graduate Sub-Inspectors.

ಶ್ರೀ ಕೆ. ಪುಟ್ಟಸ್ವಾಮಿ (ಶ್ರೀರಂಗಪಟ್ಟಣ) —ಸ್ವಾಮಿ,

"29 ಪೋಲೀಸು'' ಎಂಬ ಬಾಬಿನಲ್ಲಿ ಕೋರಿರತಕ್ಕ 1,12,86,000 ರೂಪಾಯಿಗಳ 'ಡಿಮ್ಯಾಂಡ್' ಮನವಿಯ ಸಂಬಂಧದಲ್ಲಿ 100 ರೂಪಾಯಿಗಳನ್ನು ಕಡಿಮೆ ಮಾಡಬೇಕು (ಗ್ರಾಜುಯೇಟುಗಳಾಗಿ ಸಬ್-ಇನ್ಸ್ಪೆಕ್ಟರ ಹುದ್ದೆಯಲ್ಲಿರುವವರು, ಮೇಲಿನ ದರ್ಜೆಗೆ ಬಡ್ತಿ ಸಿಕ್ಕದೆ ತಟಸ್ಥರಾಗಿ ಆ ಹುದ್ದೆಯಲ್ಲಿಯೇ ಇದ್ದುಕೊಂಡು ಬಂದಿರುವ ವಿಚಾರವಾಗಿ ಚರ್ಚೆ ನಡೆಯುವಂತೆ ಮಾಡುವುದಕ್ಕಾಗಿ)''.

ಈ ಖೋತಾ ನಿರ್ಣಯವನ್ನು ಸಭೆಯ ಮುಂದೆ ಮಂಡಿಸಲಿಚ್ಛಿಸುತ್ತೇನೆ ಪೋಲೀಸ್ ಇಲಾಖೆಯನ್ನು ಪುನರ್ವ್ಯವಸ್ಥೆಮಾಡಿದಾಗ ಅಂದಿದ್ದ ಐ. ಜಿ. ಪಿ. ಹ್ಯಾಮಿಲ್‌ಟನ್‌ರವರು, ಸಬ್ ಇನ್ಸ್ಪೆಕ್ಟರಾಗಿ ಕೆಲಸಕ್ಕೆ ಸೇರಿದ ಪದವೀಧರರು ಮುಂದೆ ಇನ್ಸ್ಪೆಕ್ಟರಾಗಿ, ಎ. ಎಸ್. ಪಿ. ಗಳಾಗಿ, ಡಿ. ಎಸ್. ಪಿ. ಗಳಾಗಿ ಹಾಗೂ ಐ. ಜಿ. ಪಿ. ಆಗಿ ಕೂಡ ಅಧಿಕಾರಕ್ಕೆ ಏರಲು, ಕೇವಲ ತರಪೇತಾಗಲೆಂದು ಪದವೀಧರರನ್ನು ಸಬ್ ಇನ್ಸ್ಪೆಕ್ಟರುಗಳಾಗಿ ನೇಮಕಮಾಡಿಕೊಳ್ಳುವ ಪದ್ಧತಿಯನ್ನು ಪ್ರಾರಂಭಮಾಡಿದರು. ಇಂಗ್ಲೆಂಡಿನಲ್ಲಿ ಪೋಲೀಸ್ ಇಲಾಖೆಯಲ್ಲಿ ಉನ್ನತ ಅಧಿಕಾರಿ ಕೂಡ ಮೊದಲು ಕಾನ್ಸ್ಟೇಬಲ್ ಆಗಿ ಕೆಲಸಮಾಡಬೇಕಾಗಿದೆ. ಹಾಗೆ ಸಬ್ ಇನ್ಸ್ಪೆಕ್ಟರ್ ಆಗಿ ಕೆಲಸ ಮಾಡಿದವರಿಗೆ ಆ ಪೋಲೀಸ್ ಇಲಾಖೆಯ ಎಲ್ಲ ಕೆಲಸಗಳಲ್ಲಿಯೂ ಚೆನ್ನಾಗಿ ಅನುಭವ ಬರುತ್ತದೆ. ಇಂಥವರು ಉನ್ನತ ಅಧಿಕಾರವನ್ನು ವಹಿಸಿದರೂ ಆ ಇಲಾಖೆಯಲ್ಲಿ ದಕ್ಷತೆಯಿಂದ ಕೆಲಸಮಾಡುವುದಕ್ಕೆ ಅನುಕೂಲವಾಗುತ್ತದೆಂಬ ಉದ್ದೇಶದಿಂದ, ಪದವೀಧರರನ್ನು ಹೀಗೆ ನೇಮಕಮಾಡಲಾಯಿತು. ಆದರೆ ಬರಬರುತ್ತ ಈ ಉದ್ದೇಶ ನೆರವೇರಲಿಲ್ಲ. ಸಬ್ ಇನ್ಸ್ಪೆಕ್ಟರಾದವರು ಇನ್ಸ್ಪೆಕ್ಟರಾಗುವುದೇ ಕಷ್ಟವಾಗಿದೆ. ಏಕೆಂದರೆ, ಎ. ಎಸ್. ಪಿ. ಹುದ್ದೆಗೇ ಕೆಲವರನ್ನು ನೇರವಾಗಿ ಪ್ರೊಬೇಷನರಾಗಿ ತೆಗೆದುಕೊಂಡು, ಅದರಲ್ಲಿಯೂ ಚಿಕ್ಕ ವಯಸ್ಸಿನವರು ಎ. ಎಸ್. ಪಿ., ಡಿ. ಎಸ್. ಪಿ. ಗಳಾಗಿ ಬಂದದ್ದರಿಂದ ಹೀಗಾಯಿತು. ಬಹಳ ಆಸೆಯನ್ನಿಟ್ಟುಕೊಂಡು, ತಾವು ಮುಂದೆ ಡಿ. ಎಸ್. ಪಿ. ಆಗಬಹುದು. ಇನ್ನೂ ದಕ್ಷತೆಯಿಂದ ಕೆಲಸಮಾಡಿದರೆ ಐ. ಜಿ. ಪಿ. ಕೂಡ ಆಗಬಹುದೆಂಬ ಆಶೆಯಿಂದ ಕೆಲಸಕ್ಕೆ ಸೇರಿದ ಪದವೀಧರರು ಸಬ್ ಇನ್ಸ್ಪೆಕ್ಟರಾಗಿಯೇ ಹತ್ತು ಹನ್ನೆರಡು ವರ್ಷದಿಂದ ಕೊಳೆಯುತ್ತಿರುವುದು ನನಗೆ ಗೊತ್ತಿದೆ. ಈಗ ಪೋಲೀಸ್ ಇಲಾಖೆಯನ್ನು ಪುನರ್ವ್ಯವಸ್ಥೆ ಮಾಡುವ ಕಾಲ ಸನ್ನಿಹಿತವಾಗಿದೆ. ಇಲ್ಲದಿದ್ದರೆ, ಇಲಾಖೆಗೆ ಆಶೆಯಿಂದ ಸೇರಿದ ಜನರು ನಿರಾಶರಾಗಿ ಕೆಲಸವನ್ನು ಸರಿಯಾಗಿ ಮಾಡದೆ, ಇಲಾಖೆಯ ದಕ್ಷತೆಗೆ ಊನ ಬರಬಹುದು. ಪೋಲೀಸ್ ಸಬ್ ಇನ್ಸ್ಪೆಕ್ಟರಾಗಿ ಈಗ 15 ವರ್ಷ ಸರ್ವೀಸ್ ಆದವರು ಕೇವಲ 70-80 ರೂಪಾಯಿಗಳ ಸಂಬಳದಲ್ಲೇ ಇರುತ್ತಾರೆ. ಮಾತನಾಡುವಾಗ ಲಂಚ ರುಷುವತ್ತಿದೆ, ಎಂದು ಮಾತನಾಡುತ್ತೇವೆ. ವಿಶ್ವವಿದ್ಯಾನಿಲಯದಲ್ಲಿ ಓದಿ ಪದವೀಧರರಾಗಿ ಸಂಸಾರವಂದಿಗರಾಗಿ ಅವರಿಗೆ ಬರುವ ಸಂಬಳದಲ್ಲಿ ಈಗಿನ ಪರಿಸ್ಥಿತಿಯಲ್ಲಿ ಜೀವನ ಸಾಗಿಸುವುದಕ್ಕೆ ಖಂಡಿತವಾಗಿ ಸಾಧ್ಯವಿಲ್ಲ. ಆದರೂ 1,12,86,000 ರೂಪಾಯಿ ಖರ್ಚಾಗುತ್ತಿದೆ. ಇದು ಜಾಸ್ತಿ, ಇದನ್ನು ಕಡಮೆಮಾಡಿಕೊಳ್ಳಬೇಕೆಂದು ಹೇಳಿದಿರಿ; ಇನ್ನೊಂದು ಕಡೆಬಂದರೆ 60—70 ರೂಪಾಯಿ ಕೊಡುತ್ತೀರಿ, ಸಂಬಳ ಹೆಚ್ಚುಮಾಡಿ ಎಂದು ಹೇಳುತ್ತೀರಿ ಇದು ಸರಿಯೆ ಎಂದು ಸರ್ಕಾರದವರು ಹೇಳಬಹುದು. ಹಾಗಲ್ಲ, ಈಗ ಮೈಸೂರು ಸಂಸ್ಥಾನದಲ್ಲಿ ಬಹಳಚಿಕ್ಕ administrative units ಮಾಡಿಕೊಂಡಿದ್ದಾರೆ. ಒಂದು ತಾಲ್ಲೂಕಿನಲ್ಲಿ ಒಬ್ಬರು ಅಥವಾ ಇಬ್ಬರು ಸಬ್‌ಇನ್ಸ್ಪೆಕ್ಟರುಗಳಿರುವ ಪದ್ಧತಿ ಇದೆ. ಸಂಖ್ಯೆಯನ್ನು ಕಡಿಮೆ ಮಾಡಿಕೊಂಡು, ಕೈತುಂಬ ಸಂಬಳಕೊಟ್ಟು ದಕ್ಷತೆಯ ಮಟ್ಟಹೆಚ್ಚಬೇಕೆಂದು ನಿರೀಕ್ಷೆಮಾಡಿದರೆ ಸರಿಯಾಗುತ್ತದೆಯೇ ವಿನಾ ಕೈತುಂಬ ಸಂಬಳಕೊಡದೆ 60 ರೂಪಾಯಿ ಸಂಬಳಕ್ಕೆ ಸೇರಿದರೆ 70ಕ್ಕೆ ಬರಬೇ

(ಶ್ರೀ ಕೆ. ಪುಟ್ಟಸ್ವಾಮಿ.)

ಕಾದರೆ ಹತ್ತು ಹದಿನೈದು ವರ್ಷ ಆಗುತ್ತದೆಂದರೆ ಇದರಿಂದ ದಕ್ಷತೆಯೇನು ಬಂದೀತು ? ಈಗ ಕೆಲವುದಿನಗಳ ಹಿಂದೆ ಸಬ್‌ಇನ್ಸ್‌ಪೆಕ್ಟರುಗಳಿಗೆ running scales ಕೊಟ್ಟಿದ್ದಾರೆ. ಅದನ್ನು ನೋಡಿದ್ದೇನೆ. ಅದು ಅಷ್ಟು ತೃಪ್ತಿಕರವಾಗಿಲ್ಲ. ಪೋಲೀಸ್ ಸಬ್‌ಇನ್ಸ್‌ಪೆಕ್ಟರು, ಎ.ಎಸ್.ಪಿ., ಡಿ.ಎಸ್.ಪಿ. ಇವರುಗಳಿಗೆ ಸಂಬಳದಲ್ಲಿ ಬಹಳ ಅಂತರವಿರಬಾರದು. ಈಗಲಾದರೋ ಒಬ್ಬ ಇನ್ಸ್‌ಪೆಕ್ಟರ ಸಂಬಳಕ್ಕೂ ಎ.ಎಸ್.ಪಿ.ಯ ಸಂಬಳಕ್ಕೂ ಡಿ. ಎಸ್. ಪಿ. ಯ ಸಂಬಳಕ್ಕೂ ಬಹಳ ಅಂತರವಿದೆ ; ಎ.ಎಸ್.ಪಿ.ಯ ಸಂಬಳಕ್ಕೂ ಹೆಚ್ಚು ಅಂತರವಿದೆ. ಅದರಲ್ಲಿಯೂ ಐ.ಪಿ.ಎಸ್. ಆದಮೇಲಂತೂ ಈ ಅಂತರ ಬಹಳ ಜಾಸ್ತಿಯಾಗಿದೆ. ಶ್ರೀಮಾನ್ ಸಿದ್ದವೀರಪ್ಪನವರ ಮಾತಿನಲ್ಲೇ ಹೇಳುವುದಾದರೆ, ಅಜಗಜಾಂತರ ವ್ಯತ್ಯಾಸವಿದೆ. ಒಂದೇ ಇಲಾಖೆಯಲ್ಲಿ ಸಂಬಳದಲ್ಲಿ ಹೆಚ್ಚು ವ್ಯತ್ಯಾಸವಿರಬಾರದು. ಇದರಿಂತ ದಕ್ಷತೆಗೆ ಊನ ಬಂದಿದೆ. ಸಬ್‌ಇನ್ಸ್‌ಪೆಕ್ಟರ ಕೆಲಸಕ್ಕೆ ಸೇರಿದವರು ಐ.ಜಿ.ಪಿ. ಆಗುವುದಕ್ಕೂ ಕೂಡ ಅವಕಾಶವಿರುವಂತೆ ನಮ್ಮ ವ್ಯವಸ್ಥೆಮಾಡಬೇಕೆಂಬುದನ್ನು ಸರ್ಕಾರಕ್ಕೆ ತಿಳಿಸುವ ಉದ್ದೇಶದಿಂದ ಈ ಖೋತಾ ನಿರ್ಣಯವನ್ನು ಸಭೆಯ ಮುಂದಿಟ್ಟಿರುತ್ತೇನೆ.

Mr. SPEAKER.—Cut motion moved :

"That the demand be reduced by Rs. 100."

ಶ್ರೀ ಎಚ್. ಸಿದ್ದವೀರಪ್ಪ (ಒಳಾಡಳಿತ ಮತ್ತು ಕೈಗಾರಿಕೆ ಶಾಖೆಗಳ ಮಂತ್ರಿಗಳು).—ಸ್ವಾಮಿ, ಮಾನ್ಯ ಮಿತ್ರರಾದ ಶ್ರೀಪುಟ್ಟಸ್ವಾಮಿಯವರು ಹೇಳಿರತಕ್ಕಂಥ ಅಂಶದ ತತ್ವವು ಬಹಳಮಟ್ಟಿಗೆ ಒಪ್ಪಲು ಅರ್ಹವಾದುದು. ಈ ವಿಚಾರದಲ್ಲಿ ಸ್ಥಳದ ಅನುಭವವಿರುವ ಪ್ರಕಾರ ಕೆಲವು ವಿಷಯಗಳನ್ನು ತಿಳಿದುಕೊಂಡಿದ್ದೇವೆ. ಪೋಲೀಸು ಆಡಳಿತ ಮುಖ್ಯವಾಗಿ ಒಂದು ತಾಲ್ಲೂಕಿನಲ್ಲಿ ಅಥವಾ ಹೋಬಳಿಯಲ್ಲಿದ್ದರೆ ಅಲ್ಲಿ ಯಾವ ರೀತಿ ಸಬ್‌ಇನ್ಸ್‌ಪೆಕ್ಟರು ಕೆಲಸಮಾಡುತ್ತಾನೋ ಅದರ ಮೇಲೆ ಇಡೀ ಇಲಾಖೆಯ ಆಗುಹೋಗು ಅವಲಂಬಿಸಿಕೊಂಡಿರುತ್ತದೆಂದು ಹೇಳಿದರೆ ಎಲ್ಲರೂ ಒಪ್ಪುವರು. ಸಾಮಾನ್ಯವಾಗಿ ಸಬ್‌ಇನ್ಸ್‌ಪೆಕ್ಟರ ಕೆಲಸ ಗುರುತರವಾದ ಜವಾಬ್ದಾರಿಯಿಂದ ಕೂಡಿದೆ ದೊಡ್ಡದೊಡ್ಡ ಕಾಗ್ನಿಜಬಲ್ ಕೇಸುಗಳ ಇನ್‌ವೆಸ್ಟಿಗೇಷನ್ ಕಾನೂನು ಪ್ರಕಾರ ಅವರಿಗೆ ವಹಿಸಿದೆ, ಸಂಬಳ ಸಾರಿಗೆಯಲ್ಲಿ ಅಷ್ಟು ದೊಡ್ಡ ವ್ಯತ್ಯಾಸವಿರಬಾರದೆಂಬುದು ಅಂಗೀಕಾರಕ್ಕೆ ಅರ್ಹವಾದ ತತ್ವ. ಆ ದೃಷ್ಟಿಯಿಂದಲೇ ಶ್ರೀ ಪುಟ್ಟಸ್ವಾಮಿಯವರು ಹೇಳುವ ಹಾಗೆ, ಹಿಂದೆ ಹ್ಯಾಮಿಲ್ಟನ್‌ರವರು ಐ.ಜಿ.ಪಿ. ಆಗಿದ್ದಾಗ, ಗ್ರ್ಯಾಜುಯೇಟುಗಳನ್ನು ಸಬ್ ಇನ್ಸ್‌ಪೆಕ್ಟರ್ ಕೆಲಸಕ್ಕೆ ತೆಗೆದುಕೊಂಡರೆ ಆಡಳಿತದಲ್ಲಿ ದಕ್ಷತೆ ಚೆನ್ನಾಗಿರುತ್ತದೆಯೆಂದು ಮಾಡಿರುವುದು ನಿಜ. ನನ್ನ ಅನುಭವದಲ್ಲಿ ಸಹ ಎಲ್ಲೆಲ್ಲಿ ಪದವೀಧರರು ಸಬ್ ಇನ್ಸ್‌ಪೆಕ್ಟರಾಗಿದ್ದಾರೋ ಅಲ್ಲಿ ಕೆಲಸ ಚೆನ್ನಾಗಿ ನಡೆಯುತ್ತದೆ, ಕಾರ್ಯ ನಿರ್ವಹಣೆ ಚೆನ್ನಾಗಿ ಮಾಡುತ್ತಿದ್ದಾರೆ ಎಂದು ಕಂಡುಬಂದಿದೆ. ಆಡಳಿತ ವರದಿಗಳಿಂದಲೂ, ಅವರು ಮಾಡುವ ಕಾರ್ಯಕ್ರಮದಿಂದಲೂ ಇದು ಗೊತ್ತಾಗುತ್ತದೆ. ಪುಟ್ಟಸ್ವಾಮಿಯವರು ಹೇಳಿದ ಹಾಗೆ ಮೊದಲು ನಾಲ್ಕು ಗ್ರೇಡುಗಳಿದ್ದವು. ಮೊದಲನೆಯ ಗ್ರೇಡಿಗೆ 120 ರೂಪಾಯಿ, ಎರಡನೆಯದಕ್ಕೆ 100 ರೂಪಾಯಿ, ಮೂರನೆಯದಕ್ಕೆ 80, ನಾಲ್ಕನೆಯದಕ್ಕೆ 70 ರೂಪಾಯಿ, ಹೀಗೆ ನಾಲ್ಕು ಗ್ರೇಡುಗಳಿದ್ದವು. ಆದರೆ 3 ಮತ್ತು 4ನೆಯ ಗ್ರೇಡುಗಳಲ್ಲಿರುವ ಗ್ರ್ಯಾಜುಯೇಟುಗಳಿಗೆ ಜಾಗ್ರತೆ ಬಡ್ತಿಸಿಕ್ಕದೆ ಸ್ಟ್ಯಾಗ್ನೇಟ್ ಆಗುವುದರಿಂದ ಜುಗುಪ್ಸೆ ಅಥವಾ ಬೇಜಾರಾಗುತ್ತದೆ ಎಂದು ಹೇಳಿದರೆ ತಪ್ಪಲ್ಲ. ಆಗ ಆ ಸಂದರ್ಭವಿದ್ದುದನ್ನು ಸರ್ಕಾರದವರು ಮನಗಂಡು, ಈ ದೃಷ್ಟಿಯಿಂದ ಬಹಳ ನಿಸ್ವಾರ್ಥತೆಯಿಂದ ಸೇವೆಮಾಡತಕ್ಕಂಥ ನೌಕರರಿಗೆ ತೊಂದರೆಯಾಗಿದೆಯೆಂದು ತಿಳಿದು, ಸಮರ್ಪಕವಾದ ರೀತಿಯಲ್ಲಿ ಚಾಲತಿ ಸಾಲಿನಲ್ಲಿ ಸರ್ಕಾರದವರು ಒಂದು ಸರ್ಕಾರಿ ಆಜ್ಞೆಯನ್ನುಮಾಡಿದ್ದಾರೆ ಅದರ ಪ್ರಕಾರ 70—4—90—90—5—120—120—6—150 ಈ ರೀತಿಯ ಒಂದು ರನಿಂಗ್ ಗ್ರೇಡನ್ನು ಕೊಟ್ಟು ಎಲ್ಲೂ ಸ್ಟ್ಯಾಗ್ನೇಟ್ ಆಗದ ಹಾಗೆ ಸರಿಯಾದ ಒಂದು ಆಜ್ಞೆಯನ್ನುಮಾಡಿದ್ದೇವೆ. ಇದು ಯಾವ ಸಮಯದಲ್ಲಿ ಮಾಡಿರುವುದು ಎಂಬುದನ್ನು ಸಹ ದಯವಿಟ್ಟು ಸಭೆ ಯೋಚನೆಮಾಡಬೇಕು. ಅದನ್ನುಮಾಡಿರುವ ಸಂದರ್ಭವನ್ನು ಸಭೆಯ ಮುಂದಿಡುತ್ತೇನೆ. ಈ ರೀತಿಯಲ್ಲಿ ಮಾಡಿದ್ದರಿಂದ ಯಾವ ರೀತಿಯ ಹೆಚ್ಚಿನ ಹಣಕಾಸಿನ ಹೊರೆಯೂ ಪ್ರಜೆಯ ಮೇಲೆ ಹಾಕಲ್ಪಟ್ಟಿಲ್ಲ; ಇರುವುದರಲ್ಲೇ, ಮಂಜೂರುಮಾಡಿಕೊಟ್ಟಿರುವ ಬಡ್ಜೆಟ್ಟಿನಲ್ಲೇ ಸರಿದೂಗಿಸಿದ್ದೇವೆ. ಹಣಕಾಸಿನ ಪರಿಸ್ಥಿತಿ ತೃಪ್ತಿಕರವಾಗಿಲ್ಲದಿದ್ದರೂ ಮಾಡಬೇಕಾದದ್ದು ಅತ್ಯಾವಶ್ಯಕ, ಅದನ್ನು ಮಾಡದಿದ್ದರೆ ಅವರಿಗೆ ಅನ್ಯಾಯವಾಗುತ್ತದೆ ಎಂಬ ದೃಷ್ಟಿಯಿಂದ ಮಾಡಿದ್ದೇವೆ. ಈ ರೀತಿಯಾಗಿ ಮಾಡಿರುವುದರಿಂದ ಬಹಳ ಮಟ್ಟಿಗೆ ಅವರಿಗಿದ್ದ ಕೊರತೆ ಕಡಮೆಯಾಗುತ್ತದೆಂಬ ನಂಬಿಕೆ ನನಗಿದೆ.

ಇನ್ನು ಎ.ಎಸ್.ಪಿ.ಗಳ ವಿಚಾರದಲ್ಲಿ ಐ.ಪಿ.ಎಸ್ ಆಫೀಸರುಗಳಿಗೆ ಸಂಬಳ ಬಹಳ ಜಾಸ್ತಿಯಾಗಿದೆಯೆಂದು ಹೇಳಿದರು. ಐ.ಪಿ.ಎಸ್ ಆಫೀಸರುಗಳ ವಿಷಯದಲ್ಲಿ ನಾವೇನೂ ಮಾಡುವ ಹಾಗಿಲ್ಲ. It is an integrated service. It is a service which has got a common scale throughout the length and breadth of the country. ಅದನ್ನನುಸರಿಸಿ ಒಂದು ಬೇರೆ ಗ್ರೇಡುಕೊಡಿ ಎಂದು ಹೇಳುವುದು ಸೂಕ್ತವಲ್ಲ; ಹಾಗೆ ಮಾಡುವುದಕ್ಕೆ ಸಾಧ್ಯವಿಲ್ಲ ಎಂದು ಕಂಡುಬಂದಿರುವುದರಿಂದ, ಏನೂ ಹೇಳುವುದಕ್ಕೆ ಸಾಧ್ಯವಾಗುವುದಿಲ್ಲ.

ಶ್ರೀ ಆರ್. ಅನಂತರಾಮನ್ (ಚಾಮರಾಜಪೇಟೆ).—ಹಣ ಉಳಿಸುವುದಕ್ಕೆ ಇಷ್ಟು ಐ.ಪಿ.ಎಸ್ ಅಧಿಕಾರಿಗಳು ಬೇಡವೆಂದು ಹೇಳಬಹುದಲ್ಲವೇ ?

ಶ್ರೀ ಎಚ್. ಸಿದ್ದವೀರಪ್ಪ.—ಮುಖ್ಯವಾಗಿ, ಒಂದು ರೀತಿಯಲ್ಲಿ ತೀರ್ಮಾನವಾಗಿದೆ. ಈಗ ಬೇಡವೆಂದು ಹೇಳುವುದು ಸುಲಭವಲ್ಲ. ಇನ್ನೊಂದು ಮುಖ್ಯ ಅಂಶವನ್ನು, ಅಂದರೆ ಪೋಲೀಸ್ ಇಲಾಖೆ ಜಮಾದಾರರು, ದಫೇದಾರರು, ಕಾನ್‌ಸ್ಟೇಬಲ್ಲುಗಳ ವಿಚಾರದಲ್ಲಿ ಯೋಚನೆಮಾಡಬೇಕಾದುದು ಇದೆ. ಈಗಿನ ಪ್ರಕೃತ ಪರಿಸ್ಥಿತಿಯಲ್ಲಿ ಏನನ್ನು ಮಾಡಬಹುದೆಂಬುದನ್ನು ಒಂದು ದೃಷ್ಟಿಯಿಂದ ಸರ್ಕಾರದವರು ತೀವ್ರವಾಗಿ ಆಲೋಚಿಸುತ್ತೇವೆ.

Mr. SPEAKER.—It refers to the Sub-Inspectors' grades.

ಶ್ರೀ ಎಚ್. ಸಿದ್ದವೀರಪ್ಪ.—Thank you, Sir. ಆದೃಷ್ಟಿಯಿಂದ ನಾವು ಯೋಚನೆಮಾಡಿದ್ದರಲ್ಲಿ ಈಗಿರತಕ್ಕಂಥ ವ್ಯವಸ್ಥೆ, ಹೊಸದಾಗಿ ಆಗಿರುವ ಸರ್ಕಾರಿ ಆರ್ಡರು, ಸಬ್‌ಇನ್ಸ್‌ಪೆಕ್ಟರುಗಳಿಗೆ ಬಹಳ ಮಟ್ಟಿಗೆ ತೃಪ್ತಿಕರವಾಗಿದೆಯೆಂದು ಕಂಡಿದೆ. ನನ್ನ ಮಾನ್ಯ ಮಿತ್ರರು

ಈ ಭರವಸೆಯಿಂದ, ಅಥವಾ ಈ ಸಮುಜಾಯಿಷಿಯಿಂದ, ತಮ್ಮ ಖೋತಾನಿರ್ಣಯವನ್ನು ವಾಪಸು ತೆಗೆದುಕೊಳ್ಳುತ್ತಾರೆಂದು ನಂಬಿದ್ದೇನೆ.

ಶ್ರೀ ವಿ. ಆರ್. ನಾಯ್ಡು.—ಐ.ಪಿ.ಎಸ್. ಪೋಲೀಸ್ ಆಫೀಸರಿಗೆ 800 ರೂಪಾಯಿ ಸಂಬಳ. ಬಾಕಿ ಎ. ಎಸ್. ಪಿ. ಗಳಿಗೆ 250—300 ರೂಪಾಯಿ ಸಂಬಳ ಇರುವುದರಿಂದ ಈ ವ್ಯತ್ಯಾಸವು ಅವರಲ್ಲಿ ಅಸಮಾಧಾನವುಂಟು ಮಾಡಿದೆ, ಇದನ್ನು ನಿವಾರಣೆಮಾಡಬೇಕು ಎಂಬುದನ್ನು ಮನಗಂಡಿದ್ದೀರಾ?

Mr. SPEAKER.—This is not the question hour.

Sri K. PUTTASWAMY.—I seek leave to withdraw my cut motion.

The Cut motion was, by leave, withdrawn.

Mr. SPEAKER.—All the cut motions are over. Now debate on the main motion, if need be.

ಶ್ರೀ ಕೆ. ಪುಟ್ಟಸ್ವಾಮಿ.—ವಿರೋಧ ಪಕ್ಷ ಸುಮ್ಮನಿರುವುದರಿಂದ ಕರ್ತವ್ಯಮಾಡಿದಹಾಗಾಗುವುದಿಲ್ಲ.

Sri J. MOHAMED IMAM.—Sir, in answer to that..........

Mr. SPEAKER.—No, you need not take notice of that. (Laughter) If any Hon'ble Member, irrespective of the party to which he belongs, desires to speak, he can do so, as there is still time. He can speak on the main motion.

None Rose.

Mr. SPEAKER.—There is no other speaker. The question is:

> "That a sum not exceeding Rs. 1,12,86,000 be granted to the Government to defray the charges which will come in course of payment during the year ending 31st day of March 1954, in respect of 'Police'."

The motion was adopted.

Mr. SPEAKER.—The House will now rise for the day to meet again at 8-30 A.M. tomorrow.

The House then adjourned at Three Minutes past Twelve of the Clock to meet again at Thirty Minutes past Eight of the Clock on Monday the 12th March 1953.

WD 4516—GPB—500—10-12-53.